ಕನ್ನಡ

# ಬಾಲಭಾರತಿ

## ಐದನೆಯ ಇಯತ್ತೆ



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರದ ಅನುಮತಿ ಕ್ರಮಾಂಕ: ಪ್ರಾಶಿಸಂ/೨೦೧೪-೧೫/೨೪೩/ಮಂಜೂರಿ/ಡ-೫೦೫/೩೯೫ ದಿನಾಂಕ:- ೨೦/೦೧/೨೦೧೫

AYH31M

ನಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.



# ಕನ್ನಡ

# ಬಾಲಭಾರತಿ

## ಐದನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - ೪

ಪ್ರಥಮಾವೃತ್ತಿ : ೨೦೧೫
ಪುನರ್ಮುದ್ರಣ : ೨೦೨೨

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-೪

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

| | | |
|---|---|---|
| **ಕನ್ನಡ ಭಾಷಾ ಸಮಿತಿ** | : | ಶ್ರೀ. ಶಿವಬಾಳ ಕೆ. ಗೋಲಿ, ಅಧ್ಯಕ್ಷ<br>ಶ್ರೀ. ರಾಜೇಂದ್ರ ಡಿ. ಪವಾರ, ಸದಸ್ಯ<br>ಶ್ರೀ. ಸಂಗೊಂಡಾ ಸಿ. ಮಾಳಿ, ಸದಸ್ಯ<br>ಶ್ರೀ. ಹಣಮಂತ ಎಮ್. ಕುಂಭಾರ , ಸದಸ್ಯ<br>ಶ್ರೀಮತಿ. ಜಯದೇವಿ ಆಯ್. ಉಕ್ಕಲಿ , ಸದಸ್ಯೆ<br>ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ-ಸಚಿವರು |
| **ಕನ್ನಡ ಕಾರ್ಯಗಟ ಸದಸ್ಯರು** | : | ಶ್ರೀ. ಜಿ. ಡಿ. ಮೋರೆ<br>ಶ್ರೀ. ಬಿ. ಎಸ್. ಕಾಪಸೆ<br>ಶ್ರೀ. ಟಿ. ವ್ಹಿ. ಸದಾನಂದ<br>ಶ್ರೀಮತಿ. ಶರ್ಮಿಳಾ ಎಸ್. ಶೆಟ್ಟಿ<br>ಶ್ರೀಮತಿ. ಜಯಶ್ರೀ ಎಸ್. ಸ್ವಾಮಿ<br>ಶ್ರೀ. ಶ್ರೀಶೈಲ ಜಿ. ಅವಟಿ |
| **ಸಂಯೋಜನ ಪ್ರಮುಖ** | : | ಡಾ. ಸದಾನಂದ ಎಂ. ಬಿಳ್ಳೂರ, ವಿಶೇಷಾಧಿಕಾರಿಗಳು ಕನ್ನಡ, ಪಾಠ್ಯಪುಸ್ತಕ ಮಂಡಳ, 'ಬಾಲಭಾರತಿ', ಪುಣೆ-೪<br>ಶ್ರೀ. ಆರ್. ಎಮ್. ಗಣಾಚಾರಿ, ವಿಷಯ ಸಹಾಯಕ ಕನ್ನಡ |
| **ಚಿತ್ರಕಾರ** | : | ಶ್ರೀ. ಕಿಶೋರ ಗಿರಧಾರಿ |
| **ಮುಖಪುಟ** | : | ರೆಶ್ಮಾ ಬರ್ವೆ |
| **ಅಕ್ಷರ ಜೋಡಣೆ** | : | ಸಮರ್ಥ ಗ್ರಾಫಿಕ್ಸ್, 522 ನಾರಾಯಣ ಪೇಠ, ಪುಣೆ-411030 |
| **ನಿರ್ಮಿತಿ** | : | ಶ್ರೀ. ಸಚ್ಚಿತಾನಂದ ಆಫಳೆ, ಮುಖ್ಯ ನಿರ್ಮಿತಿ ಅಧಿಕಾರಿ<br>ಶ್ರೀ. ಸಚಿನ ಮೆಹತಾ, ನಿರ್ಮಿತಿ ಅಧಿಕಾರಿ<br>ಶ್ರೀ. ನಿತಿನ ವಾಣಿ, ನಿರ್ಮಿತಿ ಸಹಾಯಕ |
| **ಕಾಗದ** | : | ೭೦ ಜಿ. ಎಸ್. ಎಮ್. ಕ್ರಿಮವ್ಹೋವ್ಹ್ |
| **ಮುದ್ರಣಾದೇಶ** | : | N/PB/2021-22/4,000 |
| **ಮುದ್ರಕ** | : | M/S. S GRAPHIX (I) PVT. LTD., THANE |
| **ಪ್ರಕಾಶಕ** | : | ಶ್ರೀ. ವಿವೇಕ ಗೋಸಾವಿ, ನಿಯಂತ್ರಕ<br>ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ-೨೫. |

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ವೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

‘ಬಾಲಕರ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಅಧಿಕಾರ ಅಧಿನಿಯಮ - ೨೦೦೯’ ಮತ್ತು ‘ರಾಷ್ಟ್ರೀಯ ಶೈಕ್ಷಣಿಕ ರೂಪರೇಷೆ - ೨೦೦೫’ ಇವುಗಳನ್ನು ಮುಂದಿಟ್ಟುಕೊಂಡು ರಾಜ್ಯದಲ್ಲಿ ‘ಪ್ರಾಥಮಿಕ ಶಿಕ್ಷಣ ಅಭ್ಯಾಸಕ್ರಮ - ೨೦೧೨’ ನ್ನು ಸಿದ್ಧಪಡಿಸಲಾಯಿತು. ಈ ಸರಕಾರಮಾನ್ಯ ಅಭ್ಯಾಸಕ್ರಮದ ಮೇಲೆ ಆಧಾರಿತವಾದ ಐದನೆಯ ಇಯತ್ತೆಯ ಕನ್ನಡ ಬಾಲಭಾರತಿ ಪುಸ್ತಕವನ್ನು ಪಾಠ್ಯಪುಸ್ತಕ ಮಂಡಳವು ಸಿದ್ಧಪಡಿಸಿದೆ. ಈ ಪಠ್ಯಪುಸ್ತಕವನ್ನು ತಮ್ಮ ಕೈಯಲ್ಲಿಡಲು ನಮಗೆ ಆನಂದವೆನಿಸುತ್ತದೆ.

ಪ್ರಸ್ತುತ ಪುಸ್ತಕದಲ್ಲಿ ಕೃತಿಪ್ರಧಾನ ಹಾಗೂ ಜ್ಞಾನರಚನಾವಾದದ ಮೇಲೆ ಹೆಚ್ಚು ಒತ್ತು ಕೊಡಲಾಗಿದ್ದು, ಮಕ್ಕಳ ವಯೋಮಾನ ಮತ್ತು ಭಾವವಿಶ್ವಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳಿಗೆ ಪೂರಕವೆನಿಸುವಂತಹ ಗದ್ಯ-ಪದ್ಯಗಳನ್ನು ಇಲ್ಲಿ ಸಮಾವೇಶ ಮಾಡಲಾಗಿದೆ. ಅವರ ಭಾಷಾ ಶಿಕ್ಷಣವು ಮನೋರಂಜಕವೂ ಮತ್ತು ಆನಂದದಾಯಿಯೂ ಆಗಲೆಂದು ಬೇರೆ ಬೇರೆ ಪಕ್ಷಿಗಳ ಪರಿಚಯ, ಆತ್ಮಕತೆ, ನೀತಿಬೋಧಕ ಕಥೆ/ ಕವಿತೆಗಳನ್ನು ಕೊಡಲಾಗಿದೆ. ವೈಜ್ಞಾನಿಕ ಹಾಗೂ ದೇಶಭಕ್ತಿಪರವಾದ ಕವಿತೆ ಮೊದಲಾದವುಗಳನ್ನು ಇಲ್ಲಿ ಸೇರಿಸಲಾಗಿದೆ. ಆಯಾ ಪಾಠಕ್ಕೆ ತಕ್ಕಂತೆ ಯೋಗ್ಯವಾದ ಚಿತ್ರಗಳನ್ನು ಬಳಸಲಾಗಿದೆ. ಇವುಗಳ ಅಭ್ಯಾಸ ಚೆನ್ನಾಗಿ ಆಗಬೇಕೆಂಬ ಅಪೇಕ್ಷೆ ಇದೆ.

ಶಿಕ್ಷಕರಿಗೆ ಪ್ರಭಾವಶಾಲಿಯಾಗಿ ಅಧ್ಯಾಪನ ಮಾಡಲು ಬರಬೇಕೆಂದು ಪಠ್ಯಪುಸ್ತಕದ ರಚನೆಯನ್ನು ವೈಶಿಷ್ಟ್ಯಪೂರ್ಣವಾಗಿ ಮಾಡಲಾಗಿದೆ. ಪುಸ್ತಕದೊಳಗಿನ ಪಾಠಾಂಶವನ್ನು ಕಲಿಸುತ್ತಿರುವಾಗ ಯಾವ ರೀತಿ ಕಾಳಜಿ ವಹಿಸಬೇಕು ಎಂಬ ಸೂಚನೆಯನ್ನು ಆಯಾ ಪುಟದಲ್ಲಿ ಕೊಡಲಾಗಿದೆ. ಅದರ ಉಪಯೋಗ ಚೆನ್ನಾಗಿ ಆಗಬೇಕೆಂಬ ಅಪೇಕ್ಷೆ ಇದೆ.

ಕನ್ನಡ ಭಾಷಾ ಸಮಿತಿ, ಕಾರ್ಯಗಟ ಸದಸ್ಯರು ಹಾಗೂ ಚಿತ್ರಕಾರ ಇವರ ಪ್ರಾಮಾಣಿಕವಾದ ಪರಿಶ್ರಮದಿಂದ ಈ ಪುಸ್ತಕವು ಸಿದ್ಧವಾಗಿದೆ. ಈ ಪಠ್ಯಪುಸ್ತಕವು ದೋಷರಹಿತ ಮತ್ತು ಉತ್ತಮ ಗುಣಮಟ್ಟದ್ದು ಆಗಬೇಕೆಂಬ ಉದ್ದೇಶದಿಂದ ರಾಜ್ಯದ ವಿವಿಧ ಭಾಗಗಳಿಂದ ಆಯ್ದ ಪ್ರಾಥಮಿಕ ಶಾಲೆಯ ಶಿಕ್ಷಕರಿಂದ ಮತ್ತು ತಜ್ಞರಿಂದ ಈ ಪುಸ್ತಕದ ಸಮೀಕ್ಷಣೆಯನ್ನು ಮಾಡಿಸಲಾಗಿದೆ. ಸಮೀಕ್ಷಕರ ಸೂಚನೆ ಹಾಗೂ ಅಭಿಪ್ರಾಯಗಳನ್ನು

ಗಮನದಲ್ಲಿಟ್ಟುಕೊಂಡು ಕನ್ನಡ ಭಾಷಾ ಸಮಿತಿಯು ಪುಸ್ತಕಕ್ಕೆ ಅಂತಿಮ ಸ್ವರೂಪವನ್ನು ಕೊಟ್ಟಿದೆ.

ಕನ್ನಡ ಭಾಷಾ ಸಮಿತಿ ಹಾಗೂ ಕಾರ್ಯಗಟ ಸದಸ್ಯರು, ಸಮೀಕ್ಷಕರು, ತಜ್ಞರು, ಚಿತ್ರಕಾರ ಇವರೆಲ್ಲರಿಗೆ ಮಂಡಳವು ಮನ:ಪೂರ್ವಕವಾಗಿ ಆಭಾರಿಯಾಗಿದೆ. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪಾಲಕರು ಈ ಪುಸ್ತಕವನ್ನು ಸ್ವಾಗತಿಸುವರೆಂದು ಆಶಿಸಿದ್ದೇವೆ.



(ಚಂ. ರಾ. ಬೋರಕರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

ಪುಣೆ
ದಿನಾಂಕ : ೧೭ ಡಿಸೆಂಬರ ೨೦೧೪

# ಐದನೆಯ ಇಯತ್ತೆ - ಕನ್ನಡ ಅಧ್ಯಯನ ನಿಷ್ಪತ್ತಿಗಳು


| ಅಧ್ಯಯನದಲ್ಲಿ ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆಗಳು | ಅಧ್ಯಯನ ನಿಷ್ಪತ್ತಿಗಳು |
|---|---|
| **ಎಲ್ಲ ವಿದ್ಯಾರ್ಥಿಗಳಿಗೆ (ಬೇರೆ ಬೇರೆ ರೂಪದಲ್ಲಿ ಸಕ್ಷಮ ಮಕ್ಕಳು ಸಹಿತ) ವೈಯಕ್ತಿಕ ಅಥವಾ ಸಾಮೂಹಿಕ ಸ್ವರೂಪದಲ್ಲಿ ಪ್ರೋತ್ಸಾಹನೆ ನೀಡಬೇಕು. ಕಾರಣ ಅವರಿಗೆ-**<br>• ವಿವಿಧ ವಿಷಯಗಳು, ಪರಿಸ್ಥಿತಿ, ಘಟನೆಗಳು, ಅನುಭವಗಳು, ಕಥೆ, ಕವಿತೆ ಇತ್ಯಾದಿ ಸ್ವಂತ ಪದ್ಧತಿಯಿಂದ ಮತ್ತು ತಮ್ಮ ಭಾಷೆಯಲ್ಲಿ (ಮೌಖಿಕ/ಲಿಖಿತ/ಸಾಂಕೇತಿಕ ಸ್ವರೂಪದಲ್ಲಿ) ಹೇಳುವದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಇವೆಲ್ಲವುಗಳಿಗೆ ಸ್ವಾಮಿತ್ವ ಕೊಡಬೇಕು.<br>• ಗ್ರಂಥಾಲಯ/ವರ್ಗದಲ್ಲಿ ಬೇರೆ-ಬೇರೆ ಪ್ರಕಾರದ ಕಥೆಗಳು, ಕವಿತೆಗಳು ಅಥವಾ ಬಾಲಸಾಹಿತ್ಯ, ಸ್ತರಾನುಸಾರ ಇತರ ಸಾಹಿತ್ಯ, ಫಲಕ, ವರ್ತಮಾನಪತ್ರಿಕೆಗಳಲ್ಲಿಯ ಕತ್ತರಿಸಿದ ಭಾಗ ಉಪಲಬ್ಧವಿರಬೇಕು ಮತ್ತು ಇವುಗಳನ್ನು ಕುರಿತು ಚರ್ಚಿಸಲು ಅವಕಾಶ ಕಲ್ಪಿಸುವದು.<br>• ಬೇರೆ-ಬೇರೆ ಕಥೆ, ಕವಿತೆ, ಫಲಕ ಇತ್ಯಾದಿ ಸಂದರ್ಭಾನುಸಾರ ಓದಿ ತಿಳಿಯುವದು-ತಿಳಿಸುವದು, ಇವುಗಳಿಗಾಗಿ ಅವಕಾಶ ಕೊಡುವದು.<br>• ಆಲಿಸಿದ, ನೋಡಿದ, ಓದಿದ ಸಂಗತಿಗಳನ್ನು ತಮ್ಮ ಪದ್ಧತಿಯಿಂದ ತಮ್ಮದೇ ಆದ ಭಾಷೆಯಲ್ಲಿ ಬರೆಯಲು ಅವಕಾಶ ಕೊಡುವದು.<br>• ಅವಶ್ಯಕತೆಯನುಸಾರ ಮತ್ತು ಸಂದರ್ಭಾನುಸಾರ ತಮ್ಮ ಭಾಷೆ ತಿಳಿದುಕೊಳ್ಳುವ (ಹೊಸ ಶಬ್ದಗಳು/ವಾಕ್ಯಗಳು ಇತ್ಯಾದಿ) ಮತ್ತು ಅವುಗಳನ್ನು ಬಳಸುವ ಅವಕಾಶ ಒದಗಿಸುವದು.<br>• ಪರಸ್ಪರರು ಬರೆದ ವಿಷಯಗಳನ್ನು ಕೇಳುವದು, ಓದುವದು ಮತ್ತು ಅವುಗಳನ್ನು ನೀಡುವದು, ಅದರಲ್ಲಿ ತಮ್ಮ ವಿಚಾರಗಳನ್ನು ಅಳವಡಿಸಿ ವಿವಿಧ ಪ್ರಕಾರದಿಂದ ಬರೆಯಲು ಅವಕಾಶ ಕಲ್ಪಿಸುವದು.<br>• ಸುತ್ತಮುತ್ತಲು ನಡೆಯುವ ಕ್ರಿಯೆಗಳು ಘಟನೆಗಳು ಇವುಗಳನ್ನು ಗಮನದಲ್ಲಿರಿಸಿಕೊಂಡು ಪ್ರಶ್ನೆಗಳನ್ನು ಕೇಳುವದು, ಮಕ್ಕಳೊಂದಿಗೆ ಚರ್ಚೆ ಮಾಡುವದು, ಟಿಪ್ಪಣಿಗಳನ್ನು ತಯಾರಿಸುವದು, ಅಭಿಪ್ರಾಯ ವ್ಯಕ್ತಪಡಿಸುವದು ಇವುಗಳಿಗೆ ಅವಕಾಶ ಕೊಡುವದು.<br>• ಆಶಯದ ಸಂದರ್ಭದಿಂದ ಉಪಯೋಗಕ್ಕೆ ಬರುವ ಭಾಷೆಯ ಸೂಕ್ಷ್ಮತೆ ಮತ್ತು ನಿಯಮಬದ್ಧ ಮಂಡನೆ ತಿಳಿದುಕೊಳ್ಳುವ ಮತ್ತು ಅದನ್ನು ಬಳಕೆ ಮಾಡುವ ಅವಕಾಶ ಒದಗಿಸುವದು.<br>• ಹೊಸ ಶಬ್ದ ಚಿತ್ರ-ಶಬ್ದಕೋಶ ಇವುಗಳೊಳಗಿಂದ ನೋಡುವ ಅವಕಾಶ ಒದಗಿಸುವದು.<br>• ಇತರ ವಿಷಯಗಳು, ವ್ಯವಸಾಯ, ಕಲೆ, ಇತ್ಯಾದಿಗಳಲ್ಲಿ (ಉದಾ:ಗಣಿತ, ವಿಜ್ಞಾನ, ಸಾಮಾಜಿಕ ಅಭ್ಯಾಸ, ನೃತ್ಯಕಲೆ ಚಿಕಿತ್ಸೆ ಇತ್ಯಾದಿ) ಬರುವ ಶಬ್ದಗಳನ್ನು ತಿಳಿಯುವದು ಮತ್ತು ಅವುಗಳನ್ನು ಸಂದರ್ಭಾನುಸಾರವಾಗಿ ಬಳಕೆ ಮಾಡುವದು ಇದಕ್ಕೆ ಅವಕಾಶ ನೀಡುವದು.<br>• ಪಠ್ಯಪುಸ್ತಕ ಮತ್ತು ಅದಕ್ಕೆ ಸಂಬಂಧಿತ ಇತರ ಸಾಹಿತ್ಯದಲ್ಲಿ ಬಂದಿರುವ ನೈಸರ್ಗಿಕ, ಸಾಮಾಜಿಕ ಮತ್ತು ಇತರ ಸಂವೇದನಶೀಲ ಅಂಶಗಳನ್ನು ತಿಳಿದುಕೊಂಡು ಅವುಗಳನ್ನು ಕುರಿತು ಚರ್ಚೆ ಮಾಡಲು ಅವಕಾಶ ಒದಗಿಸುವದು. | **ಅಧ್ಯಯನಾರ್ಥಿಗಳು.**<br>05.06.01 ಆಲಿಸಿದ, ಓದಿದ ಸಾಹಿತ್ಯದಲ್ಲಿಯ ವಿಷಯಗಳು (ಹಾಸ್ಯ, ಸಾಹಸ, ಸಾಮಾಜಿಕ ವಿಷಯಗಳ ಕುರಿತು ಕಥೆಗಳು, ಕವಿತೆಗಳು ಇತ್ಯಾದಿಗಳಲ್ಲಿಯ) ಘಟನೆ, ಚಿತ್ರ, ಪಾತ್ರ, ಶೀರ್ಷಿಕೆ ಇವುಗಳನ್ನು ಕುರಿತು ಚರ್ಚಿಸುವನು, ಸ್ವತಂತ್ರ ಅಭಿಪ್ರಾಯ ನೀಡುವನ್ನು, ಪ್ರಶ್ನೆಗಳನ್ನು ಕೇಳುವನು, ತಮ್ಮ ಸ್ವತಂತ್ರ ಟಿಪ್ಪಣಿ ಕೊಡುವನು ತರ್ಕ ಮಾಡುವನು ಹಾಗೂ ನಿಷ್ಕರ್ಷ ತೆಗೆಯುವನು.<br>05.06.02 ತಮ್ಮ ಪರಿಸರದಲ್ಲಿ ನಡೆಯುವ ಪ್ರಸಂಗ, ಘಟನೆ ಇತ್ಯಾದಿಗಳ ಸೂಕ್ಷ್ಮ ನಿರೀಕ್ಷಣೆ ಮಾಡುವನು. ಅವುಗಳನ್ನು ಕುರಿತು ಮೌಖಿಕ ಪ್ರತಿಕ್ರಿಯೆ ವ್ಯಕ್ತಪಡಿಸುವನು, ಪ್ರಶ್ನೆಗಳನ್ನು ಕೇಳುವನು.<br>05.06.03 ಭಾಷೆಯ ನಿರೀಕ್ಷಣೆದೊಳಗಿಂದ ಸ್ವಂತದ ಮೌಖಿಕ ಭಾಷೆ ತಯಾರಿಸುವನು.<br>05.06.04 ವಿವಿಧ ಪ್ರಕಾರದ ಸಾಹಿತಿಯ (ಉದಾ:ವರ್ತಮಾನ ಪತ್ರಿಕೆಗಳು, ಬಾಲಸಾಹಿತ್ಯ, ಪೋಸ್ಟರ ಇತ್ಯಾದಿಗಳಲ್ಲಿಯ) ಕುರಿತು ಸಂವೇದನಶೀಲತೆ ವ್ಯಕ್ತಪಡಿಸುವನು. ಅಂಶಗಳ ಮೇಲೆ ತಮ್ಮ ಅಭಿಪ್ರಾಯ/ವಿಚಾರ ವ್ಯಕ್ತಪಡಿಸುವನು. ಉದಾ: ಕಠಿಣ ಸಮಯ ಬಂದಾಗ ಮಕ್ಕಳು ಇದನ್ನು ಓದಿ ಅನ್ನುತ್ತಾರೆ ನಾವು ಯಾವಾಗಲೂ ಇತರರಿಗೆ ಸಹಾಯ ಮಾಡುತ್ತೇವೆ.<br>05.06.05 ಭಿನ್ನ ಪರಿಸ್ಥಿತಿಯಲ್ಲಿಯ ಉದ್ದೇಶಗಳನುಸಾರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದು ಉದಾ: ಫಲಕದ ಮೇಲಿನ ಸೂಚನೆ, ಕಾರ್ಯವರದಿ ಇತ್ಯಾದಿಗಳ ದೊರೆಯುವ ಸಲುವಾಗಿ ಓದುತ್ತಾರೆ, ಬರೆಯುತ್ತಾರೆ. ತಮ್ಮ ಪಠ್ಯಪುಸ್ತಕ ಆಧಾರದಿಂದ, ಇತರ ಸಾಹಿತ್ಯ (ವರ್ತಮಾನ ಪತ್ರಿಕೆಗಳು, ಬಾಲಸಾಹಿತ್ಯ, ದೊಡ್ಡ ಫಲಕಗಳು ಇತ್ಯಾದಿ) ತಿಳಿದುಕೊಂಡು ಓದುವನು, ಅವುಗಳನ್ನು ಕುರಿತು ಮಾತಾಡುವನು.<br>05.06.06 ಅಪರಿಚಿತ ಶಬ್ದಗಳ ಅರ್ಥ ಶಬ್ದಕೋಶದಲ್ಲಿ ಹುಡುಕುವನು.<br>05.06.07 ಸ್ವಂತದ ಇಚ್ಛೆಯಿಂದ ಅಥವಾ ಶಿಕ್ಷಕರು ಹೇಳಿದ ಕೃತಿ ಅಂತರ್ಗತ ಲೇಖನಕಾರ್ಯ ಉತ್ತಮ ರೀತಿಯಲ್ಲಿ, ತಿಳಿದುಕೊಂಡು ಮಾಡುವನು, ಸ್ವಂತದ ಲೇಖನದ ಚಿಕಿತ್ಸೆ ಮಾಡುವನು, ಲೇಖನ ಉದ್ದೇಶಗಳನುಸಾರ ಅವಶ್ಯಕ ಬದಲಾವಣೆ ಮಾಡುವನು. ಉದಾ:ಯಾವುದೊಂದು ಘಟನೆಯ ಬಗ್ಗೆ ಮಾಹಿತಿ ಹೇಳಲು ಶಾಲೆಯ ಭಿತ್ತಿಪತ್ರಿಕೆಯ ಮೇಲೆ ಲೇಖನ ಮಾಡುವನು ಅಥವಾ ಗೆಳೆಯನಿಗೆ ಪತ್ರ ಬರೆಯುವನು.<br>05.06.08 ಭಾಷೆಯಲ್ಲಿಯ ಸೂಕ್ಷ್ಮತೆಗಳು, ನಿಯಮ ಇತ್ಯಾದಿಗಳ ವಿಚಾರ ಮಾಡಿ ಸ್ವಂತದ ಭಾಷೆ ತಯಾರಿಸುವನು ಮತ್ತು ಅದನ್ನು ಲೇಖನದಲ್ಲಿ ಸಮಾವೇಶ ಮಾಡುವನು, ಅದರಂತೆ ಬ್ರೆಲ ಲಿಪಿಯಲ್ಲಿ ಬರೆಯುವನು.<br>05.06.09 ಭಾಷೆಯ ವ್ಯಾಕರಣದ ವಿವಿಧ ಘಟಕಗಳನ್ನು (ಉದಾ:ವಿರಾಮಚಿಹ್ನೆ, ಕ್ರಿಯಾಪದ, ಲಿಂಗ, ವಚನ, ಜೋಡುಶಬ್ದಗಳು ಇತ್ಯಾದಿ) ಗುರುತಿಸುವನು ಹಾಗೂ ಅವುಗಳನ್ನು ಲೇಖನ ಕಾರ್ಯದಲ್ಲಿ ಯೋಗ್ಯ ಬಳಕೆ ಮಾಡುವನು.<br>05.06.10 ಭಿನ್ನ ಉದ್ದೇಶಗಳಿಗಾಗಿ ಸಂದರ್ಭಾನುಸಾರ ಲೇಖನ ಮಾಡುವಾಗ ಅವುಗಳನ್ನು ಕುರಿತು ಎಚ್ಚರಿಕೆಯಿಂದ ಲೇಖನ ಮಾಡುವನು. ಉದಾ: ಪೂರ್ಣವಿರಾಮ, ಸ್ವಲ್ಪವಿರಾಮ, ಅರ್ಧವಿರಾಮ, ಪ್ರಶ್ನೆಚಿಹ್ನೆ, ಉದ್ಗಾರಚಿಹ್ನೆ ಇತ್ಯಾದಿಗಳನ್ನು ಗಮದಲ್ಲಿಟ್ಟುಕೊಂಡು ಯೋಗ್ಯವಾಗಿ ಬಳಸುವನು.<br>05.06.11 ಸ್ತರಗಳನುಸಾರವಾಗಿ ಇತರ ವಿಷಯ, ವ್ಯವಸಾಯ, ಕಲೆ, ಉದಾ:ಗಣಿತ, ವಿಜ್ಞಾನ, ನೃತ್ಯಕಲೆ, ಸಾಮಾಜಿಕ ಅಭ್ಯಾಸ, ಚಿಕಿತ್ಸೆ ಇತ್ಯಾದಿಗಳಲ್ಲಿ ಬರುವ ಶಬ್ದಗಳ ಅರ್ಥ ತಿಳಿದುಕೊಂಡು ಲೇಖನದಲ್ಲಿ ಸಂದರ್ಭಾನುಸಾರ ಯೋಗ್ಯ ಬಳಕೆ ಮಾಡುವನು.<br>05.06.12 ತಮ್ಮ ಪರಿಸರದಲ್ಲಿ ನಡೆಯುವ ಘಟನೆಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ ಅವುಗಳನ್ನು ಕುರಿತು ಲಿಖಿತ ಸ್ವರೂಪದಲ್ಲಿ ಪ್ರತಿಕ್ರಿಯೆ ನೀಡುವನು.<br>05.06.13 ಪಠ್ಯಪುಸ್ತಕ ಮತ್ತು ಇತರ ಲೇಖನ ಪ್ರಕಾರಗಳಲ್ಲಿಯ ಸಂವೇದನಶೀಲ ವಿಷಯದ ಮೇಲೆ ಲಿಖಿತ ಸ್ವರೂಪದಲ್ಲಿ/ಬ್ರೆಲ ಲಿಪಿಯಲ್ಲಿ ಅಭಿವ್ಯಕ್ತಗೊಳ್ಳುವನು.<br>05.06.14 ತಮ್ಮ ಕಲ್ಪನೆಯಿಂದ ಕಥೆ, ಕವಿತೆ, ಪತ್ರ ಇತ್ಯಾದಿ ಬರೆಯುವನು. ಕಥೆ, ಕವಿತೆ ಇವುಗಳಲ್ಲಿ ಸ್ವಂತದ ಶಬ್ದಗಳನ್ನು ಬಳಕೆ ಮಾಡಿ ಲೇಖನ ಕಾರ್ಯ ಮಾಡುವನು. |

## ಪರಿವಿಡಿ


| ಅ.ಕ್ರಂ. | ಪಾಠಗಳು | ಕವಿ / ಲೇಖಕರು | ಪುಟ |
|---|---|---|---|
| ೧. | ಕನ್ನಡಾಂಬೆಯ ಹಿರಿಮೆ (ಕವಿತೆ) | ಖಾಜಾವಲಿ ಈಚನಾಳ | ೧ |
| ೨. | ಪ್ರಾಮಾಣಿಕತೆ | ಅಶೋಕ ಪಾಟೀಲ | ೩ |
| ೩. | ತಂದೆಯ ಸಲಹೆ | ಸುಧಾಮೂರ್ತಿ | ೭ |
| ೪. | ಆರೋಗ್ಯವೇ ಭಾಗ್ಯ (ಕವಿತೆ) | ---------- | ೧೧ |
| ೫. | ಕನಸಿನ ಗುಟ್ಟು | ಸೋಮಯಾಜಿ | ೧೩ |
| ೬. | ಕರುಣಾಮಯಿ | ರಘುಸುತ | ೧೮ |
| ೭. | ಅಮ್ಮನ ಹರಕೆ (ಕವಿತೆ) | ಜಾನಪದ | ೨೩ |
| ೮. | ಪುಣ್ಯಶ್ಲೋಕ ಅಹಿಲ್ಯಾಬಾಯಿ ಹೋಳಕರ | ಚಂದ್ರಕಾಂತ ಬಿಜ್ಜರಗಿ | ೨೫ |
| ೯. | ಪಕ್ಷಿಗಳು | ಎನ್.ಎನ್.ಮುಜುಮ್‌ದಾರ | ೩೧ |
| ೧೦. | ಬದುಕಿನ ಪಾಠ (ಕವಿತೆ) | ಕಿಗ್ಗಾಲು ಎಸ್. ಗಿರೀಶ್ | ೩೭ |
| ೧೧. | ಪತ್ರಲೇಖನ | ---------- | ೩೯ |
| ೧೨. | ಸರಕಾರಿ ಬಸ್ಸಿನ ಆತ್ಮಕಥೆ | ---------- | ೪೪ |
| ೧೩. | ಬಯಕೆ (ಕವಿತೆ) | ---------- | ೫೦ |
| ೧೪. | ಡಾ. ಹೋಮಿ ಜಹಾಂಗೀರ ಬಾಬಾ | ಬಿ.ಎ.ರಂಗನಾಥ | ೫೨ |
| ೧೫. | ಪರಿಶ್ರಮ | ---------- | ೫೬ |
| ೧೬. | ನೇತಾಜಿ (ಕವಿತೆ) | ಪಳಕಳ ಸೀತಾರಾಮಭಟ್ಟ | ೬೦ |
| ೧೭. | ಸ್ವಾಮಿ ವಿವೇಕಾನಂದರು | ಈಶ್ವರಚಂದ್ರ | ೬೨ |
| ೧೮. | ಸ್ಕೌಟ್ಸ್ ಮತ್ತು ಗೈಡ್ಸ್ | ಸರೋಜ ಎಸ್.ಪಡಗಾವಕರ | ೬೭ |
| ೧೯. | ಗುರು ವಂದನೆ (ಕವಿತೆ) | ಪ್ರಸನ್ನಾ ಚೆಕ್ಕೆಮನೆ | ೭೨ |
| ೨೦. | ಆದರ್ಶ ಸಹೋದರರು | ಬಿ.ಎಸ್. ಪಾಂಡುರಂಗರಾವ | ೭೪ |
| ೨೧. | ವನವಿಹಾರ (ಕವಿತೆ) | ಟಿ.ಎಸ್. ನಾಗರಾಜಶೆಟ್ಟಿ | ೭೯ |
| ೨೨. | ಅನ್ನದ ಮಹಿಮೆ | ---------- | ೮೨ |
| ೨೩. | ನವಯುಗಾದಿ (ಕವಿತೆ) | ಎಚ್.ಎಂ.ಮಾರುತಿ | ೮೭ |

# ೧. ಕನ್ನಡಾಂಬೆಯ ಹಿರಿಮೆ

ಕನ್ನಡಾಂಬೆಯ ಹಿರಿಮೆ
ನಾನೆನಿತು ಬಣ್ಣಿಸಲಿ
ಹಾರುತಿಹುದು ಕೇತನ
ಪಟಪಟನೆ ಗಗನದಲಿ ॥
ಹಸಿರು ಮುರಿಯುವ ಪೈರು
ಮನುಜನಾತ್ಮದ ಉಸಿರು
ಸಾಹಿತ್ಯ ಶಿಲ್ಪಕಲೆ ತವರು
ಹಂಪೆ... ಐಹೊಳೆ... ಬಿಜಾಪುರ ॥
ಶ್ರೀಗಂಧ ಸುಗಂಧದ ಕಂಪು
ಬೆಂದ ಹೃದಯಕೆ ತಂಪು
ದಾಸರ ಶರಣರ ಪೆಂಪು
ಆಲಿಪ ಮನಕೆ ಬಲು ಇಂಪು ॥
ಬುದ್ಧ-ಬಸವರ ವಚನ
ಒಳಿತು ಮಾರ್ಗದ ರಚನ
ಪಂಪ-ರನ್ನರ ಕವನ
ಅನುದಿನವೂ ನವೀನ ॥
ನಾಡು-ನುಡಿಯು ಚಂದ
ಪ್ರೀತಿ ಪ್ರೇಮದ ಬಂಧ
ತುಂಬಿದ ಎಲ್ಲೆಡೆ ಆನಂದ
ಸ್ಥಿರವಿರಲಿ ಸ್ನೇಹಾನುಬಂಧ ॥



**- ಖಾಜಾವಲಿ ಈಚನಾಳ**

**ಶಬ್ದಗಳ ಅರ್ಥ :**

ಹಿರಿಮೆ : ಶ್ರೇಷ್ಠತೆ ಕೇತನ : ಬಾವುಟ ; ಕಂಪು : ಸುವಾಸನೆ

ಬೆಂದ : ನೊಂದ ಪೆಂಪು : ಘನತೆ, ಗೌರವ ಆಲಿಪ : ಆಲಿಸು, ಕೇಳು

## ಅಭ್ಯಾಸ

**ಪ್ರಶ್ನೆ : ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕವಿಯು ಯಾರ ಹಿರಿಮೆ ಬಣ್ಣಿಸುತ್ತಿದ್ದಾರೆ ?

ಆ) ಸಾಹಿತ್ಯ-ಶಿಲ್ಪಕಲೆಗಳ ತವರೂರು ಯಾವವು ?

ಇ) ಬೆಂದ ಹೃದಯಕೆ ಯಾವುದು ತಂಪು ಎನಿಸುವದು ?

ಈ) ಅನುದಿನವೂ ಯಾರ ಕವನ ನವೀನವಾಗಿವೆ ?

ಉ) ಎಲ್ಲೆಡೆ ಏನು ತುಂಬಿದೆ ?

**ಪ್ರಶ್ನೆ : ೨) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣ ಮಾಡಿರಿ.**

ನಾಡು ನುಡಿಯು .................

.......................................

.......................................

.....................ಸ್ನೇಹಾನುಬಂಧ.

**ಪ್ರಶ್ನೆ : ೩) ಉದಾಹರಣೆಯಲ್ಲಿ ತೋರಿಸಿದಂತೆ ಅಂತ್ಯಪ್ರಾಸದ ಶಬ್ದಗಳನ್ನು ಬರೆಯಿರಿ.**

ಉದಾ : ಪೈರು - ತವರು

ಅ) ಕಂಪು - ಆ) ಪೆಂಪು -


ಇ) ರಚನ - ಈ) ಚಂದ -

**ಉಪಕ್ರಮ : ಕನ್ನಡನಾಡಿನ ಹಿರಿಮೆಯನ್ನು ಬಣ್ಣಿಸುವ ಇತರ ಗದ್ಯ ಪದ್ಯಗಳನ್ನು ಸಂಗ್ರಹಿಸಿ ಓದಿರಿ -**

AYQY3A

**ಕನ್ನಡದ ಕಂಪು, ಮನಸಿಗೆ ಇಂಪು**

# ೧. ಪ್ರಾಮಾಣಿಕತೆ



ಒಂದು ಊರಿನಲ್ಲಿ ಸುಖಾರಾಮ ಎಂಬ ಧನಿಕನಿದ್ದನು. ಸಾರಜಾ ಅವನ ಹೆಂಡತಿ. ಸುಖಾರಾಮ ಬಹಳ ಜಿಪುಣ ಸ್ವಭಾವದವನಾಗಿದ್ದನು. ಖರ್ಚು ಮಾಡುವದೆಂದರೆ ಅವನಿಗೆ ಬಹಳ ಬೇಸರ. ದಾನ ಧರ್ಮಗಳಂತೂ ಅವನಿಗೆ ಗೊತ್ತೇ ಇರಲಿಲ್ಲ.

ನೆರೆಮನೆಯಲ್ಲಿ ಕೃಷ್ಣ ಎಂಬ ಗೃಹಸ್ಥನಿದ್ದನು. ಅವನ ಹೆಂಡತಿಯ ಹೆಸರು ರಾಧಾ. ಸುಶಾಂತ ಅವರ ಒಬ್ಬನೇ ಮಗ. ದಂಪತಿಗಳು ಕಷ್ಟಪಟ್ಟು ದುಡಿಯುತ್ತಿದ್ದರು. ದೊರೆತ ಉತ್ಪನ್ನದಲ್ಲಿಯೇ ಉಂಡು, ಉಟ್ಟು ನೆಮ್ಮದಿಯಿಂದ ಇದ್ದರು. ದಾನ-ಧರ್ಮಗಳಲ್ಲಿ ಎತ್ತಿದ ಕೈ. ಇವರ ಜೀವನಕ್ರಮವನ್ನು ನೋಡಿ ಸುಖಾರಾಮನಿಗೆ ಸೋಜಿಗವಾಯಿತು.

ಒಂದು ದಿನ ಸುಖಾರಾಮ ತನ್ನ ಪತ್ನಿಯೊಡನೆ ಮಾತನಾಡುತ್ತ ಕುಳಿತಿದ್ದನು. ಅವನು ಸಾರಜಾಳನ್ನು ಕುರಿತು, "ಸಾರಜಾ, ನೆರೆಮನೆಯ ಕೃಷ್ಣ ಬಡವ. ಒಂದು ದಿವಸ ಕೆಲಸಕ್ಕೆ ಹೋಗದಿದ್ದರೆ ಅವನ ಕುಟುಂಬ ಉಪವಾಸವಿರುತ್ತದೆ. ಆದರೂ ಅವನು ಸದಾ ಹಸನ್ಮುಖಿಯಾಗಿ ಮತ್ತು ಆನಂದದಿಂದ ಇದ್ದಾನೆ. ನಮಗೆ ಇಷ್ಟೆಲ್ಲ ಸಿರಿ-ಸಂಪತ್ತು ಇದ್ದರೂ ಸಹಿತ ನಮ್ಮ ಮನಸ್ಸಿಗೆ ನೆಮ್ಮದಿ ಇಲ್ಲ. ಇದರ ರಹಸ್ಯ ಏನಿರಬಹುದು?"

"ಕೃಷ್ಣ ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಳ್ಳುತ್ತಾನೆ.

ದೊರೆತ ಸಂಪಾದನೆಯಲ್ಲಿಯೇ ಒಳ್ಳೆಯದನ್ನು ಉಂಡು-ಉಟ್ಟು , ದಾನ-ಧರ್ಮಾದಿಗಳನ್ನು ಮಾಡಿ ಆನಂದದಿಂದ ಇರುತ್ತಾನೆ. ನಾಳೆಯ ಚಿಂತೆ ಅವನಿಗಿಲ್ಲ. ನೀವು ಮಾತ್ರ ತದ್ವಿರುದ್ಧವಾಗಿದ್ದೀರಿ." ಎಂದಳು ಸಾರಜಾ.

"ಈಗ ಅವನ ಬಳಿ ಹಣವಿಲ್ಲ. ಅದಕ್ಕಾಗಿ ಅವರು ದಿನಾಲು ಸಂಪಾದಿಸುತ್ತಿರುವ ಸ್ವಲ್ಪ ಹಣವನ್ನು ಹೀಗೆ ಖರ್ಚು ಮಾಡುತ್ತಾರೆ. ಒಂದು ವೇಳೆ ಅವರಿಗೂ ಅಕಸ್ಮಾತಾಗಿ ಹೇರಳ ಹಣ ದೊರೆತರೆ ಆಗ ದಾನ-ಧರ್ಮಾದಿಗಳನ್ನು ಬಿಟ್ಟು ಜಿಪುಣತನ ಮಾಡುತ್ತಾ ಆ ನಿಧಿಯನ್ನು ಬೆಳೆಸಲು ಪ್ರಾರಂಭಿಸುತ್ತಾರೆ" ಎಂದನು ಸುಖಾರಾಮ.

ಭವಿಷ್ಯದ ಸಲುವಾಗಿ ಉಳಿಸಬೇಕು ಸರಿ. ಆದರೆ ಉಳಿತಾಯವನ್ನೇ ಮುಖ್ಯ ಗುರಿಯನ್ನಾಗಿ ಮಾಡಬಾರದು. ಒಂದು ವೇಳೆ ಕೃಷ್ಣನಿಗೆ ಅಪಾರ ಸಂಪತ್ತು ದೊರೆತರೂ ಸಹಿತ ಅವನ ಮೂಲ ಸ್ವಭಾವದಲ್ಲಿ ಬದಲಾವಣೆಯಾಗಲಿಕ್ಕಿಲ್ಲ ಎಂದಳು ಸಾರಜಾ. ಹಣದ ಪ್ರಭಾವದಿಂದ ಮನುಷ್ಯನ ಮೂಲಸ್ವರೂಪಗಳಾದ ಗುಣ ಮತ್ತು ನಡತೆಗಳಲ್ಲಿ ಖಂಡಿತ ಬದಲಾವಣೆಯಾಗುತ್ತದೆ ಎಂದನು ಸುಖಾರಾಮ. ಸತ್ಸಂಗವುಳ್ಳ ಮನುಷ್ಯನು ಧನದ ಪ್ರಭಾವದಿಂದ ಇನ್ನಷ್ಟು ಉದಾರಿಯಾಗುತ್ತಾನೆ ಹೊರತು ಜಿಪುಣನಾಗಲಿಕ್ಕಿಲ್ಲ. ಎಂದು ಸಾರಜಾ ಹೇಳಿದಳು. ಸುಖಾರಾಮನು ಈ ವಿಷಯವನ್ನು ಪರೀಕ್ಷೆ ಮಾಡಲು ನಿರ್ಧರಿಸಿದನು.

ಒಂದು ದಿವಸ ನಸುಕಿನಲ್ಲಿ ರಾಧಾ ಮನೆಯ ಅಂಗಳದಲ್ಲಿ ಕಸಗೂಡಿಸುವಾಗ ಚೀಲವೊಂದನ್ನು ಕಂಡಳು. ತಕ್ಷಣ ತನ್ನ ಪತಿಯನ್ನು ಕರೆದು ಚೀಲವನ್ನು ತೋರಿಸಿದಳು. ಇಬ್ಬರೂ ಕೂಡಿ ಆ ಚೀಲವನ್ನು ಮನೆಯೊಳಗೆ ಒಯ್ದರು. ಅದನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಒಂಬತ್ತು ಸಾವಿರ ರೂಪಾಯಿಗಳಿದ್ದವು. ಯಾರೋ ಒಬ್ಬ ಪ್ರವಾಸಿಯ ಸೊಂಟದಿಂದ ಈ ಚೀಲ ಜಾರಿ ಬಿದ್ದಿರಬಹುದು. ಪಾಪ ! ಹಣವಿಲ್ಲದೆ ಪ್ರಯಾಣದಲ್ಲಿ ಅವನಿಗೆ ತೊಂದರೆಯಾಗುತ್ತದೆ. ಪರರ ಹಣವನ್ನು ಹೇಳದೇ ಕೇಳದೇ ಮುಟ್ಟಲೂ ಬಾರದು. ಇಂಥದರಲ್ಲಿ ಇದನ್ನು ನಾವು ಮನೆಯೊಳಗೆ ತಂದಿದ್ದೇವೆ. ಇದೂ ಕೂಡಾ ತಪ್ಪು. ಹೇಗಾದರೂ ಮಾಡಿ ಇದನ್ನು ಕಳೆದುಕೊಂಡಾತನಿಗೆ ತಲುಪಿಸೋಣ ಎಂದು ನಿರ್ಧರಿಸಿದರು. ಸಂಜೆ ಊರಲ್ಲಿ ಡಂಗುರ ಸಾರಿಸಿದರು. ನಾಲ್ಕಾರು ದಿನಗಳಾದರೂ ಯಾರೂ ಬರಲಿಲ್ಲ. ದಂಪತಿಗಳಿಗೆ ಚಿಂತೆಯಾಯಿತು. ಚೀಲವನ್ನು ಒಂದು ಭದ್ರವಾದ ಸ್ಥಳದಲ್ಲಿರಿಸಿ ನಿತ್ಯ ಕರ್ಮದಲ್ಲಿ ತೊಡಗಿದರು. ಇದನ್ನೆಲ್ಲ ಸುಖಾರಾಮ ಮತ್ತು ಅವನ ಹೆಂಡತಿ ಸೂಕ್ಷ್ಮವಾಗಿ ಗಮನಿಸುತ್ತಿದ್ದರು.

ಕೆಲವು ದಿನಗಳಾದವು. ಕೃಷ್ಣನ ಕುಟುಂಬವು ಎಂದಿನಂತೆ ಹಾಯಾಗಿದ್ದಿತು. ಒಂದು ದಿನ ಪೆಟ್ಟಿಗೆಯಲ್ಲಿಟ್ಟ ಹಣವನ್ನು ಏನು ಮಾಡೋಣ ಎಂದು ಹೆಂಡತಿ ಕೇಳಿದಳು. ರಾಧಾ ಅದನ್ನು ಏನು ಮಾಡಬೇಕೋ ತಿಳಿಯದಂತಾಗಿದೆ. ನಿನಗೇನಾದರೂ ಉಪಾಯ ಹೊಳೆದಿದೆಯೇ ? ಎಂದನು ಕೃಷ್ಣ. ನಾವು ನಮ್ಮ ದುಡಿಮೆಯಲ್ಲಿಯ ಹಣದಿಂದ ಇನ್ನೂ ಒಂದು ಸಾವಿರ ರೂಪಾಯಿ

ಚೀಲದಲ್ಲಿ ಸೇರಿಸಿ ಆ ಚೀಲವನ್ನು ದಾನಮಾಡಿದರೆ ಸರಿಯಾಗಬಹುದು ಎಂದಳು ರಾಧಾ. ಸರಿ ನನಗೂ ಹಾಗೇ ಅನಿಸುತ್ತದೆ ಯಾವುದೇ ಒಂದು ಒಳ್ಳೆಯ ಶಿಕ್ಷಣ ಸಂಸ್ಥೆಗೆ ದಾನ ಕೊಡುವುದು ಒಳ್ಳೆಯದು ಎನಿಸಿತು. ಆ ಶಿಕ್ಷಣ ಸಂಸ್ಥೆಯಲ್ಲಿ ಕಲಿತ ಮಗು ಡಾ.ವಿಶ್ವೇಶ್ವರಯ್ಯನವರಂತಹ ಶ್ರೇಷ್ಠ ಇಂಜನೀಯರನಾದರೆ ನಮ್ಮ ನಾಡೇ ಸುಜಲಾಂ ಸುಫಲಾಂ ಆಗಬಹುದು. ಸರ್ ಸಿ.ವ್ಹಿ. ರಾಮನ್ ರಂಥ ಶ್ರೇಷ್ಠ ವಿಜ್ಞಾನಿಯಾದರೆ ನಮ್ಮ ದೇಶ ಜಗತ್ತಿನಲ್ಲಿ ಕೀರ್ತಿ ಪಡೆಯಬಹುದು ಎಂದನು ಕೃಷ್ಣ. ಪತಿಯ ಅತ್ಯುತ್ತಮ ವಿಚಾರಗಳನ್ನು ಕೇಳಿದ ರಾಧಾ ಅಚ್ಚರಿಗೊಂಡು ಅದಕ್ಕೆ ತನ್ನ ಸಮ್ಮತಿ ನೀಡಿದಳು.

ಕೆಲವು ದಿನಗಳ ಬಳಿಕ ದಂಪತಿಗಳು ಒಂದು ಸಾವಿರ ರೂಪಾಯಿಗಳನ್ನು ಉಳಿಸಿದರು. ಅದನ್ನು ಚೀಲದಲ್ಲಿ ಸೇರಿಸಿ ಆ ಚೀಲವನ್ನು ಒಂದು ಶಿಕ್ಷಣ ಸಂಸ್ಥೆಗೆ ಗುಪ್ತದಾನ ಮಾಡಿದರು. ಇದನ್ನೆಲ್ಲ ಗಮನಿಸುತ್ತಿದ್ದ ಸುಖಾರಾಮನಿಗೆ ದಿಗಿಲು ಬಡಿದಂತಾಯಿತು, ಮನುಷ್ಯನಿಗೆ ಹಣದಿಂದ ಸಮಾಧಾನ ಮತ್ತು ನೆಮ್ಮದಿಗಳು ದೊರಕುವದಿಲ್ಲ. ದುಡಿಮೆ ಮತ್ತು ನಡತೆಗಳಿಂದ ಸಮಾಧಾನ ಸಿಗುತ್ತದೆ ಎಂಬ ಅರಿವು ಮೂಡಿತು. ಮುಂದೆ ಅವನೂ ಕೂಡಾ ಒಳ್ಳೆಯ ಮಾರ್ಗದಲ್ಲಿ ನಡೆದು ಜೀವನದಲ್ಲಿ ಆನಂದವನ್ನು ಪಡೆದುಕೊಂಡನು.

**– ಅಶೋಕ ಪಾಟೀಲ**

**ಶಬ್ದಗಳ ಅರ್ಥ :**

ಜಿಪುಣ – ಲೋಭಿ ; ರಹಸ್ಯ – ಗುಟ್ಟು ; ಹೇರಳ– ಬಹಳ

## ಅಭ್ಯಾಸ

**ಪ್ರಶ್ನೆ : ೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ) ಸುಖಾರಾಮನ ಹೆಂಡತಿಯ ಹೆಸರು ಏನಿತ್ತು ?
ಆ) ಸುಖಾರಾಮನ ಸ್ವಭಾವ ಹೇಗಿತ್ತು ?
ಇ) ಸುಶಾಂತ ಯಾರ ಮಗನಾಗಿದ್ದನು ?
ಈ) ಸತ್ಸಂಗವುಳ್ಳ ಮನುಷ್ಯನು ಹೇಗೆ ಉದಾರಿಯಾಗುತ್ತಾನೆ ?
ಉ) ರಾಧಾ ಅಂಗಳದಲ್ಲಿ ಕಸಗೂಡಿಸುವಾಗ ಏನು ಕಂಡಳು ?

**ಪ್ರಶ್ನೆ : ೨) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಸುಖಾರಾಮನಿಗೆ ಏಕೆ ಸೋಜಿಗವಾಯಿತು ?
ಆ) ಕೃಷ್ಣನ ಕುಟುಂಬದ ಬದುಕಿನ ಆನಂದದ ರಹಸ್ಯ ಯಾವುದು ?

ಇ) ಕೃಷ್ಣರಾಧೆಯರು ಹಣದ ಚೀಲ ದೊರೆತಾಗ ಏನೆಂದು ನಿರ್ಧರಿಸಿದರು?
ಈ) ಪತಿಯ ಯಾವ ವಿಚಾರಗಳಿಂದ ರಾಧಾ ಅಚ್ಚರಿಗೊಂಡಳು ?
ಉ) ಸುಖಾರಾಮನಿಗೆ ಯಾವ ಅರಿವು ಮೂಡಿತು ?

**ಪ್ರಶ್ನೆ : ೩) ಬಿಟ್ಟ ಸ್ಥಳಗಳನ್ನು ಪೂರ್ಣಗೊಳಿಸಿರಿ.**

ಅ) ಒಂದು ಊರಿನಲ್ಲಿ ...... ಎಂಬ ಧನಿಕನಿದ್ದನು.
ಆ) ಕೃಷ್ಣನ ಹೆಂಡತಿಯ ಹೆಸರು ...... .
ಇ) ಅದನ್ನು ಬಿಚ್ಚಿನೋಡಿದಾಗ ಅದರಲ್ಲಿ..... ರೂಪಾಯಿಗಳಿದ್ದವು.
ಈ) ಆ ಚೀಲವನ್ನು ಒಂದು ಶಿಕ್ಷಣ ಸಂಸ್ಥೆಗೆ ........
ಉ) ..... ಸಮಾಧಾನ ಮತ್ತು ನೆಮ್ಮದಿ ದೊರಕುವದಿಲ್ಲ .


**ಪ್ರಶ್ನೆ : ೪) ಕೆಳಗಿನ ಪಡೆನುಡಿಗಳ ಅರ್ಥಹೇಳಿ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.**

ಸೋಜಿಗವಾಗು, ತೃಪ್ತಿಪಡು, ಗಮನಹರಿಸು, ಅಚ್ಚರಿಗೊಳ್ಳು , ದಿಗಿಲುಬಡಿ.


**ಉಪಕ್ರಮ :** ಅಂಚೆ ಮತ್ತು ಬ್ಯಾಂಕುಗಳಿಗೆ ಭೆಟ್ಟಿ ನೀಡಿ ಅಲ್ಲಿರುವ ಉಳಿತಾಯ ಯೋಜನೆಗಳ ಮಾಹಿತಿಯನ್ನು ಸಂಗ್ರಹಿಸಿರಿ.

AYZU4X

**ಹಣಕ್ಕಿಂತ ಗುಣ ಮೇಲು.**



# ೩. ತಂದೆಯ ಸಲಹೆ



ಮಹಾದೇವ ಎಂಬವನು ತುಂಬಾ ಬಡತನದಿಂದ ಮೇಲೆ ಬಂದು ಈಗ ಸಿರಿವಂತನಾಗಿದ್ದನು. ಇವನಿಗೆ ಅಮರ, ಅಜಯ ಇಬ್ಬರು ಮಕ್ಕಳು. ತಂದೆ ಅವರಿಬ್ಬರನ್ನು ಚೆನ್ನಾಗಿ ಸಾಕಿ ಸಲಹಿದ್ದನು.

ಒಮ್ಮೆ ಮಹಾದೇವ ಕಾಯಿಲೆಯಿಂದ ಹಾಸಿಗೆ ಹಿಡಿದನು. ಒಂದು ದಿನ ಕಾಯಿಲೆ ಹೆಚ್ಚಿದಾಗ 'ತಾನು ಇನ್ನು ಬದುಕಿ ಉಳಿಯಲಾರೆ' ಎಂದೆನಿಸಿತು. ತನ್ನ ಮಕ್ಕಳಿಬ್ಬರನ್ನು ಕರೆದು, 'ಮಕ್ಕಳೇ, ಜೀವನದ ನಿಜವಾದ ಅರ್ಥ ನಿಮಗೆ ಗೊತ್ತಿಲ್ಲ. ಅನುಭವದಿಂದ ಕೆಲ ಮಾತುಗಳನ್ನು ಹೇಳಬಯಸುತ್ತೇನೆ. ಕೇಳಿಸಿಕೊಂಡು ನೆನಪಿಟ್ಟು ಆದರಂತೆ ನಡೆಯಿರಿ. ಊರಿಗೊಂದು ಮನೆ ಕಟ್ಟಿರಿ, ರುಚಿಯಾದ ಊಟ ಮಾಡಿರಿ, ಸುಖವಾದ ನಿದ್ರೆ ಮಾಡಿರಿ'.

ಹೀಗೆ ಹೇಳುವಾಗ ಅವನ ಪ್ರಾಣಪಕ್ಷಿ ಹಾರಿ ಹೋಯಿತು.

ಮಹಾದೇವನ ಮರಣದ ಕೆಲ ದಿನಗಳ ನಂತರ ಮಕ್ಕಳು ತಂದೆಯ ಆಸ್ತಿಯನ್ನು

ಸಮನಾಗಿ ಹಂಚಿಕೊಂಡು ಬೇರೆ ಬೇರೆ ಮನೆಗಳಲ್ಲಿ ವಾಸಿಸತೊಡಗಿದರು.

ಅಮರ ತನ್ನ ತಂದೆ ಮರಣದ ಸಮಯದಲ್ಲಿ ಹೇಳಿದ ಮಾತುಗಳನ್ನು ನೆನಪಿಸಿ ಕೊಂಡನು. ಅವರ ಮಾತಿನಂತೆಯೇ ತಾನು ಜೀವನದಲ್ಲಿ ನಡೆಯಬೇಕೆಂದು ನಿರ್ಧರಿಸಿದನು. ಅದರಂತೆ ನಡೆಯಲೂ ತೊಡಗಿದನು. ತಂದೆಯ ಮೊದಲಿನ ಮಾತನ್ನು ಈಡೇರಿಸಬೇಕೆಂದು ತನ್ನ ಪಾಲಿಗೆ ಬಂದ ಆಸ್ತಿಯಲ್ಲಿಯ ಹಣದಿಂದ ತನ್ನ ಊರಿನ ಸುತ್ತ ಮುತ್ತಲಿನ ಊರುಗಳಲ್ಲಿ ಒಂದೊಂದು ಮನೆ ಕಟ್ಟಿಸಿದನು. ತಂದೆಯ ಮೊದಲಿನ ಮಾತನ್ನು ನಡೆಸಿದೆನೆಂದು ಮನದಲ್ಲಿ ಸಮಾಧಾನಗೊಂಡನು.

ತಂದೆಯ ಮುಂದಿನ ಮಾತುಗಳನ್ನು ಈಡೇರಿಸಲು ಪ್ರತಿದಿನ ಮೃಷ್ಟಾನ್ನ ಭೋಜನ ಮಾಡಿ ಸುಖದ ಸುಪ್ಪತ್ತಿಗೆಯಲ್ಲಿ ನಿದ್ರಿಸತೊಡಗಿದನು. ತಂದೆಯ ಮಾತುಗಳನ್ನು ಈಡೇರಿಸಿದೆನೆಂದು ತನ್ನಷ್ಟಕ್ಕೆ ತಾನೇ ಹೆಮ್ಮೆಪಟ್ಟುಕೊಂಡನು. ದುಡಿತವನ್ನು ಮರೆತು ಮೈಗಳ್ಳನಾಗತೊಡಗಿದನು. 'ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು' ಎಂಬಂತೆ ಅವನಲ್ಲಿದ್ದ ಹಣ ಕಡಿಮೆಯಾಗುತ್ತ ನಿರ್ಗತಿಕನಾಗತೊಡಗಿದನು.

ಅಜಯ ಮೊದಲಿಗಿಂತಲೂ ಸಿರಿವಂತನಾದನು. ಅಮರನಿಗೆ ತನ್ನ ತಮ್ಮನ ಸಿರಿತನ ಕಂಡು ಸಂತೋಷವಾಯಿತು. ಒಂದು ದಿನ ತಮ್ಮನ ಭೇಟಿಗೆ ಬಂದನು. ಅಜಯ ತನ್ನ ಅಣ್ಣನನ್ನು ಬರಮಾಡಿಕೊಂಡು ಆದರಿಸಿದನು.

ಊಟವಾದ ಮೇಲೆ ಅವರಿಬ್ಬರೂ ಮಾತನಾಡುತ್ತ ಕುಳಿತಾಗ ಅಮರ ಕೇಳಿದನು :

'ತಮ್ಮಾ, ನಾನು ತಂದೆ ಹೇಳಿದ ಹಾಗೆಯೇ ನಡೆದೆ. ಊರಿಗೊಂದು ಮನೆ ಕಟ್ಟಿಸಿದೆನು. ವಿಧವಿಧವಾದ ಊಟ ತಯಾರಿಸಲು ಬೇರೆ ಬೇರೆ ಬಾಣಸಿಗರನ್ನು ನೇಮಿಸಿಕೊಂಡೆನು. ಬೆಲೆಯುಳ್ಳ ಹಾಸಿಗೆ ಮಾಡಿಸಿದೆನು. ಆದರೆ ಇದರಿಂದ ಬಡವನಾದೆನು. ನೀನು ಹೇಗೆ ಸಿರಿವಂತನಾದೆ? ಅಪ್ಪನು ಹೇಳಿದ ಮಾತಿನಂತೆ ನಡೆಯಲಿಲ್ಲವೇ ?'

ಅದಕ್ಕೆ ಅಜಯ ನಗುತ್ತ :

'ಅಣ್ಣಾ, ನೂರಕ್ಕೆ ನೂರು ಅಪ್ಪನ ಮಾತಿನಂತೆ ನಡೆದೆನು. ಆದ್ದರಿಂದಲೇ ಸಿರಿವಂತನಾದೆನು'.

'ಅದು ಹೇಗೆ ಸಾಧ್ಯ ?' ಎಂದು ಕೇಳಿದನು ಅಮರ.

'ಬೇರೆ ಬೇರೆ ಊರುಗಳಲ್ಲಿ ಅನೇಕ ಒಳ್ಳೆಯ ಜನರ ಸ್ನೇಹ ಮಾಡಿದ್ದೇನೆ. ಆಯಾ ಊರಿಗೆ ಹೋದಾಗ ಅವರ ಮನೆಯಲ್ಲಿಯೇ ಉಳಿದು ಕೊಳುತ್ತೇನೆ. ಇದು ಊರಿಗೊಂದು ಮನೆ ಕಟ್ಟಿದಂತೆಯೇ ಅಲ್ಲವೇ ?'

'ಕಷ್ಟಪಟ್ಟು ಹಗಲೂ ರಾತ್ರಿ ದುಡಿಯುತ್ತೇನೆ. ದಣಿವಿನಿಂದ ರಾತ್ರಿ ಚಾಪೆಯ ಮೇಲೆ ಮಲಗಿದರೂ ನನಗೆ ಒಳ್ಳೆಯ ನಿದ್ರೆ ಬರುತ್ತದೆ. ಇದುವೇ ಸುಖವಾದ ನಿದ್ರೆ.'

'ಹೊತ್ತಲ್ಲದ ಹೊತ್ತಿನಲ್ಲಿ ಕಂಡಕಂಡ ತಿಂಡಿಯನ್ನು ತಿನ್ನುವದಿಲ್ಲ. ಬದಲಿಗೆ ಆರೋಗ್ಯಕ್ಕೆ ಹಿತವಾಗುವ ಹಾಗೆ. ಉತ್ತಮವಾದ ಊಟವನ್ನು ಹಸಿದಾಗ ಮಾತ್ರ ಮಾಡುತ್ತಿದ್ದೆ. ಅದಕ್ಕೆ ಯಾವಾಗಲೂ ನನಗೆ ಊಟ ರುಚಿ ಎನಿಸುತ್ತಿತ್ತು.'

'ಬಹುಶ: ಅಪ್ಪ ಇದನ್ನು ನಮಗೆ ಬಿಡಿಸಿ ಹೇಳುವ ಮುನ್ನವೇ ಅವರ ಪ್ರಾಣ ಹೋಯಿತು. ನೀನು ಅಪ್ಪ ಹೇಳಿದ ವಾಕ್ಯ ಪಾಲಿಸಿದೆ ಹೊರತು ಅದರೊಳಗಿನ ಅರ್ಥ ಪಾಲಿಸಲಿಲ್ಲ. ಇರಲಿ ಈಗ ನಿನಗೆ ಸ್ವಲ್ಪ ಸಹಾಯ ಮಾಡುತ್ತೇನೆ. ಇನ್ನಾದರೂ ಎಚ್ಚೆತ್ತು ವ್ಯಾಪಾರ ಕಲಿ' ಎಂದ ಅಜಯ ಅಣ್ಣನಿಗೆ ಹಣದ ಸಹಾಯ ಮಾಡಿದನು.

ಅಮರ ತಮ್ಮನ ಮಾತಿನಂತೆ ನಡೆದು ಕೆಲವೇ ದಿನಗಳಲ್ಲಿ ಸಿರಿವಂತನಾದನು.

**- ಸುಧಾಮೂರ್ತಿ**

**ಶಬ್ದಗಳ ಅರ್ಥ :**

ಮೃಷ್ಟಾನ್ನ - ಒಳ್ಳೆಯ ಊಟ ;
ಮೈಗಳ್ಳ - ಕೆಲಸ ಮಾಡಲಾರದವ;
ಬಾಣಸಿಗ - ಆಚಾರಿ, ಅಡುಗೆ ಮಾಡುವವ;

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಮಹಾದೇವನಿಗೆ ಎಷ್ಟು ಜನ ಮಕ್ಕಳು ಇದ್ದರು ?
ಆ) ಮಹಾದೇವನು ಹಾಸಿಗೆ ಹಿಡಿದಾಗ ಯಾರನ್ನು ಹತ್ತಿರ ಕರೆದನು ?
ಇ) ಮಹಾದೇವನು ಮಕ್ಕಳಿಗೆ ಯಾವ ಮಾತುಗಳನ್ನು ಹೇಳಿದನು ?
ಈ) ತಂದೆಯ ಮೊದಲಿನ ಮಾತನ್ನು ಈಡೇರಿಸಲು ಅಮರ ಏನು ಮಾಡಿದನು?
ಉ) ಅಮರ ಹೇಗೆ ನಿರ್ಗತಿಕನಾದನು ?
ಊ) ಅಮರ ಊಟ ತಯಾರಿಸಲು ಯಾರನ್ನು ನೇಮಿಸಿದನು ?
ಋ) ಯಾರು ಕಷ್ಟಪಟ್ಟು ದುಡಿಯುತ್ತಿದ್ದರು ?
ೠ) ಅಮರನಿಗೆ ಯಾರು ಸಹಾಯ ಮಾಡಿದರು ?
ಎ) ಈ ಪಾಠದಿಂದ ಕಲಿತ ನೀತಿ ಯಾವುದು ?

**ಪ್ರಶ್ನೆ ೨) ಕೆಳಗಿನ ಪರ್ಯಾಯಗಳಿಂದ ಯೋಗ್ಯ ಪದಗಳನ್ನು ಆರಿಸಿ ಪೂರ್ಣಗೊಳಿಸಿರಿ.**

ಅ) ಮಹಾದೇವ ............. ಹಾಸಿಗೆ ಹಿಡಿದನು.
(ರೋಗದಿಂದ, ಕಾಯಿಲೆಯಿಂದ, ಜ್ವರದಿಂದ)

ಆ) ಅಮರ-ಅಜಯರು ಆಸ್ತಿಯನ್ನು ಸಮನಾಗಿ.................
(ದಾನ ಮಾಡಿದರು, ಹಂಚಿಕೊಂಡರು, ಮಾರಿದರು)

ಇ) ಕುಳಿತು ............... ಕುಡಿಕೆ ಹೊನ್ನು ಸಾಲದು.
(ನುಂಗಿದರೆ, ನುರಿಸಿದರೆ, ಉಂಡರೆ)

ಈ) ಊರುಗಳಲ್ಲಿ ಅನೇಕ ......... ಜನರ ಸ್ನೇಹ ಮಾಡಿದೆ.
(ಒಳ್ಳೆಯ, ಸಿರಿವಂತ, ಸೋಮಾರಿ)

**ಪ್ರಶ್ನೆ ೩) ಕಂಸಿನಲ್ಲಿ ಕೊಟ್ಟ ಸರಿಯಾದ ಶಬ್ದ ಜೋಡಿಸಿ ವಾಕ್ಯ ಪೂರ್ಣಗೊಳಿಸಿರಿ.**

(ಕಟ್ಟಿಸಿದನು, ಮಾಡಿದನು, ಮೈಗಳ್ಳನಾದನು, ಈಡೇರಿಸಿದನು, ನೇಮಿಸಿದನು.)

| | | |
|---|---|---|
| ಅಮರ | ಊರಿಗೊಂದು | ಊಟ |
| | ಮೃಷ್ಟಾನ್ನ | ಮಾತು |
| | ತಂದೆಯ ಮೊದಲಿನ | ಮರೆತು |
| | ದುಡಿತವನ್ನು | ಬಾಣಸಿಗರನ್ನು |
| | ಬೇರೆ ಬೇರೆ | ಮನೆ |


**ಉಪಕ್ರಮ:** 'ದುಡಿಮೆಯೇ ದೇವರು' ಈ ವಿಷಯವನ್ನು ಕುರಿತು ಹತ್ತು ಸಾಲು ಬರೆಯಿರಿ.

AZ906K

## ಅರಿತು ಬಾಳಬೇಕು



## ೪. ಆರೋಗ್ಯವೇ ಭಾಗ್ಯ



ಸವಿಯಲು ಹಾಲು ಹಣ್ಣುಗಳಿರಲಿ
ಅಧಿಕ ನೀರು ಜೊತೆಯಾಗಿರಲಿ
ಪೌಷ್ಟಿಕ ಅನ್ನ ಅನುದಿನವಿರಲಿ
ಇದ್ದರೆ ನಮಗೆ ಆರೋಗ್ಯ
ಅದುವೇ ನಮ್ಮ ಸೌಭಾಗ್ಯ

ಚಹ ಕಾಫಿ ಮಿತವಾಗಿರಲಿ
ದೇಹಕೆ ಸದಾ ಕೆಲಸವು ಇರಲಿ
ನಿದ್ರೆ-ವಿಶ್ರಾಂತಿ ಜೊತೆಯಾಗಿರಲಿ
ಇದ್ದರೆ ನಮಗೆ ಆರೋಗ್ಯ
ಅದುವೇ ನಮ್ಮ ಸೌಭಾಗ್ಯ

ಊಟವು ಸಮಯಕೆ ಸರಿಯಾಗಿರಲಿ
ತಿಂಡಿ-ತಿನಿಸು ಮಿತವಾಗಿರಲಿ
ದುಶ್ಚಟಗಳೆಲ್ಲ ದೂರವೇ ಇರಲಿ
ಇದ್ದರೆ ನಮಗೆ ಆರೋಗ್ಯ
ಅದುವೇ ನಮ್ಮ ಸೌಭಾಗ್ಯ

ಮೈಮನವೆಲ್ಲ ಶುಚಿಯಾಗಿರಲಿ
ಧರಿಸುವ ಬಟ್ಟೆ ಹಸನಾಗಿರಲಿ
ನೆರೆಹೊರೆ ನಿತ್ಯ ನಿರ್ಮಲವಿರಲಿ
ಇದ್ದರೆ ನಮಗೆ ಆರೋಗ್ಯ
ಅದುವೇ ನಮ್ಮ ಸೌಭಾಗ್ಯ

ಪಾಠದ ಜೊತೆಗೆ ಆಟವು ಇರಲಿ
ದೇಹದ ಕಾಂತಿಗೆ ಯೋಗವು ಇರಲಿ
ಇಂಥದೇ ನಮ್ಮ ಜೀವನವಿರಲಿ
ಇದ್ದರೆ ನಮ್ಮ ಆರೋಗ್ಯ
ಅದುವೇ ನಮ್ಮ ಸೌಭಾಗ್ಯ

**ಶಬ್ದಗಳ ಅರ್ಥ :**

ಪೌಷ್ಟಿಕ – ಸತ್ವಯುತವಾದ ; ಅನುದಿನ – ಪ್ರತಿದಿನ ; ದುಶ್ಚಟ – ಕೆಟ್ಟ ಅಭ್ಯಾಸ ; ನಿರ್ಮಲ – ಸ್ವಚ್ಛವಾದ

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ಆರೋಗ್ಯವಂತರಾಗಿರಲು ಏನೇನು ಸೇವಿಸಬೇಕು ?

೨) ಯಾವುದು ಮಿತವಾಗಿ ಇರಬೇಕು ?

೩) ಯಾವುದು ನಿರ್ಮಲವಾಗಿರಬೇಕು ?

೪) ಯೋಗದ ಪ್ರಯೋಜನವೇನು ?

**ಪ್ರಶ್ನೆ ೨) ಕೆಳಗೆ ಕೊಟ್ಟ ಶಬ್ದಗಳಿಗೆ ಜೋಡು ಶಬ್ದಗಳನ್ನು ಬರೆಯಿರಿ.**

೧) ಹಾಲು –  ೨) ತಿಂಡಿ –

೩) ಚಹಾ –  ೪) ಆಟ –

**ಪ್ರಶ್ನೆ ೩) ಕೆಳಗಿನ ಕವಿತೆಯ ಸಾಲುಗಳನ್ನು ಪೂರ್ಣಗೊಳಿಸಿರಿ.**

ಊಟವು ....................................

..................................................

..............................ನಮ್ಮ ಸೌಭಾಗ್ಯ

**ಉಪಕ್ರಮ :** ೧) ಈ ಕವಿತೆಯನ್ನು ಸಾಭಿನಯದೊಂದಿಗೆ ಹಾಡಿರಿ.

೨) ಅ, ಬ, ಕ, ಡ ಮತ್ತು ಇ ಜೀವನಸತ್ವಗಳಿರುವ ಆಹಾರಪದಾರ್ಥಗಳ ಪಟ್ಟಿ ಮಾಡಿರಿ.

**ಸದೃಢವಾದ ಶರೀರದಲ್ಲಿ ಸದೃಢವಾದ ಮನಸ್ಸಿರುತ್ತದೆ.**

AZTL88



# ೩. ಕನಸಿನ ಗುಟ್ಟು



ಒಂದು ಕಾಲ್ನಡಿಗೆಯ ಪ್ರವಾಸದ ಕಾಲದಲ್ಲಿ ಮೂವರು ಅಪರಿಚಿತರು ಪರಸ್ಪರ ಭೇಟಿಯಾದರು. ಒಂದೆರಡು ದಿನಗಳಲ್ಲೇ ಮೂವರಲ್ಲಿ ಸ್ನೇಹ ಬೆಳೆಯಿತು. ಬಹಳ ದೂರದ ಪ್ರವಾಸ. ಒಬ್ಬರಿಗೊಬ್ಬರು ಸಹಕರಿಸಿದರೆ ಎಷ್ಟು ಚಂದ ! ತಾವು ತಂದ ಆಹಾರ-ತಿಂಡಿಗಳನ್ನು ಎಲ್ಲರೂ ಹಂಚಿಕೊಂಡು ತಿನ್ನೋಣ ಎಂದು ಒಪ್ಪಂದಕ್ಕೆ ಬಂದರು. ದಾರಿಯುದ್ದಕ್ಕೂ ತಮ್ಮ ಬದುಕಿನ ಕಥೆಗಳನ್ನು ಹೇಳುತ್ತಾ, ಆನಂದದಿಂದ ಪ್ರಯಾಣ ಮುಂದುವರಿಸಿದರು.

ಕೆಲವು ದಿನಗಳ ನಂತರ ತಮ್ಮ ತಮ್ಮ ಆಹಾರ ಚೀಲ ಬರಿದಾಗುತ್ತಿರುವುದನ್ನು ಗಮನಿಸಿ ಅವರಿಗೆಲ್ಲಾ ಆತಂಕ ಉಂಟಾಯಿತು. ದಾರಿಯಲ್ಲಿ ಹಳ್ಳಿಯಾಗಲೀ, ಮನೆಗಳಾಗಲೀ, ಛತ್ರವಾಗಲೀ ಯಾವುದೂ ಕಾಣುತ್ತಿರಲಿಲ್ಲ. ಜನಸಂಚಾರವಿರದ ಮಹಾಬಯಲು. ಆ ವಾರ ಮುಗಿಯುವುದರೊಳಗಾಗಿ ಎಲ್ಲರ ಊಟದ ಚೀಲ ಖಾಲಿ. ಒಬ್ಬನ ಚೀಲದಲ್ಲಿ ಒಂದು ತುಂಡು ಬ್ರೆಡ್ ಮತ್ತು ಸ್ವಲ್ಪ ಕುಡಿಯುವ ನೀರು ಉಳಿದಿತ್ತು. ಬಯಲು ದಾಟಲು ಒಂದೆರಡು ದಿನಗಳಾದರೂ ಬೇಕು. ಅಲ್ಲಿಯವರೆಗೇನು ಮಾಡುವುದು ? ಎಲ್ಲರಿಗೂ ತಡೆಯಲಾಗದ ಹಸಿವು ಮತ್ತು ಭಾರೀ ಆಯಾಸ. ಎಲ್ಲರ ಕಣ್ಣು ಆ ಬ್ರೆಡ್ಡಿನ ಮೇಲೆ. ಆದರೆ ಅದು

ಒಬ್ಬನ ಹೊಟ್ಟೆಯನ್ನೂ ತುಂಬಿಸಲಾಗದಷ್ಟು ಸಣ್ಣದು. ಏನು ಮಾಡುವುದು ? ಹಿಂದೆ ಮಾಡಿದ ಒಪ್ಪಂದದಂತೆ ಅದನ್ನು ಮೂರು ತುಂಡು ಮಾಡಿ ಹಂಚಿಕೊಳ್ಳೋಣ ಎಂದು ಒಬ್ಬ ಸಲಹೆ ಕೊಟ್ಟ. ಉಳಿದಿಬ್ಬರಿಗೆ ಹಿಡಿಸಲಿಲ್ಲ ಆ ಅಭಿಪ್ರಾಯ. ಒಬ್ಬನ ಹೊಟ್ಟೆಯಾದರೂ ತೃಪ್ತಿ ಪಡಲಿ ಎಂದು ಅವರ ಅಭಿಪ್ರಾಯ. ಆದರೆ ಯಾರಿಗಿದೆ ಬ್ರೆಡ್ಡಿನ ಹಕ್ಕು ? ಯಾರು ಅದನ್ನು ತಿನ್ನಬೇಕು ? ಆ ಮೂವರೂ ಅದೂ ಇದೂ ಸಲಹೆ ಹೇಳುತ್ತಾ, ವಾದ ಮಾಡುತ್ತಾ ಸಮಯ ಕಳೆದರು. ಮತ್ತೆ ಸ್ವಲ್ಪ ಹೊತ್ತಿನಲ್ಲಿ ಕತ್ತಲಾಯಿತು. ಒಬ್ಬ ಸಲಹೆ ಮುಂದಿಟ್ಟ – "ಈಗ ಇದನ್ನು ತಿನ್ನುವುದು ಬೇಡ. ನಾವು ಮೂರು ಜನರೂ ಹಸಿದ ಹೊಟ್ಟೆಯಲ್ಲೇ ಮಲಗುವಾ. ರಾತ್ರಿ ಯಾರಿಗೆ ಅತ್ಯದ್ಭುತ ಕನಸು ಬೀಳುತ್ತದೋ ಅವರೇ ಬೆಳಿಗ್ಗೆ ಬ್ರೆಡ್ ತಿನ್ನಲಿ." ವಾದಮಾಡಿ ಸಾಕಾಗಿದ್ದ ಉಳಿದಿಬ್ಬರು ಆ ಸಲಹೆಗೆ ಒಪ್ಪಿಕೊಂಡು ನಿದ್ರೆ ಹೋದರು.

ಮರುದಿನ ಮೂವರೂ ಸೂರ್ಯೋದಯದ ಮೊದಲೇ ಎದ್ದರು. ತಮಗೆ ಬಿದ್ದ ಕನಸನ್ನು ಒಬ್ಬೊಬ್ಬರಾಗಿ ವಿವರಿಸತೊಡಗಿದರು. "ನನ್ನದೇ ಕನಸು ಅತ್ಯದ್ಭುತ. ಏಕೆಂದರೆ ನಾನೊಂದು ಬಹಳ ಚಂದದ ಊರಲ್ಲಿದ್ದೆ. ಅದರ ಸೌಂದರ್ಯ ಬಣ್ಣಿಸಲಿಕ್ಕೇ ಸಾಧ್ಯವಿಲ್ಲ. ಅಬ್ಬಾ ಅಲ್ಲಿ ಎಷ್ಟೆಲ್ಲಾ ಅದ್ಭುತ ವಸ್ತುಗಳಿದ್ದವು ಎಂದರೆ ನಾನು ಬೆಳಗಾಗುವವರೆಗೆ ಲೆಕ್ಕ ಹಾಕುತ್ತಲೇ ಇದ್ದೆ. ಅಲ್ಲೊಬ್ಬ ಮಹಾಜ್ಞಾನಿಯನ್ನು ನಾನು ಭೇಟಿಯಾದೆ. ಅವರು ಹೇಳಿದ್ದೇನೆಂದರೆ ನಾನೇ ಆ ಬ್ರೆಡ್‌ಗೆ ಅರ್ಹ. ಏಕೆಂದರೆ ನನ್ನ ಹಿಂದಿನ ಜನ್ಮಗಳಲ್ಲಿ ಈ ಪ್ರಪಂಚಕ್ಕೆ ನನ್ನಿಂದ ಎಷ್ಟೋ ಉಪಕಾರವಾಗಿದೆ."

ಎರಡನೆಯ ಯಾತ್ರಿಕ ಹೇಳಿದ – "ನನ್ನ ಕನಸು ನಿನಗಿಂತಲೂ ಅದ್ಭುತವಾಗಿದೆ. ನಾನೂ ಕನಸಿನಲ್ಲಿ ಒಬ್ಬ ಮಹಾಜ್ಞಾನಿಯನ್ನು ಭೇಟಿಯಾದೆ. ಅವರು ನನ್ನ ಹಿಂದಿನ ಜನ್ಮಗಳಲ್ಲಿ ನಡೆದದ್ದನ್ನೆಲ್ಲಾ ನನಗೆ ತೋರಿಸಿದರು. ನಾನೊಬ್ಬ ಮಹಾನಾಯಕನಾಗಲಿರುವೆನೆಂದು ಪ್ರಪಂಚಕ್ಕೆ ನನ್ನಿಂದ ತುಂಬಾ ಉಪಕಾರವಾಗಲಿದೆ ಎಂದು ಹೇಳಿದರು. ನನಗೆ ಆ ಬ್ರೆಡ್‌ನ ಮೇಲಿನ ಹಕ್ಕು ಇದೆ ಎಂದು ಅವರು ತಿಳಿಸಿದರು."

ಮೂರನೆಯ ಪಯಣಿಗ ಹೇಳಿದ – "ನಿಮ್ಮಿಬ್ಬರ ಕನಸು ನಿಜಕ್ಕೂ ಅದ್ಭುತ. ಆದರೆ ನನಗೊಂದು ವಿಚಿತ್ರ ಕನಸು ಬಿತ್ತು. ಕನಸಲ್ಲಿ ನಾನು ಅಂತಹ ವಿಶೇಷವಾದದ್ದೇನನ್ನೂ ನೋಡಲಿಲ್ಲ, ಯಾರ ಉಪದೇಶವನ್ನೂ ಕೇಳಲಿಲ್ಲ ಮತ್ತು ಯಾರೊಂದಿಗೂ ಮಾತನಾಡಲಿಲ್ಲ. ಯಾವುದೋ ಒಂದು ಶಕ್ತಿ ನನ್ನನ್ನು ಎಬ್ಬಿಸಿತು. ಅದು ನನ್ನನ್ನು ನೇರವಾಗಿ ಬ್ರೆಡ್ ಮತ್ತು ನೀರಿನ ಬಳಿಗೆ ಕರೆದೊಯ್ದಿತು ಮತ್ತು ಬ್ರೆಡ್ಡನ್ನು ತಿನ್ನಲು ಪ್ರೇರೇಪಿಸಿತು ನನಗೆ. ಆ ಶಕ್ತಿಯ ಹಿಡಿತದಿಂದ ಬಿಡಿಸಿಕೊಳ್ಳಲಾಗಲೇ ಇಲ್ಲ. ಭಯಪಡುತ್ತಾ ನಾನು ಗಬಗಬನೆ ಬ್ರೆಡ್ ತಿಂದು ಮುಗಿಸಿದೆ ಮತ್ತೆ ನೀರು ಕುಡಿದೆ. ಅಷ್ಟರಲ್ಲಿ ನನಗೆ ಆ

ಶಕ್ತಿಯಿಂದ ಬಿಡುಗಡೆ ಸಿಕ್ಕಿತು.''

ಉಳಿದ ಇಬ್ಬರು ಬ್ರೆಡ್ ಇಟ್ಟ ಜಾಗವನ್ನು ಪರಿಶೀಲಿಸಿದರು. ಬ್ರೆಡ್ಡೂ ಇರಲಿಲ್ಲ, ನೀರೂ ಇರಲಿಲ್ಲ. ಅವರಿಗೆ ಸಿಟ್ಟು ಬಂದು ಕೇಳಿದರು "ಅಷ್ಟು ದೊಡ್ಡ ಶಕ್ತಿ ನಿನ್ನನ್ನು ಹಿಡಿದುಕೊಂಡಿದ್ದಾಗ ನೀನೇಕೆ ನಮ್ಮನ್ನು ಎಚ್ಚರಿಸಲಿಲ್ಲ ? ಬ್ರೆಡ್ ತಿಂದು ಮುಗಿಸುವ ಮೊದಲೇ ನಮ್ಮನ್ನೂ ಎಚ್ಚರಿಸಬಹುದಿತ್ತಲ್ವಾ?''

ಬ್ರೆಡ್ ತಿಂದು ಮುಗಿಸಿದ ಮೂರನೆಯ ಯಾತ್ರಿಕ ಹೇಳಿದ - "ನಾನು ಅದನ್ನೇ ಮಾಡಿದೆ. ನಿಮ್ಮಿಬ್ಬರನ್ನೂ ಎಚ್ಚರಿಸುವ ಪ್ರಯತ್ನ ಮಾಡಿದೆ. ಆದರೆ ನೀವಿಬ್ಬರೂ ನಿಮ್ಮ ನಿಮ್ಮ ಅದ್ಭುತ ಕನಸಿನ ಲೋಕದಲ್ಲಿ ತನ್ಮಯರಾಗಿದ್ದಿರಿ. ನಿಮ್ಮಲ್ಲಿ ಒಬ್ಬ ಹಿಂದಿನ ಜನ್ಮದಲ್ಲಿ ಆನಂದದಿಂದ ವಿಹರಿಸುತ್ತಾ ಇದ್ದರೆ, ಇನ್ನೊಬ್ಬ ಭವಿಷ್ಯದ ಬದುಕಿನಲ್ಲಿ ಮುನ್ನಡೆಯಿಡುತ್ತಾ ಎಲ್ಲರಿಗೂ ಉಪಕಾರ ಮಾಡುತ್ತಾ ಇದ್ದಿರಿ. ನಾನು ನಿಮ್ಮನ್ನು ಕರೆದದ್ದನ್ನು ನೀವು ಕೇಳಿಸಿಕೊಳ್ಳಲೇ ಇಲ್ಲ. ಅಂದಾಗ ನಾನೇನು ಮಾಡಲಿ ?''

**- ಸೋಮಯಾಜಿ**

**ಶಬ್ದಗಳ ಅರ್ಥ :**

| | | | |
|---|---|---|---|
| ಆತಂಕ | - ಚಿಂತೆ ; | ಛತ್ರ | - ಧರ್ಮಶಾಲೆ; |
| ಅತ್ಯದ್ಭುತ | - ಅತೀ ಆಶ್ಚರ್ಯಕರ; | ಮಹಾಜ್ಞಾನಿ | - ದೊಡ್ಡ ಜ್ಞಾನಿ; |
| ಭವಿಷ್ಯ | - ಮುಂದೆ ಆಗುವ ಸಂಗತಿ; | ಪ್ರೇರೇಪಿಸು | - ಪ್ರಚೋದಿಸು; |
| ಪರಿಶೀಲಿಸು | - ಸೂಕ್ಷ್ಮವಾಗಿ ನೋಡುವುದು; | ತನ್ಮಯ | - ತಲ್ಲೀನ. |

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ಕಾಲ್ನಡಿಗೆಯ ಪ್ರವಾಸದಲ್ಲಿ ಎಷ್ಟು ಅಪರಿಚಿತ ಯಾತ್ರಿಕರು ಭೇಟಿಯಾದರು?

೨) ಅಪರಿಚಿತ ಯಾತ್ರಿಕರು ಯಾವ ಒಪ್ಪಂದಕ್ಕೆ ಬಂದರು ?

೩) ಮಹಾಬಯಲು ದಾಟುವಾಗ ಉಂಟಾದ ಆತಂಕ ಯಾವುದು ?

೪) ಮೊದಲ ಯಾತ್ರಿಕನು ಹೇಳಿದ ಕನಸನ್ನು ಬರೆಯಿರಿ.

೫) ಮೂರನೆಯ ಪಯಣಿಗನು ಕನಸಿನಲ್ಲಿ ಏನು ಮಾಡಿದನು ?

**ಪ್ರಶ್ನೆ ೨) ಬಿಟ್ಟ ಸ್ಥಳವನ್ನು ಪೂರ್ಣಗೊಳಿಸಿರಿ.**

೧) ದಾರಿಯುದ್ದಕ್ಕೂ ತಮ್ಮ ಬದುಕಿನ ಕಥೆಗಳನ್ನು ಹೇಳುತ್ತಾ ......... ಪ್ರಯಾಣ ಮುಂದುವರೆಸಿದರು.

೨) ಹಿಂದೆ ಮಾಡಿದ ಒಪ್ಪಂದದಂತೆ ಅದನ್ನು ...ತುಂಡು ಮಾಡಿ ಹಂಚಿಕೊಳ್ಳೋಣ.

೩) ಪ್ರಪಂಚಕ್ಕೆ ನನ್ನಿಂದ ತುಂಬಾ ............

೪) ಉಳಿದಿಬ್ಬರು .......... ಇಟ್ಟ ಜಾಗವನ್ನು ಪರಿಶೀಲಿಸಿದರು.

**ಪ್ರಶ್ನೆ ೩) ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.**

ಸ್ನೇಹ, ಕನಸು, ಉಪಕಾರ, ಜ್ಞಾನಿ.

**ಪ್ರಶ್ನೆ ೪) ಕೆಳಗಿನ ಶಬ್ದಗಳ ಅರ್ಥ ಹೇಳಿ ವಾಕ್ಯದಲ್ಲಿ ಉಪಯೋಗಿಸಿರಿ.**


೧) ಪಯಣಿಗ ೨) ಬಣ್ಣಿಸು ೩) ಭವಿಷ್ಯ

**ಉಪಕ್ರಮ :** ೧) ವಿನೋದ ಪ್ರಸಂಗಗಳನ್ನು ಕೇಳಿ ಆನಂದಿಸಿರಿ.

೨) ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಲನದ ಪ್ರಸಂಗಗಳಲ್ಲಿ ವಿನೋದ ಮತ್ತು ಭಕ್ತಿಪ್ರಧಾನ ಸನ್ನಿವೇಶಗಳನ್ನು ಅಭಿನಯಿಸಿರಿ.

AZSH9V

**ಹಗಲುಗನಸು ಕಾಣಬಾರದು.**



## ವ್ಯಾಕರಣ

**ನಾಮಪದ :** ಯಾವುದೊಂದು, ವ್ಯಕ್ತಿ, ಸ್ಥಳ , ಪ್ರಾಣಿ, ಪಕ್ಷಿ , ಭಾವನೆ ಮತ್ತು ಉದ್ಯೋಗಗಳ ಹೆಸರನ್ನು ಸೂಚಿಸುವ ಪದಗಳಿಗೆ ನಾಮಪದಗಳೆಂದು ಕರೆಯುವರು.

**ನಾಮಪದದಲ್ಲಿ ಪ್ರಕಾರಗಳು :**

೧) ರೂಢನಾಮ
೨) ಅಂಕಿತನಾಮ
೩) ಅನ್ವರ್ಥಕನಾಮ

**೧) ರೂಢನಾಮ :** ಪರಂಪರಾಗತವಾಗಿ ರೂಢಿಯಲ್ಲಿ ಇರುವ ಶಬ್ದಗಳಿಗೆ "ರೂಢನಾಮ" ಎನ್ನುವರು.

ಉದಾ : ಗಿಡ, ಮಗು, ಆಕಳು, ಗಿಳಿ, ನದಿ, ಮನುಷ್ಯ.

**೨) ಅಂಕಿತನಾಮ :** ನಿರ್ದಿಷ್ಟವಾದ ಹೆಸರನ್ನು ಸೂಚಿಸುವ ಪದಕ್ಕೆ 'ಅಂಕಿತನಾಮ' ಎಂದು ಕರೆಯುವರು.

ಉದಾ : ಹಿಮಾಲಯ, ಗೋದಾವರಿ, ಆನೆ, ಲಕ್ಷ್ಮೀ, ರಾಮ.

**೩) ಅನ್ವರ್ಥಕನಾಮ :** ಉದ್ಯೋಗ, ಸ್ವಭಾವ ಮತ್ತು ನ್ಯೂನತೆಗಳನ್ನು ಸೂಚಿಸುವ ಪದಗಳಿಗೆ 'ಅನ್ವರ್ಥಕ ನಾಮ' ಎನ್ನುವರು.

ಉದಾ : ಅಂಗಡಿಕಾರ, ಕುಂಬಾರ, ಬಡಿಗ, ಮೂಕ, ದನಗಾಹಿ, ಓಲೆಕಾರ.

# ೬. ಕರುಣಾಮಯಿ



ಕಪಿಲವಸ್ತು ನಗರವು ಕೋಸಲ ದೇಶದ ರಾಜಧಾನಿಯಾಗಿತ್ತು. ಅಲ್ಲಿ ಶುದ್ಧೋದನ ಎಂಬ ಅರಸನು ರಾಜ್ಯವಾಳುತ್ತಿದ್ದನು. ಶುದ್ಧೋದನನಿಗೆ ಸಿದ್ಧಾರ್ಥನೆಂಬ ಕುಮಾರನಿದ್ದನು. ಆತನದು ಮೃದುಸ್ವಭಾವ, ಕೋಮಲ ಹೃದಯವಾಗಿತ್ತು. ಕ್ಷತ್ರಿಯನಾದರೂ ಕರುಣೆ, ಪ್ರಾಣಿದಯೆಗಳಂತಹ ಸದ್ಗುಣ ಸಂಪನ್ನನಾಗಿದ್ದನು. ತಂದೆ ಶುದ್ಧೋದನನಿಗೆ ಮಗನ ಸ್ವಭಾವ ಹಿಡಿಸುತ್ತಿರಲಿಲ್ಲ. ಕ್ಷತ್ರಿಯನಾಗಿ ಧನುರ್ವಿದ್ಯಾ ಪಾರಂಗತನಾದ ತನ್ನ ಕುಮಾರನು ಹೀಗೆ ಮೃದು ಹೃದಯಿಯಾದರೆ ಹೇಗೆ ? ಎಂದು ಚಿಂತಿಸುತ್ತಿದ್ದನು. ಸಿದ್ಧಾರ್ಥನ ಮನ ಪರಿವರ್ತನೆಗೆಂದು ಆತನನ್ನು ಒಮ್ಮೆ ತನ್ನ ಜೊತೆಗೆ ಬೇಟೆಯಾಡಲು ಕರೆದುಕೊಂಡು ಹೋಗಬೇಕೆಂದು ನಿಶ್ಚಯಿಸಿದನು.

ಒಂದು ದಿನ ಮಹಾರಾಜ ಹಾಗೂ ಯುವರಾಜರಿಬ್ಬರೂ ಧನುರ್ಧಾರಿಗಳಾಗಿ ಬೇಟೆಯಾಡಲು ಅರಣ್ಯಕ್ಕೆ ಬಂದರು. ಅವರಿಗೆ ಅಲ್ಲೊಂದು ಜಿಂಕೆ ಕಾಣಿಸಿತು. ಆಗ ತಂದೆ ಶುದ್ಧೋದನನು ಮಗನಿಗೆ ಜಿಂಕೆಯತ್ತ ಬಾಣಹೂಡಲು ಸಂಜ್ಞೆ ಮಾಡಿದನು. ತಂದೆಯು ಹೇಳಿದಂತೆ ಸಿದ್ಧಾರ್ಥನು ಬಿಲ್ಲಿಗೆ ಬಾಣ ಹೂಡಿದನು. ಇನ್ನೇನು ಗುರಿಯಿಟ್ಟು ಬಾಣಬಿಡಬೇಕೆನ್ನುವಷ್ಟರಲ್ಲಿ

ಮನಪರಿವರ್ತನೆಯಾಯಿತು. ಆತನಿಗೆ ಜಿಂಕೆಯನ್ನು ಕಂಡು ಕನಿಕರ ಹುಟ್ಟಿತು. ಮೃದುವಾದ ದೇಹ. ಅದರ ಕಂಗಳ ಕಾಂತಿ ಕಂಡು ಸಿದ್ಧಾರ್ಥನ ಮನ ಕರಗಿತು. ಇಂತಹ ಸುಂದರವಾದ ಪ್ರಾಣಿ ಕೊಲ್ಲುವದು ಸರಿಯೇ ? ಎಂದೆನಿಸಿತು. ಒಂದು ಕ್ಷಣ ಮೌನ ತಾಳಿದ.

"ಕುಮಾರ, ಏನು ಯೋಚಿಸುತ್ತಿರುವೆ ? ಎಂದು ತಂದೆ ಕೇಳಿದರು. ಸಿದ್ಧಾರ್ಥ ಮರು ಉತ್ತರಿಸಲಿಲ್ಲ. ಮಗು ಅದೃಷ್ಟವೆಂಬಂತೆ ಈ ಜಿಂಕೆ ನಮಗೆ ಕಾಣಿಸಿದೆ. ಅದನ್ನು ಕೊಲ್ಲು." ಎಂದನು. ಸಿದ್ಧಾರ್ಥನು ಮೌನ ತಾಳಿದನು. ಇದನ್ನು ಕಂಡು ಶುದ್ಧೋದನನು ಆಶ್ಚರ್ಯಚಕಿತನಾದನು.

ಸಿದ್ಧಾರ್ಥನು ಮೆಲ್ಲಗೆ ಜಿಂಕೆಯ ಬಳಿಗೆ ಹೋದನು. ಆ ಸಾಧು ಪ್ರಾಣಿ ಹೆದರದೆ ಅಲ್ಲೇ ನಿಂತಿತು. ಸಿದ್ಧಾರ್ಥನು ಹತ್ತಿರ ಬಂದು, ಆ ಪ್ರಾಣಿಯ ಮೈ ಸವರಿದನು. ಅದಕ್ಕೆ ಹಿತವೆನಿಸಿತು. ಅದು ತನ್ನ ಮುಖವನ್ನು ಅವನ ಮುಖದ ಬಳಿಗೆ ತಂದಿತು. ಅಲ್ಲಿದ್ದ ಎಳೆ ಗರಿಕೆ ಹುಲ್ಲನ್ನು ಸಿದ್ಧಾರ್ಥನು ಅದಕ್ಕೆ ತಿನ್ನಿಸಿದನು. ಹೆದರದಿರು ಕಂದಾ, ಎಂದು ಮೈಮೇಲೆ ಕೈಯಾಡಿಸುತ್ತ ಅದನ್ನು ಸಾಂತ್ವನಗೊಳಿಸಿದನು.

ಈ ಕಾಡಿನಲ್ಲಿ ಇರುವ ದುಷ್ಟಮೃಗಗಳು ಇದನ್ನು ಕೊಂದುಬಿಡಬಹುದು ಎಂದು ಅದನ್ನು ಅರಮನೆಯ ಉದ್ಯಾನದಲ್ಲಿ ಕರೆದೊಯ್ಯುಲು ನಿರ್ಧರಿಸಿದನು. ಮಗನ ಈ ವರ್ತನೆ, ನಿರ್ಧಾರ ಕಂಡು ಶುದ್ಧೋದನನು ಕುಪಿತನಾದನು. "ಕುಮಾರ, ನಿನ್ನ ವರ್ತನೆ ಸರಿಯಲ್ಲ ! ನೀನು ಕ್ಷತ್ರಿಯನೆಂದು ಮರೆತೆಯಾ ?" ಎಂದನು.

ಆಗ ಸಿದ್ಧಾರ್ಥನು "ಕೋಪಿಸದಿರಿ ತಂದೆ, ಕ್ಷಮಿಸಿ, ಜಿಂಕೆಯಂತಹ ಮೋಹಕವಾದ, ಮೃದುವಾದ ಸಾಧು ಪ್ರಾಣಿಯನ್ನು ಕೊಲ್ಲಲು ನನಗೆ ಮನಸ್ಸು ಆಗುತ್ತಿಲ್ಲ. ಪ್ರಾಣಿಹಿಂಸೆ ಮಾನವರಿಗೆ ಯೋಗ್ಯವಲ್ಲ. ಅದರಿಂದ ಆನಂದ ದೊರಕಲಾರದು. ಅವು ಸ್ವಚ್ಛಂದವಾಗಿ ನಲಿದಾಡುವದನ್ನು ನೋಡುವುದರಲ್ಲಿಯೇ ನಿಜವಾದ ಆನಂದವಿದೆ. ಇಂತಹ ಪ್ರಾಣಿಗಳನ್ನು ಕೊಲ್ಲುವುದು ಪಾಪ. ಅದು ಧರ್ಮಸಮ್ಮತ ಕಾರ್ಯವೂ ಅಲ್ಲ. ಸತ್ಯ ! ಅಹಿಂಸೆ ಮತ್ತು ಪರೋಪಕಾರಗಳೇ ನಮಗೆ ದಾರಿದೀಪವಾಗಬೇಕು." ಎಂದನು.


ಸಿದ್ಧಾರ್ಥನ ಮಾತಿಗೆ ಶುದ್ಧೋದನನು ಬೆರಗಾದನು. ಮರು ಉತ್ತರಿಸದೇ ಮೌನನಾದನು. ಸಿದ್ಧಾರ್ಥನು ಆ ಜಿಂಕೆಯನ್ನು ಕರೆದೊಯ್ದು ಅರಮನೆಯ ಉದ್ಯಾನದಲ್ಲಿ ಇರಿಸಿದನು. ಸಂತೋಷದಿಂದ ಅದರ ಜೊತೆಗೆ ಕಾಲ ಕಳೆಯತೊಡಗಿದನು.

ಮುಂದೆ ಸಿದ್ಧಾರ್ಥನು ರಾಜವೈಭವದ ಕ್ಷಣಿಕ ಸುಖಕ್ಕೆ ಮಾರುಹೋಗಲಿಲ್ಲ. ಜೀವನದಲ್ಲಿ ಶಾಶ್ವತ ಸುಖವನ್ನು ಪಡೆಯಲು ರಾಜ್ಯ ಪರಿತ್ಯಾಗ ಮಾಡಿದನು. ಸಿದ್ಧಾರ್ಥನು ಚಕ್ರವರ್ತಿಯಾಗದೇ ಬೌದ್ಧಭಿಕ್ಷುವಾಗಿ ಭಗವಾನ್ ಬುದ್ಧನೆಂದು ಜಗದ್ವಿಖ್ಯಾತನಾದನು.

## ಅರ್ಧ ತಿಂದ ದಾಳಿಂಬೆ

ಒಮ್ಮೆ ಭಗವಾನ್ ಬುದ್ಧರು ಮಗಧ ರಾಜ್ಯದ ರಾಜಧಾನಿ ರಾಜಗೃಹಕ್ಕೆ ಆಗಮಿಸಿದರು. ಅವರ ದರ್ಶನ ಪಡೆಯಲು ಮತ್ತು ಉಪದೇಶ ಕೇಳಲು ಮಹಾದಾನಿಗಳು ಬಂದರು. ಅಲ್ಲಿಯ ದೊರೆ ಬಿಂಬಸಾರನು ಭೂಮಿ, ಧನಕನಕಗಳನ್ನು, ಹಾಗೂ ಭಕ್ತಿ ಪೂರ್ವಕವಾಗಿ ಭಿಕ್ಷುವಿಗೆ ದಾನವಾಗಿ ನೀಡಿದನು. ಅನೇಕ ದಾನಿಗಳು ಈ ಭಿಕ್ಷುವಿಗೆ ಅಮೂಲ್ಯವಾದ ಮುತ್ತು, ರತ್ನ, ಸ್ವರ್ಣಾಭರಣಗಳನ್ನು ದಾನಮಾಡಿದರು. ಭಕ್ತರ ಪ್ರೇಮದ ಭಕ್ತಿ ಕಾಣಿಕೆಯನ್ನು ಭಗವಾನ ಬುದ್ಧರು ಸ್ವೀಕರಿಸಿದರು ಮತ್ತು ಅದನ್ನು ಜನರ ಕಲ್ಯಾಣಕ್ಕಾಗಿ ಬಳಸಲು ಶಿಷ್ಯರಿಗೆ ಹೇಳಿದರು.

ಅಲ್ಲಿ ಇದ್ದಕ್ಕಿದ್ದಂತೆ 'ಶ್ರೀಮತಿ' ಎಂಬ ವೃದ್ಧ ಮಹಿಳೆ ಬಂದಳು. ಅವಳ ಕೈಯಲ್ಲಿ ಅರ್ಧ ತಿಂದ ದಾಳಿಂಬೆ ಹಣ್ಣು ಇತ್ತು. ನನಗೆ ದಾರಿಬಿಡಿ ಎನ್ನುತ್ತ ಜನಸಂದಣಿಯಲ್ಲಿ



ಮುನ್ನುಗ್ಗುತ್ತಿದ್ದಳು. ನನ್ನಲ್ಲಿರುವ ಈ ಫಲವನ್ನು ಬುದ್ಧನಿಗೆ ಅರ್ಪಿಸಬೇಕಾಗಿದೆ ಎಂದು ಜನರಿಗೆ ಹೇಳುತ್ತಿದ್ದಳು. ಈ ವೃದ್ಧೆಯ ಮಾತುಗಳನ್ನು ಕೇಳಿ ಜನರು ನಗತೊಡಗಿದರು. ವೃದ್ಧೆಯ ಈ ಪಾಡನ್ನು ದೂರದಿಂದಲೇ ಕಂಡು ಬುದ್ಧರು ತಾವೇ ಎದ್ದು ಅವಳ ಬಳಿಗೆ ಬಂದರು. ಬುದ್ಧದೇವನನ್ನು ಕಂಡು ಅವಳಿಗೆ ಬಲು ಸಂತೋಷವಾಯಿತು. ಆಗ ಅವಳು, ಭಗವಾನ್, ನಿಮಗೆ ಭಿಕ್ಷೆ ನೀಡಲು ನನ್ನ ಬಳಿ ಧನ-ಧಾನ್ಯವಾಗಲಿ, ಆಭರಣಗಳಾಗಲೀ ಇಲ್ಲ. ನನ್ನ ಬಳಿ ಇರುವುದು ಈ ದಾಳಿಂಬೆ ಹಣ್ಣು ಮಾತ್ರ. ಇದನ್ನೇ ನಿಮಗೆ ಅರ್ಪಿಸಲು ತಂದಿರುವೆ. ಸ್ವೀಕರಿಸುವಿರಾ?' ಎಂದು ಕೇಳಿದಳು.

ಆಗ ಭಗವಾನ್ ಬುದ್ಧರು ಆ ವೃದ್ಧೆಯ ಕಣ್ಣಿನಲ್ಲಿ ಕರುಣೆ, ಮನದಲ್ಲಿ ಭಕ್ತಿ ಹಾಗೂ ಅವಳ ಹೃದಯದಲ್ಲಿ ಶ್ರದ್ಧೆ ಇರುವುದನ್ನು ಕಂಡುಕೊಂಡರು. 'ತಾಯೇ, ನೀನು ಯೋಚಿಸದಿರು ಆ ಹಣ್ಣನ್ನು ದಾನಮಾಡು. ನಾನು ಸಂತೋಷದಿಂದ ಸ್ವೀಕರಿಸುತ್ತೇನೆ.' ಎಂದರು. ವೃದ್ಧೆ ನೀಡಿದ ಆ ಹಣ್ಣನ್ನು ಸ್ವೀಕರಿಸಿ ಅಲ್ಲಿಯೇ ಅದನ್ನು ಸೇವಿಸತೊಡಗಿದರು.

ಇದನ್ನು ಕಂಡು ನೆರೆದ ದಾನಿಗಳು, ಚಕ್ರವರ್ತಿಗಳು ದಿಗ್ಭ್ರಮೆಗೊಂಡರು. ಅವರು ಭಗವಾನ್, ನಾವು ತಮಗೆ ನೀಡಿದ ಅಮೂಲ್ಯವಾದ ದಾನಗಳಿಗಿಂತ ಈ ವೃದ್ಧೆಯ ಎಂಜಲು ಫಲವೇ ನಿಮಗೆ ಶ್ರೇಷ್ಠವಾಯಿತೆ ?' ಎಂದು ತಳಮಳಪಟ್ಟರು.

ಆಗ ಬುದ್ಧರು ಮುಗುಳ್ನಗುತ್ತ ಮಹಾರಾಜರೇ, ತಾವು ನೀಡಿದ ದಾನಗಳು ಕಡಿಮೆಯಂತಲ್ಲ. ಅವು ತೋರಿಕೆಯ ದಾನಗಳಾಗಿವೆ. ಸ್ವಲ್ಪ ಯೋಚಿಸಿರಿ, ತಾನು ಹಸಿದರೂ ಹಣ್ಣನ್ನು ಪೂರ್ತಿಯಾಗಿ ತಿನ್ನದೇ ಅರ್ಧ ಉಳಿಸಿ, ಭಕ್ತಿ ಭಾವದಿಂದ, ತ್ಯಾಗಮನೋವೃತ್ತಿಯಿಂದ ಅದನ್ನು ನನಗೆ ಒಪ್ಪಿಸಿದಳು. ಇದು ಅವಳ ಹೃದಯ ಶ್ರೀಮಂತಿಕೆಯ ಲಕ್ಷಣವಲ್ಲವೇ? ನನಗೆ ಆ ಹಣ್ಣಿಗಿಂತಲೂ ಅವಳ ಮಮತೆ, ಶ್ರದ್ಧೆಗಳು ಬಲು ರುಚಿಯಾಗಿ ಕಂಡವು. ಅಂತೆಯೇ ಆ ಅರ್ಧ ಹಣ್ಣನ್ನು ತಿಂದೆ ಎಂದರು. ಗೌತಮಬುದ್ಧರ ಮಾರ್ಮಿಕವಾದ ನುಡಿಗಳನ್ನು ಕೇಳಿ ರಾಜ ಮಹಾರಾಜರು ಪ್ರಭಾವಿತರಾಗಿ ಅವರ ಅನುಯಾಯಿಗಳಾದರು.

ಹೀಗೆ ಭಗವಾನ್ ಬುದ್ಧರು ಶಾಶ್ವತವಾದ ಸತ್ಯ ಮತ್ತು ಆನಂದಗಳ ಅನ್ವೇಷಣೆಗೆ ದೀರ್ಘ ಯಾತ್ರೆಯನ್ನು ಕೈಕೊಂಡರು. ಜನರಿಗೆ ದಾರಿದೀಪವಾದರು.

**- ರಘುಸುತ**

**ಶಬ್ದಗಳ ಅರ್ಥ :**

ಸಂಜ್ಞೆ – ಸನ್ನೆ ; ಕ್ಷಣಿಕ – ಅಲ್ಪ ; ಕನಿಕರ – ದಯೆ ;
ಧನ – ಹಣ ; ಕಾಂತಿ – ಬೆಳಕು ; ಕುಪಿತ – ಸಿಟ್ಟಿಗೇಳು.

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ಸಿದ್ಧಾರ್ಥನ ತಂದೆಯ ಹೆಸರು ಏನು ಇತ್ತು ?
೨) ಸಿದ್ಧಾರ್ಥನ ಮನಸನ್ನು ಪರಿವರ್ತಿಸಲು ತಂದೆಯು ಮಾಡಿದ ಉಪಾಯ ಯಾವುದು?
೩) ಜಿಂಕೆಯನ್ನು ಕಂಡಾಗ ಸಿದ್ಧಾರ್ಥನ ಮನಸ್ಸಿನಲ್ಲಿ ಉಂಟಾದ ಬದಲಾವಣೆ ಏನು?
೪) ಬುದ್ಧರು ವೃದ್ಧೆ ನೀಡಿದ ಹಣ್ಣನ್ನು ಏಕೆ ಸ್ವೀಕರಿಸಿದರು ?
೫) ಬುದ್ಧರು ಏತಕ್ಕಾಗಿ ದೀರ್ಘ ಯಾತ್ರೆಯನ್ನು ಕೈಕೊಂಡರು ?

**ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.**

೧) ......... ಕರುಣೆ, ಪ್ರಾಣಿದಯೆಗಳಂತಹ ಸದ್ಗುಣ ಸಂಪನ್ನನಾಗಿದ್ದನು.
೨) ಆತನಿಗೆ ಜಿಂಕೆಯನ್ನು ಕಂಡು.................
೩) ಜೀವನದಲ್ಲಿ .......ಸುಖ ಪಡೆಯಲು ರಾಜ್ಯಪರಿತ್ಯಾಗ ....ಮಾಡಿದರು.
೪) ಅವಳ ಕೈಯಲ್ಲಿ ಅರ್ಧತಿಂದ ........ ಹಣ್ಣು ಇತ್ತು.
೫) ಗೌತಮಬುದ್ಧರ ...... ನುಡಿಗಳನ್ನು ಕೇಳಿ ರಾಜ ಮಹಾರಾಜರು ಪ್ರಭಾವಿತರಾದರು.

**ಪ್ರಶ್ನೆ ೩) ವಾಕ್ಯದಲ್ಲಿ ಗೆರೆಹೊಡೆದ ಪದದ ನಾಮಪದ ಗುರುತಿಸಿರಿ.**

೧) ಧರ್ಮರಾಜನು ಬಹಳ ಧರ್ಮದಿಂದ ರಾಜ್ಯವಾಳಿದನು.
೨) ನಾವು ನದಿಯಲ್ಲಿ ಈಜಾಡಿದೆವು.
೩) ಈ ಆಟಿಗೆಯನ್ನು ಬಡಿಗರ ಮಾನವಪ್ನು ತಯಾರಿಸಿದ್ದಾನೆ.

**ಉಪಕ್ರಮ**

ಸಾಮ್ರಾಟ ಅಶೋಕನ ಚರಿತ್ರೆಯನ್ನು ಓದಿರಿ.

81208I

**ತಾಳಿದವನು ಬಾಳಿಯಾನು**

## ೭. ಅಮ್ಮನ ಹರಕೆ



ತೊಟ್ಟಿಲದಾಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಮೇಲಾಗಿ ಮಲಗ್ಯಾನ । ಕಂದೈಗೆ
ಮುತ್ತಿನ ದೃಷ್ಟಿ ತೆಗೆದೇನ ॥

ಹಾಲ್ಬೇಡಿ ಅತ್ತಾನ ಕೋಲ್ಬೇಡಿ ಕುಣಿದಾನ
ಮೊಸರು ಬೇಡಿ ಕೆಸರ ತುಳಿದಾನ । ಕಂದಯ್ನ
ಕುಸಲದ ಗೆಜ್ಜೆ ಕೆಸರಾಯ್ತು ॥

ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ
ಕೂಸು ಕಂದಯ್ಯ ಒಳಹೊರಗೆ । ಆಡಿದರ
ಬೀಸಣಿಕೆ ಗಾಳಿ ಸುಳಿದಾವ ॥

ಕೂಸು ನನ ಕಂದಯ್ಯ ಕೇಶ ಬಿಟ್ವಾಡಾಗ
ದೇಶದಿಂದೆರಡು ಗಿಣಿ ಬಂದು । ಕೇಳ್ಯಾವ
ಕೂಸ ನೀ ಯಾರ ಮಗನೆಂದು ॥

ಬಾರಯ್ಯ ಬಾ ನನ್ನ ಬಾಲ ಚಕ್ರವರ್ತಿ
ನಾಲೀಗೆ ಮೇಲೆ ಸರಸೋತಿ । ಇರುವಂಥ
ಬಾಲ ನೀ ಹಾಲ ಕುಡಿಬಾರೊ ॥

ಎಲ್ಲಾರ ಇರಲವ್ವ ಹುಲ್ಲಾಗಿ ಬೆಳೆಯಲಿ
ನೆಲ್ಲಿ ಬೊಡ್ಡ್ಯಾಗಿ ಚಿಗಿಯಲಿ । ಕಂದಯ್ಯ
ಜಯವಂತನಾಗಿ ಬಾಳಲಿ ॥

– ಜಾನಪದ

**ಶಬ್ದಗಳ ಅರ್ಥ :**

ಹರಕೆ – ಆಶೀರ್ವಾದ; ಹಾರೈಕೆ; ಕೇಶ – ತಲೆಗೂದಲು ;
ಬಾಲ–ಬಾಲಕ, ಚಕ್ರವರ್ತಿ – ರಾಜ

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ತಾಯಿಯು ಮಗುವನ್ನು ಏನೆಂದು ಕರೆದಿರುವಳು ?
೨) ಕಂದಯ್ಯ ಏನೇನು ಬೇಡಿ ರಂಪಾಟ ಮಾಡುವನು ?
೩) ಬೀಸಣಿಕೆ ಗಾಳಿ ಯಾವಾಗ ಬೀಸುವದು ?
೪) ಗಿಣಿಗಳು ಕೂಸಿಗೆ ಏನೆಂದು ಕೇಳುವವು ?
೫) ಬಾಲಚಕ್ರವರ್ತಿಯೆಂದು ಯಾರನ್ನು ಕರೆಯಲಾಗಿದೆ ?
೬) ಅಮ್ಮ ಏನೆಂದು ಹರಸುವಳು ?

**ಪ್ರಶ್ನೆ (೨) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣ ಮಾಡಿರಿ.**

ಕೂಸು ಇದ್ದ ಮನಿಗೆ ..........................................
..................................................................
..................................................................ಸುಳಿದಾವ.

**ಪ್ರಶ್ನೆ (೩) ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| ೧) ಮುತ್ತಿನ | ಅ) ಗಾಳಿ |
| ೨) ಕುಸಲದ | ಆ) ಚಕ್ರವರ್ತಿ |
| ೩) ಬೀಸಣಿಕೆ | ಇ) ಸರಸೋತಿ |
| ೪) ಬಾಲ | ಈ) ದೃಷ್ಟಿ |
| ೫) ನಾಲಿಗೆ | ಉ) ಗೆಜ್ಜೆ |

**ಉಪಕ್ರಮ :**

೧) ಇಂಥ ಬೇರೆ ಬೇರೆ ಜಾನಪದ ಗೀತೆಗಳನ್ನು ಕಲಿಯಿರಿ.
೨) ಈ ಗೀತೆಯನ್ನು ಸಾಭಿನಯದೊಂದಿಗೆ ರಾಗಬದ್ಧವಾಗಿ ಹಾಡಿರಿ.

**ಮಾತೆಯ ಒಡಲು, ಮಮತೆಯ ಕಡಲು**

# ೮. ಪುಣ್ಯಶ್ಲೋಕ ಅಹಿಲ್ಯಾಬಾಯಿ ಹೋಳಕರ



ಪ್ರಾಚೀನ ಕಾಲದಿಂದಲೂ ಮಹಿಳೆಯರು ಇತಿಹಾಸದ ಪುಟಗಳಲ್ಲಿ ದಾಖಲೆಗಳನ್ನು ನಿರ್ಮಿಸುತ್ತಲೇ ಬಂದಿದ್ದಾರೆ. ಛತ್ರಪತಿ ಶಿವಾಜಿ ಮಹಾರಾಜರಂತಹ ವೀರ ಯೋಧರನ್ನು ರೂಪಿಸುವಲ್ಲಿ ರಾಜಮಾತೆ ಜಿಜಾಬಾಯಿಯವರ ಅಮೋಘ ಪ್ರಯತ್ನವಿದೆ. ಯುದ್ಧದಲ್ಲಿ ಚಂಡಿ ಚಾಮುಂಡಿಯಂತೆ ಹೋರಾಡಿದ ಝಾಂಸಿಯ ರಾಣಿ ಲಕ್ಷ್ಮೀಬಾಯಿಯಲ್ಲಿ ವೀರತನವಿದೆ. ಬ್ರಿಟಿಷರ ವಿರುದ್ಧ ರಣಕಹಳೆ ಊದಿದ ಕಿತ್ತೂರ ರಾಣಿ ಚೆನ್ನಮ್ಮನಲ್ಲಿ ಧೈರ್ಯವಿದೆ. ಅನುಭವ ಮಂಟಪದಲ್ಲಿ ಜ್ಞಾನ ಸುಧೆಯನ್ನೇ ಹರಿಸಿದ ಶಿವಶರಣೆ ಅಕ್ಕ ಮಹಾದೇವಿಯ ಪಾಂಡಿತ್ಯ, ಅಂತರಾಳ ವೀರರಾದ ಕಲ್ಪನಾ ಚಾವ್ಲಾ ಮತ್ತು ಸುನೀತಾ ವಿಲಿಯಮ್ಸ್ ಇವರ ಸಾಹಸ ಹೀಗೆ ಅನೇಕ ಮಹಿಳೆಯರು ಒಂದೊಂದು ವಿಶಿಷ್ಟ ಕ್ಷೇತ್ರದಲ್ಲಿ ಸಾಧನೆ ಮಾಡಿ ಹೆಸರು ಗಳಿಸಿದ್ದಾರೆ. ಆದರೆ ಒಬ್ಬಳೇ ಮಹಿಳೆ ಈ ಎಲ್ಲ ಸಾಧನೆಗಳನ್ನು ಮಾಡಿ ಬಹುಮುಖ ಸಾಧನೆಯ ಮಹಾನ್ ಚೇತನವಾಗಿ, ಧ್ರುವತಾರೆಯಂತೆ ಕಂಗೊಳಿಸಿದವರು ''ಇಂದೂರಿನ ರಾಣಿ ಅಹಿಲ್ಯಾಬಾಯಿ ಹೋಳಕರ.''

ಅಹಿಲ್ಯಾಬಾಯಿಯವರು ಮಹಾರಾಷ್ಟ್ರ ರಾಜ್ಯದ ಅಹಮದನಗರ ಜಿಲ್ಲೆಯ ಚಾಮಖೇಡ ತಾಲೂಕಿನ ಚೌಂಡಿ ಎಂಬ ಗ್ರಾಮದಲ್ಲಿ ೩೧ ಮೇ ೧೭೨೫ ರಲ್ಲಿ ಜನಿಸಿದರು. ತಂದೆಯ ಹೆಸರು ಮಾಣಕೋಜಿ ಶಿಂದೆ. ತಾಯಿ ಸುಶೀಲಾಬಾಯಿ.

ಮಾಣಕೋಜಿಯವರು ಚೌಂಡಿಯ ಪಾಟೀಲ ರಾಗಿದ್ದರು. ಅಹಿಲ್ಯಾಬಾಯಿಯವರಿಗೆ ಚಿಕ್ಕಂದಿನಲ್ಲಿ ರಾಜ - ರಾಣಿಯರ ಕಥೆಗಳು, ಯುದ್ಧ ಪ್ರಸಂಗಗಳು, ಕುದುರೆ ಸವಾರಿ ಮುಂತಾದ ವಿಷಯಗಳನ್ನು ಕೇಳುವ ಕುತೂಹಲವಿತ್ತು. ಗುರು - ಹಿರಿಯರಲ್ಲಿ ಭಕ್ತಿ, ಲಿಂಗ ಪೂಜೆಯಲ್ಲಿ ತಲ್ಲೀನತೆ ಇವು ಪ್ರಮುಖ ಹವ್ಯಾಸಗಳಾಗಿದ್ದವು. ಮುಂದೆ ಈಶ್ವರಲಿಂಗವು ಅಹಿಲ್ಯಾಬಾಯಿಯವರ ಜೀವನದ ಅವಿಭಾಜ್ಯ ಅಂಗವಾಗಿ ಪರಿಣಮಿಸಿತು.

ಇಂದೂರಿನ ಅರಸರಾಗಿದ್ದ ಮಲ್ಹಾರರಾವ ಹೋಳಕರರ ಮಗನಾದ ರಾಜಕುಮಾರ ಖಂಡೇರಾವ ಅವರೊಡನೆ ಅಹಿಲ್ಯಾಬಾಯಿಯವರ ವಿವಾಹವಾಯಿತು. ಮಲ್ಹಾರರಾವರು ತಮ್ಮ ಸೊಸೆಯ ಲಕ್ಷಣಗಳನ್ನು ಗಮನಿಸಿ ಅವಳಿಗೆ ರಾಜೋಚಿತ ಶಿಕ್ಷಣವನ್ನು ಕೊಡಿಸಿದರು. ಹಾಲುಜೇನಿನಂಥ ದಾಂಪತ್ಯ ಜೀವನದಲ್ಲಿ ಅಹಿಲ್ಯಾಬಾಯಿಯವರಿಗೆ ಮಾಲೇರಾವ ಮತ್ತು ಮುಕ್ತಾಬಾಯಿ ಎಂಬ ಇಬ್ಬರು ಮಕ್ಕಳಿದ್ದರು. ಒಳ್ಳೆಯ ಸದ್ಗೃಹಿಣಿಯಾಗಿ, ಹೋಳಕರ ಮನೆತನದ ಆದರ್ಶ ಸೊಸೆಯಾಗಿ ಬಾಳತೊಡಗಿದರು. ಇಂಥ ಆನಂದದ ಸಮಯದಲ್ಲಿ ಭಯಂಕರವಾದ ಬರಸಿಡಿಲೊಂದು ಬಂದೆರಗಿತು. ಕುಂಬೇರಿ ಕದನದಲ್ಲಿಪತಿ ಖಂಡೇರಾವರಿಗೆ ವೀರಗತಿ ಪ್ರಾಪ್ತವಾಯಿತು. ಆದರೂ ಅಹಿಲ್ಯಾಬಾಯಿಯವರು ಬಂದ ದು:ಖವನ್ನು ನುಂಗಿಕೊಂಡು ಪ್ರಜಾಪರಿಪಾಲನೆಯನ್ನು ಮಾಡತೊಡಗಿದರು.

ಮಾವ ಮಲ್ಹಾರಿರಾವ ತನ್ನ ಮೊಮ್ಮಗನಾದ ಮಾಲೇರಾವನನ್ನು ಸಿಂಹಾಸನದಲ್ಲಿ ಕೂಡ್ರಿಸಿದರು. ಅಪ್ಪಾಸಾಹೇಬ ಬಹಾಡ ಎಂಬ ಸರದಾರನ ಮಗಳಾದ ಮೈನಾಳೊಂದಿಗೆ ವಿವಾಹ ಮಾಡಿದರು. ಕೆಲದಿವಸಗಳ ನಂತರ ಮಂಗಳೂರ ಕದನ ನಡೆದಾಗ ಮಾವ ಮಲ್ಹಾರಿರಾವರು ವೀರಗತಿ ಪಡೆದರು, ನಂತರ ಅನಾರೋಗ್ಯದಿಂದ ಬಳಲುತ್ತಿದ್ದ ಮಾಲೇರಾವನು ಚಿಕಿತ್ಸೆ ಫಲಕಾರಿಯಾಗದೇ ವಿಧಿವಶನಾದನು. ಈ ರೀತಿಯಾಗಿ ವಿಪತ್ತುಗಳ ಮೇಲೆ ವಿಪತ್ತುಗಳು ಬಂದರೂ ಅಹಿಲ್ಯಾಬಾಯಿಯವರು ಎದೆಗುಂದಲಿಲ್ಲ.

ರಾಜಸೂತ್ರಗಳನ್ನೆಲ್ಲ ತಮ್ಮ ಕೈಗೆ ತೆಗೆದುಕೊಂಡರು. ಪ್ರಜೆಗಳಿಗೆ ಒಳ್ಳೆಯ ಆಡಳಿತ ನೀಡತೊಡಗಿದರು. ಪ್ರಜೆಗಳ ಕಲ್ಯಾಣಕ್ಕಾಗಿ ಕೆರೆ, ಕಾಲುವೆಗಳನ್ನು ನಿರ್ಮಿಸಿದರು. ಕೃಷಿಗೆ ಹೆಚ್ಚಿನ ಪ್ರಾಶಸ್ತ್ಯನೀಡಿದರು. ದಾಸೋಹಗಳನ್ನು, ಪ್ರಾರಂಭಿಸಿದರು. ಸರ್ವ ಧರ್ಮಗಳನ್ನು ಸಮಾನ ದೃಷ್ಟಿಯಿಂದ ನೋಡತೊಡಗಿದರು. ಮಠ - ಮಂದಿರಗಳನ್ನೂ, ದರ್ಗಾಗಳನ್ನು ಕಟ್ಟಿಸಿದರು ಮತ್ತು ಜೀರ್ಣೋದ್ಧಾರ ಮಾಡಿಸಿದರು. ದಕ್ಷ ಆಡಳಿತಗಾರರಾಗಿ, ಸಮಾಜ ಸೇವಕರಾಗಿ ಜನಸೇವೆ ಮಾಡಿದರು.

ಕೊಲೆ ಸುಲಿಗೆಗಾರರ ಜೀವನಕ್ಕೆ ಅಗತ್ಯವಾದ ಅನುಕೂಲಗಳನ್ನು ಮಾಡಿ ಅವರನ್ನು ಸನ್ಮಾರ್ಗಕ್ಕೆ ತಂದರು. ರಾಜ್ಯದಲ್ಲಿ ಶಾಂತಿ ಸುಭಿಕ್ಷೆಗಳು ನೆಲೆ ನಿಲ್ಲುವಂತೆ ಮಾಡಿದರು. ಗಡಿ ರಾಜ್ಯಗಳ ಅರಸರನ್ನು ಆತ್ಮೀಯರಂತೆ ಕಾಣುವುದು ರಾಣಿ ಅಹಿಲ್ಯಾಬಾಯಿಯವರ ರಾಜ ತಂತ್ರಗಳ ಪ್ರಮುಖ ಅಂಶವಾಗಿತ್ತು. ನೆರೆ ರಾಜ್ಯದಲ್ಲಿ ಆಪತ್ತು ಬಂದೊದಗಿದಾಗ ಅದರ ನಿರ್ವಹಣೆಗಾಗಿ ಸದಾ ಸನ್ನದ್ಧರಾಗಿರುತ್ತಿದ್ದರು. ವೈರಿಗಳ ಆಕ್ರಮಣದ ಸಮಯದಲ್ಲಿ ಚಾಣಾಕ್ಷತನದಿಂದ ವ್ಯವಹರಿಸುತ್ತಿದ್ದರು. ಸ್ವತ: ಶಸ್ತ್ರಸಜ್ಜಿತಳಾಗಿ ರಣಭೂಮಿಯಲ್ಲಿ ಧುಮುಕಿ ರಣಚಂಡಿಯಂತೆ ಹೋರಾಡುತ್ತಿದ್ದರು, ಈ ರೀತಿ ಅವರು ಆಡಳಿತ ನಡೆಸುವ ವಿಧಾನವೇ ಒಂದು ರೀತಿ ವಿಶಿಷ್ಟವಾಗಿತ್ತು.

ರಾಣಿ ಅಹಿಲ್ಯಾಬಾಯಿಯವರು ಬಡವರ ಪಾಲಿಗೆ ಭಾಗ್ಯಲಕ್ಷ್ಮೀ ಆಗಿದ್ದರು. ಯಾಚಕರಿಗೆ ಕಲ್ಪತರು ಆಗಿದ್ದರು. ಪ್ರಜೆಗಳನ್ನು ತಾಯಿಯ ತರಹ ಪಾಲನೆಮಾಡುತ್ತಿದ್ದರು. ಮಲ್ಲಿಗೆಯಂತಹ ಮನಸ್ಸಿದ್ದರೂ ವೈರಿಗಳ ಶರೀರ ಭೇದಿಸುವ ಕಠಾರಿಯಾಗಿದ್ದರು. ಜೊತೆಗೆ ಶ್ರೇಷ್ಠ ನ್ಯಾಯದಾನಿಯೂ ಆಗಿದ್ದರು. ಬಡವರ ಬಗ್ಗೆ ಅವರ ಹೃದಯದಲ್ಲಿ ದಯೆ ತುಂಬಿತುಳುಕುತಿತ್ತು. ರಾಣಿಯಾಗಿದ್ದರೂ ಸಹ ರಾಜವಸ್ತ್ರ ಧರಿಸಲಿಲ್ಲ. ಸಿಂಹಾಸನವೇರಿ ಮೆರೆಯಲಿಲ್ಲ. ಆಡಂಬರ ' ರಹಿತ ಜೀವನ ಸಾಗಿಸಿದರು. ಸಾದಾ ಸೀರೆ ಉಡುತ್ತಿದ್ದರು. ಕೊರಳಲ್ಲಿ ಒಂದು ಮುತ್ತಿನ ಹಾರ ಧರಿಸುತ್ತಿದ್ದರು. ಶಿವಲಿಂಗವು ಅವರ ಕೈಯಲ್ಲಿ ಕಂಗೊಳಿಸುತ್ತಿತ್ತು. ರಾಜ್ಯವನ್ನು ಆರಾಧ್ಯ ದೇವ ಭಗವಾನ್ ಶಿವನಿಗೆ ಅರ್ಪಿಸಿದ್ದರು. ಶ್ರೀ ಶಂಕರನ ಹೆಸರಿನಲ್ಲಿ ರಾಜಾಜ್ಞೆಗಳನ್ನು ಬರೆದು ತಾನು ಅದರ ಸೇವಕಿಯಾಗಿ ರುಜು ಮಾಡುತ್ತಿದ್ದರು. ಅಹಿಲ್ಯಾಬಾಯಿಯವರು ತಮ್ಮ ಆಡಳಿತಾವಧಿಯಲ್ಲಿ ಅನುಷ್ಠಾನಕ್ಕೆ ತಂದ ಕೋಟಿ ಲಿಂಗಾರ್ಚನೆಯು ಮಹೇಶ್ವರ ಮತ್ತು ಓಂಕಾರೇಶ್ವರಗಳಲ್ಲಿ ಇವತ್ತಿಗೂ ಆಚರಣೆಯಲ್ಲಿದೆ.

ಎಪ್ಪತ್ತರ ಇಳಿ ವಯಸ್ಸಿನಲ್ಲಿ ದಿನಾಂಕ: ೧೩ ಅಗಸ್ಟ ೧೭೯೫ ರಲ್ಲಿ ರಾಣಿ ಅಹಿಲ್ಯಾಬಾಯಿ ಲಿಂಗೈಕ್ಯರಾದರು. ತಮ್ಮ ಆಡಳಿತದುದ್ದಕ್ಕೂ ಪ್ರಜೆಗಳ ಉನ್ನತಿಗಾಗಿ ಶ್ರಮಿಸಿದರು. ಸ್ವಂತ ಸಂಪತ್ತನ್ನು ದಾನ - ಧರ್ಮಗಳಿಗಾಗಿ ಮೀಸಲಿಟ್ಟರು. ಮಹಾ ಶಿವಶರಣೆಯಾಗಿ, ಮಹಾ ದಾಸೋಹಿಯಾಗಿ, ಲೋಕಮಾತೆಯಾಗಿ, ಕುಲಭೂಷಣೆ, ರಾಜಯೋಗಿನಿ ಮತ್ತು ಪುಣ್ಯಶ್ಲೋಕ ಮುಂತಾದ ಉಪಾದಿಗಳಿಂದ ಭಾರತೀಯರಿಗೆ ಪೂಜ್ಯನೀಯರಾಗಿದ್ದಾರೆ.

**- ಚಂದ್ರಕಾಂತ ಬಿಜ್ಜರಗಿ**

**ಶಬ್ದಗಳ ಅರ್ಥ :**

ಅಮೋಘ – ಶ್ರೇಷ್ಠ; ಅಂತರಾಳ – ಬಾಹ್ಯಾಕಾಶ; ಕಂಗೊಳಿಸು –ಶೋಭಿಸು;
ಕುತೂಹಲ – ಆಸಕ್ತಿ ; ವೀರಗತಿ– ವೀರಮರಣ; ವಿಪತ್ತು – ಸಂಕಟ ;
ರಾಜೋಚಿತ– ರಾಜಮರ್ಯಾದೆ; ಯಾಚಕ – ಬೇಡುವವ ; ಉನ್ನತಿ – ಅಭಿವೃದ್ಧಿ ;
ಉಪಾದಿ – ಪ್ರಶಸ್ತಿ.

**ವಿರುದ್ಧಾರ್ಥಕ ಶಬ್ದಗಳು :**

ವೀರ X ಹೇಡಿ ; ಧೈರ್ಯ X ಅಧೈರ್ಯ ; ಅನುಭವ X ಅನಾನುಭವ
ಭಾಜ್ಯ X ಅವಿಭಾಜ್ಯ ; ಆರೋಗ್ಯ X ಅನಾರೋಗ್ಯ;
ಅನುಕೂಲ X ಅನಾನುಕೂಲ ; ಉನ್ನತಿ X ಅವನತಿ

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

೧) ಅಹಿಲ್ಯಾಬಾಯಿಯವರು ಯಾವಾಗ ಜನಿಸಿದರು ?
೨) ಅಹಿಲ್ಯಾಬಾಯಿಯವರ ಹವ್ಯಾಸಗಳು ಯಾವವು ?
೩) ಯಾರ ಜೊತೆಗೆ ಅಹಿಲ್ಯಾಬಾಯಿಯವರ ವಿವಾಹವಾಯಿತು ?
೪) ಅಹಿಲ್ಯಾಬಾಯಿಯವರ ಆಡಳಿತ ನಡೆಸುವ ವಿಧಾನ ಹೇಗಿತ್ತು ?
೫) ಅಹಿಲ್ಯಾಬಾಯಿಯವರು ಯಾವ ರೀತಿಯಾಗಿ ಜೀವನ ಸಾಗಿಸಿದರು ?

**ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.**

೧) ಬಹುಮುಖ ಸಾಧನೆಯ ಮಹಾನ್ ಚೇತನವಾಗಿ ಧ್ರುವತಾರೆಯಂತೆ ........... ಕಂಗೊಳಿಸಿದರು.
೨) ........ ಚೌಂಡಿಯ ಪಾಟೀಲರಾಗಿದ್ದರು.
೩) ಅಹಿಲ್ಯಾಬಾಯಿಯವರಿಗೆ ಮಾಲೇರಾವ ಮತ್ತು ......... ಎಂಬ ಇಬ್ಬರು ಮಕ್ಕಳಿದ್ದರು.
೪) ಪ್ರಜೆಗಳ ಕಲ್ಯಾಣಕ್ಕಾಗಿ ಕೆರೆ ............ ನಿರ್ಮಿಸಿದರು.
೫) .......... ಅವರ ಕೈಯಲ್ಲಿ ಕಂಗೊಳಿಸುತ್ತಿತ್ತು.

**ಪ್ರಶ್ನೆ ೩) ಹೊಂದಿಸಿ ಬರೆಯಿರಿ.**

| | |
|---|---|
| ೧) ರಾಜಮಾತೆ ಜಿಜಾಬಾಯಿ | ಅ) ಸಾಹಸಿ |
| ೨) ರಾಣಿ ಲಕ್ಷ್ಮೀಬಾಯಿ | ಆ) ಜ್ಞಾನಸುಧೆ |
| ೩) ಕಿತ್ತೂರ ಚೆನ್ನಮ್ಮ | ಇ) ವೀರತನ |
| ೪) ಅಕ್ಕ ಮಹಾದೇವಿ - | ಈ) ಅಮೋಘ ಪ್ರಯತ್ನ |
| ೫) ಕಲ್ಪನಾ ಚಾವ್ಲಾ - | ಉ) ಧೈರ್ಯ |

**ಪ್ರಶ್ನೆ ೪) ಕೆಳಗಿನ ಶಬ್ದಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ.**

೧) ಹವ್ಯಾಸ    ೨) ಬರಸಿಡಿಲು    ೩) ವೀರಗತಿ
೪) ಎದೆಗುಂದು    ೫) ದಯೆ

**ಪ್ರಶ್ನೆ ೫) ಕೆಳಗಿನ ಶಬ್ದಗಳಿಗೆ ಎರಡೆರಡು ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ.**

೧) ಕಂಗೊಳಿಸು    ೨) ಹವ್ಯಾಸ    ೩) ದಂಪತಿ
೪) ಲಿಂಗೈಕ್ಯ    ೫) ಆತ್ಮೀಯತೆ

## ಉಪಕ್ರಮ

೧) ಇತಿಹಾಸದಲ್ಲಿ ಆಗಿಹೋದ ಪ್ರಸಿದ್ಧ ರಾಜ-ರಾಣಿಯರ ಚರಿತ್ರೆಗಳನ್ನು ಓದಿರಿ.
೨) ರಾಜರ್ಷಿ ಶಾಹೂ ಮಹಾರಾಜರ ಆದರ್ಶ ಕುರಿತು ಕೋಲಾಜ ತಯಾರಿಸಿರಿ.

81K5ET

## ಸಾಹಸ ಯಶಸ್ಸಿಗೆ ಪೂರಕ



## ವ್ಯಾಕರಣ

**ಸರ್ವನಾಮ :** ನಾಮಪದದ ಬದಲಾಗಿ ಉಪಯೊಗಿಸುವ ಶಬ್ದಗಳಿಗೆ ಸರ್ವನಾಮ ಎನ್ನುವರು.

ಉದಾ – ನಾನು, ನಾವು, ನೀನು, ನೀವು, ಅವನು, ಅವಳು, ಅದು, ಯಾರು, ಅಲ್ಲಿ.

**ಸರ್ವನಾಮದಲ್ಲಿ ಪ್ರಕಾರಗಳು :-**

೧) ಪುರುಷಾರ್ಥಕ ಸರ್ವನಾಮ
೨) ಪ್ರಶ್ನಾರ್ಥಕ ಸರ್ವನಾಮ
೩) ಆತ್ಮಾರ್ಥಕ ಸರ್ವನಾಮ

**೧) ಪುರುಷಾರ್ಥಕ ಸರ್ವನಾಮ:** ಮಾತನಾಡುವವರ ಹೆಸರಿನ ಬದಲಾಗಿ ಉಪಯೋಗಿಸುವ ಶಬ್ದಗಳು 'ಪುರುಷಾರ್ಥಕ ಸರ್ವನಾಮ' ಎನ್ನುವರು.

ಉದಾ : ನಾನು, ನಾವು, ನೀನು, ನೀವು, ಅವನು, ಅವಳು, ಇತ್ಯಾದಿ.

**೨) ಪ್ರಶ್ನಾರ್ಥಕ ಸರ್ವನಾಮ :** ಪ್ರಶ್ನೆಗಳನ್ನು ಕೇಳುವ ಶಬ್ದಗಳಿಗೆ 'ಪ್ರಶ್ನಾರ್ಥಕ ಸರ್ವನಾಮ' ಎನ್ನುವರು.

ಉದಾ : ಏಕೆ, ಹೇಗೆ, ಯಾರು, ಏನು, ಎಲ್ಲಿ, ಯಾರು ಇತ್ಯಾದಿ.

**೩) ಆತ್ಮಾರ್ಥಕ ಸರ್ವನಾಮ :** ಸ್ವಂತದ ಸಲುವಾಗಿ ಉಪಯೋಗಿಸಲ್ಪಡುವ ಸರ್ವನಾಮುಗಳಿಗೆ 'ಆತ್ಮಾರ್ಥಕ ಸರ್ವನಾಮು' ಗಳೆನ್ನುವರು.

ಉದಾ : ತಾನು, ತಾವು, ತನ್ನ, ತಮ್ಮ, ತನಗೆ ಇತ್ಯಾದಿ.

# ೯. ಪಕ್ಷಿಗಳು

ಈ ವಿಸ್ಮಯವಾದ ಜಗತ್ತಿನಲ್ಲಿ ಅನೇಕ ಪ್ರಕಾರದ ಪ್ರಾಣಿ - ಪಕ್ಷಿಗಳಿವೆ. ನಾವು ನಮ್ಮ ಪರಿಸರದಲ್ಲಿರುವ ಅನೇಕ ಪಕ್ಷಿಗಳನ್ನು ನೋಡಿದ್ದೇವೆ. ಅವುಗಳ ಆಹಾರ, ವಿಹಾರ ಹಾಗೂ ಜೀವನಕ್ರಮಗಳ ಬಗ್ಗೆ ಅರಿತುಕೊಂಡಿದ್ದೇವೆ, ಇವುಗಳ ಹೊರತಾಗಿ ನಮಗೆ ಪರಿಚಯವಿರದ ಕೆಲವು ಪಕ್ಷಿಗಳ ಪರಿಚಯವನ್ನು ಮಾಡಿಕೊಳ್ಳೋಣ.

## ಹೂಪೊ



ಹೂಪೊ ನಸುಕಂದು ಬಣ್ಣದ ಪಕ್ಷಿ. ಇದರ ಬೆನ್ನು ಪುಕ್ಕಗಳು ಮತ್ತು ತೋಕೆ - ಇವುಗಳ ಮೇಲೆ ಬಿಳಿ ಮತ್ತು ಕಪ್ಪು ಪಟ್ಟಿಗಳಿರುತ್ತವೆ. ಇದರ ತಲೆಯ ಮೇಲೆ ದೊಡ್ಡ ಜುಟ್ಟು ಇರುತ್ತದೆ. ಇದು ಬೀಸಣಿಕೆಯಂತೆ, ತೆರೆದುಕೊಳ್ಳುತ್ತದೆ ಹಾಗೂ ಮುಚ್ಚಿಕೊಳ್ಳುತ್ತದೆ.

ಹೂಪೊಗೆ ಉದ್ದವಾದ ಹಾಗೂ ಬಾಗಿದ ಕೊಕ್ಕು ಇರುತ್ತದೆ. ತನ್ನ ಕೊಕ್ಕಿನಿಂದ ನೆಲ ಅಗೆದು, ಕೀಟಗಳು ಮತ್ತು ಮರಿ ಹುಳಗಳನ್ನು ತಿನ್ನುತ್ತದೆ.

ತಾಯಿ ಹಕ್ಕಿ ಮರದ ಪೊಟರೆಯಲ್ಲಿ ಅಥವಾ ಗೋಡೆ ಮೇಲಿನ ಗೂಡಿನಲ್ಲಿ ಐದರಿಂದ ಆರು ಮೊಟ್ಟೆಗಳನ್ನು ಇಡುತ್ತದೆ. ಇದು ಪೊಟರೆಯ ಸುತ್ತಲೂ ಕಡ್ಡಿಗಳನ್ನು ಇಟ್ಟು ಹೊಲಸು ಪದಾರ್ಥಗಳನ್ನು ತಂದು ಹಾಕಿ, ಗೂಡಿಗೆ ಗಟ್ಟಿಯಾದ ಆವರಣ ಕೊಡುತ್ತದೆ. ಆದ್ದರಿಂದ ಹತ್ತಿರ ಹೋದರೆ, ಈ ಗೂಡಿನಿಂದ ದುರ್ವಾಸನೆ ಬರುತ್ತದೆ. ಮೊಟ್ಟೆಗಳಿಂದ ಮರಿಗಳು ಹೊರ ಬರುವಾಗ, ತಾಯಿ ಗೂಡು ಬಿಟ್ಟು ಹೊರಗೆ ಹೋಗುವುದಿಲ್ಲ, ಗಂಡು ಹಕ್ಕಿಯೇ ಅದಕ್ಕೆ ಆಹಾರವನ್ನು ತಂದು ಕೊಡುತ್ತದೆ.

## ದೊಡ್ಡ ಕೋಡಿನ ಗೂಬೆ



ದೊಡ್ಡ ಕೋಡುಗಳಿರುವ ಗೂಬೆ, ಇಡೀ ದಿನ ಕಾಡುಗಳ ಪೊದೆಯೊಳಗೆ ಇದ್ದು ರಾತ್ರಿಯ ವೇಳೆ ಮಾತ್ರ ಹೊರಕ್ಕೆ ಬರುತ್ತದೆ.

ಗೂಬೆ ಕಂದು ಬಣ್ಣದ ಚುಕ್ಕೆಗಳನ್ನು ಹೊಂದಿರುವ ಒಂದು ಪಕ್ಷಿ. ಎದೆ ಭಾಗದ ಕೆಳಗೆ, ತೆಳು ಬಣ್ಣವಿರುತ್ತದೆ. ಇದಕ್ಕೆ ಕೂದಲಿನ ದೊಡ್ಡ ಕುಚ್ಚುಗಳಿರುತ್ತವೆ. ಈ ಕುಚ್ಚುಗಳು ಕಿವಿಗಳು ಅಥವಾ ಕೋಡುಗಳನ್ನು ಹೋಲುವಂತೆ ನಿಮಿರಿ ನಿಂತಿರುತ್ತವೆ. ಆದ್ದರಿಂದಲೇ ಇದಕ್ಕೆ ಕೋಡು ಗೂಬೆ ಅಥವಾ ಗ್ರೇಟ್ ಹಾರ್ನ್ಡ್ ಔಲ್ ಎಂಬ ಹೆಸರು. ಇದಕ್ಕೆ ಗುಂಡಗಿರುವ ದೊಡ್ಡ ಕಣ್ಣುಗಳಿದ್ದು ಕಗ್ಗತ್ತಲಲ್ಲೂ ಚೆನ್ನಾಗಿ ಕಾಣಿಸುತ್ತವೆ. ಇದಕ್ಕೆ ಇಲಿ ಸುಂಡಗಳು, ಇಲಿಗಳು, ಸಣ್ಣ ಪ್ರಾಣಿಗಳು, ಮೀನು ಮತ್ತು ಏಡಿಗಳೇ ಆಹಾರ. ಮರದ ಮೇಲೆ ಅಥವಾ ಕಲ್ಲುಬಂಡೆ ಮೇಲೆ ಸಹಜವಾಗಿಯೇ ನಿರ್ಮಿತವಾಗಿರುವ ಕುಳಿಯೇ ಗೂಬೆಯ ಗೂಡು. ಹೆಚ್ಚಾಗಿ ಹಳ್ಳಿಗಳ ಹತ್ತಿರವೇ ಗೂಬೆಗಳ ವಾಸ. ತಾಯಿ ಗೂಬೆ ನವೆಂಬರ್ ನಿಂದ ಮಾರ್ಚ್ ನಡುವೆ, ಮೂರು ಅಥವಾ ನಾಲ್ಕು ಕೆನೆ ಬಣ್ಣದ ಮೊಟ್ಟೆಗಳನ್ನು ಇಡುತ್ತದೆ.

ಸಂಪೂರ್ಣ ಕಪ್ಪಗಿರುವ ಹಕ್ಕಿಗಳು ಬಹಳ ವಿರಳ. ಇವುಗಳಲ್ಲಿ ರ್‍ಯಾಕೆಟ್ ತೋಕೆಯ ಡ್ರಾಂಗೊ ಸಹ ಒಂದು. ಇದು ಹೊಳೆಯುವ ಅಚ್ಚ ಕಪ್ಪು ಬಣ್ಣದಲ್ಲಿರುತ್ತದೆ. ಇದರ ಹಣೆಯ ಮೇಲೆ ಕಪ್ಪುಬಣ್ಣದ ಜುಟ್ಟು ನಿಮಿರಿ ನಿಂತಿರುತ್ತದೆ. ಇದರ ತೋಕೆ ಉದ್ದವಾಗಿದ್ದು ಕವಲೊಡೆದಿರುತ್ತದೆ. ಹಕ್ಕಿಗಿಂತಲೂ ಉದ್ದದ ಇದರ ತೋಕೆಯಲ್ಲಿ ತಂತಿಯಂತಿರುವ ಎರಡು ಗರಿಗಳಿರುತ್ತವೆ. ಗರಿಗಳು ತುದಿಯಲ್ಲಿ ಅಗಲವಾಗಿರುತ್ತವೆ.

## ರ್ಯಾಕೆಟ್ ತೋಕೆಯ ಡ್ರಾಂಗೊ



ರ್ಯಾಕೆಟ್ ತೋಕೆಯ ಡ್ರಾಂಗೊ ಹಕ್ಕಿಗಳ ವಾಸ ಪರ್ವತಗಳ ತಪ್ಪಲಲ್ಲಿರುವ ಅರಣ್ಯಗಳಲ್ಲಿ. ಹತ್ತಿರದ ಹಳ್ಳಿಗಳಿಗೆ ಅವು ಹೋಗುವುದು ಬಹಳ ಅಪರೂಪ. ಹಿಂಡುಗಳಲ್ಲಿ ವಾಸಿಸುವ ಈ ಹಕ್ಕಿಗಳು ತುಂಬ ಗದ್ದಲ ಮಾಡುತ್ತವೆ. ಡ್ರಾಂಗೊ ಇತರ ಹಕ್ಕಿಗಳ ಕೂಗನ್ನು ಅನುಕರಣೆ ಮಾಡುತ್ತದೆ. ಇದು ಚಿಟ್ಟೆಗಳು ಮತ್ತು ಕೀಟಗಳನ್ನು ತಿನ್ನುತ್ತದೆ. ಹೂವುಗಳಿಂದ ಮಕರಂದ ಹೀರುತ್ತದೆ.

ತಾಯಿ ಹಕ್ಕಿ ಮಾರ್ಚ್‌ನಿಂದ ಜೂನ್ ವರೆಗಿನ ಅವಧಿಯಲ್ಲಿ ಮೂರು ಅಥವಾ ನಾಲ್ಕು ಮೊಟ್ಟೆಗಳನ್ನು ಇಡುತ್ತದೆ. ಕೆನೆ ಬಣ್ಣದ ಮೊಟ್ಟೆಗಳ ಮೇಲೆ, ಕಂದು ಬಣ್ಣದ ಮಚ್ಚೆಗಳಿರುತ್ತವೆ. ಸಣ್ಣ ಕಡ್ಡಿಗಳು ಮತ್ತು ಬೇರುಗಳಿಂದ ನಿರ್ಮಿಸಿದ ಆಳವಾದ ಗೂಡಿನಲ್ಲಿ ಇದು ಮೊಟ್ಟೆಗಳನ್ನು ಇಡುತ್ತದೆ. ಇದು ಗೂಡನ್ನು ಬಲೆಗಳ ಜಾಲದಲ್ಲಿ, ಮರದ ಕೊಂಬೆಯೊಂದಕ್ಕೆ ಬಿಗಿದಿರುತ್ತದೆ. ಮತ್ತೊಂದು ಜಾತಿಯ ಡ್ರಾಂಗೊ, ಕಪ್ಪು ಡ್ರಾಂಗೊ. ಇದನ್ನು "ಕಿಂಗ್ ಕ್ರೊ" ಎಂದೂ ಕರೆಯುವರು. ಈ ಹಕ್ಕಿಯ ತೋಕೆ ಚಿಕ್ಕದಾಗಿರುತ್ತದೆ. ತುದಿಯಲ್ಲಿ ಕವಲೊಡೆದಿರುತ್ತದೆ.

## ಜಾಲಗಾರ ಹಕ್ಕಿ

ಜಾಲಗಾರ ಹಕ್ಕಿ ಅಥವಾ ಕಿಂಗ್ ಫಿಷರ್ ಆಕರ್ಷಕ ಬಣ್ಣಗಳ ಒಂದು ಸಣ್ಣ ಪಕ್ಷಿ. ಇದು ನೀಲಿ-ಹಸಿರು ಬಣ್ಣದಲ್ಲಿರುತ್ತದೆ. ಇದರ ಅಡಿಭಾಗದ ಬಣ್ಣ ಕಂದು. ಇದಕ್ಕೆ ತುಂಬ ಗಟ್ಟಿಯಾದ ಮತ್ತು ಚೂಪಾದ ಕೆಂಪು ಬಣ್ಣದ ಕೊಕ್ಕು ಇರುತ್ತದೆ. ಈ ಕೊಕ್ಕಿನಿಂದ



ಮೀನು, ಕಪ್ಪೆಮರಿಗಳು ಮತ್ತು ಕೀಟಗಳನ್ನು ಹಿಡಿಯುತ್ತದೆ. ಮರದ ಕೊಂಬೆಯೊಂದರಿಂದ ಇದು ಥಟ್ಟನೆ ನೀರಿನಲ್ಲಿ ಮುಳುಗು ಹಾಕುತ್ತದೆ.

ಗೂಡು ಕಟ್ಟಲು ಜಾಲಗಾರ ಹಕ್ಕಿ ತೊರೆಯೊಂದರ ದಂಡೆಯಲ್ಲಿ ಸುರಂಗವನ್ನು ತೋಡುತ್ತದೆ. ತುದಿಯಲ್ಲಿ ಈ ಸುರಂಗ ಅಗಲ. ತಾಯಿ ಹಕ್ಕಿ ಈ ಸುರಂಗದೊಳಗೆ ಹೋಗಿ, ಏಳು ಹೊಳಪಿರುವ ಬಿಳಿ ಮೊಟ್ಟೆಗಳನ್ನು ಇಡುತ್ತದೆ. ಮಾರ್ಚ್‌ನಿಂದ ಜೂನ್ ಇದು ಗೂಡು ಕಟ್ಟುವ ಸಮಯ.

ಇತರ ಜಾತಿಗಳ ಜಾಲಗಾರ ಹಕ್ಕಿಗಳ ಅಭ್ಯಾಸ ಇದೇ ರೀತಿ. ಪೈಡ್ ಕಿಂಗ್ ಫಿಷರ್ ಗಾತ್ರದಲ್ಲಿ ಸ್ವಲ್ಪ ದೊಡ್ಡದು. ಇದಕ್ಕೆ ಕಪ್ಪು ಮತ್ತು ಬಿಳಿ ಮಚ್ಚೆಗಳಿರುತ್ತವೆ. ಎದೆ ಭಾಗದಲ್ಲಿ ಬಿಳಿ ಬಣ್ಣ ಹೊಂದಿರುವ ಕಿಂಗ್-ಫಿಷರ್, ಮಾಮೂಲು ಜಾಲಗಾರ ಹಕ್ಕಿಯಂತೆಯೇ ಇದ್ದರೂ, ಎದೆ ಭಾಗ ಮಾತ್ರ ಬಿಳಿ.

## ನೈಟ್ ಹೆರನ್



ನೈಟ್ ಹೆರನ್ ಪಕ್ಷಿಗಳು ಹಗಲು ವೇಳೆ, ಮರಗಳ ಮೇಲೆ ಎಲೆಗಳ ಮಧ್ಯೆ ವಿಶ್ರಾಂತಿ ಪಡೆಯುತ್ತವೆ. ಮುಸ್ಸಂಜೆಯಾಗುತ್ತಿದ್ದಂತೆ ಅವು ಮರಗಳಿಂದ ಹೊರಬರುತ್ತವೆ. ರಾತ್ರಿ ಹೊತ್ತು, ಇವು ಒಂದಾದ ನಂತರ ಒಂದರಂತೆ, ಆಹಾರವನ್ನು ಹುಡುಕಿಕೊಂಡು ಕೆರೆ-ಕಟ್ಟೆಗಳು ಮತ್ತು ನದಿಗಳ ಕಡೆ ಹೊರಡುತ್ತವೆ. ಇವು ಮೀನು, ಏಡಿ ಮತ್ತು ಕಪ್ಪೆಗಳನ್ನು ತಿನ್ನುತ್ತವೆ.

ನೈಟ್ ಹೆರನ್ ಪಕ್ಷಿಗಳ ಮೇಲ್ಭಾಗ ಬೂದು ಬಣ್ಣ, ಅಡಿಭಾಗ ಬಿಳಿಬಣ್ಣ, ಹಿಂಭಾಗ ಮತ್ತು ತಲೆ ಕಪ್ಪಗಿರುತ್ತವೆ. ತಲೆಯ ಮೇಲೆ ಉದ್ದವಾದ ಕಪ್ಪು ಮತ್ತು ಬಿಳಿ ಜುಟ್ಟುಗಳಿರುತ್ತವೆ.

ಮರಗಳ ಮೇಲೆ, ತುಂಬ ಎತ್ತರದಲ್ಲಿ ಇವು ಗುಂಪು-ಗುಂಪಾಗಿ ಸೇರಿಕೊಂಡು ಗೂಡು ಕಟ್ಟುತ್ತವೆ. ತಾಯಿ ಹಕ್ಕಿ ನಾಲ್ಕರಿಂದ ಐದು ಮೊಟ್ಟೆಗಳನ್ನು ಏಪ್ರಿಲ್‌ನಿಂದ ಸೆಪ್ಟೆಂಬರ್ ವರೆಗಿನ ಅವಧಿಯಲ್ಲಿ ಇಡುತ್ತದೆ. ಈ ಮೊಟ್ಟೆಗಳು ನಸು ಹಸಿರು ಬಣ್ಣದಲ್ಲಿರುತ್ತವೆ.

**- ಎನ್. ಎನ್. ಮುಜುಮ್‌ದಾರ**

**ಶಬ್ದಗಳ ಅರ್ಥ :**

ತೋಕೆ - ಗರಿ, ಪುಚ್ಛ ; ವಿರಳ - ಅಪರೂಪ; ಮುಸ್ಸಂಜೆ- ಸೂರ್ಯಾಸ್ತದ ಸಮಯ.
ಸುರಂಗ - ನೆಲ ಅಥವಾ ಬೆಟ್ಟವನ್ನು ಕೊರೆದು ಮಾಡಿದ ದಾರಿ;

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ಹೂಪೊ ಪಕ್ಷಿಯು ಯಾವ ಬಣ್ಣವನ್ನು ಹೊಂದಿದೆ ?
೨) ಹೂಪೊ ಪಕ್ಷಿಯ ಗೂಡಿನಿಂದ ಏಕೆ ದುರ್ವಾಸನೆ ಬರುತ್ತದೆ ?
೩) ಕೋಡು ಗೂಬೆ ಎಂಬ ಹೆಸರು ಏಕೆ ಬಂದಿತು ?
೪) ರ್‍ಯಾಕೆಟ್ ತೋಕೆಯ ಡ್ರಾಂಗೊ ಹಕ್ಕಿಗಳು ಎಲ್ಲಿ ವಾಸಿಸುತ್ತವೆ ?
೫) ಜಾಲಗಾರ ಹಕ್ಕಿಯು ಹೇಗಿರುತ್ತದೆ ಎಂಬುದನ್ನು ಬಣ್ಣಿಸಿರಿ ?
೬) ನೈಟ ಹೆರನ್ ಪಕ್ಷಿಗಳು ಎಲ್ಲಿ ವಿಶ್ರಾಂತಿ ಪಡೆಯುತ್ತವೆ ?

**ಪ್ರಶ್ನೆ ೨) ಹೊಂದಿಸಿ ಬರೆಯಿರಿ.**

| | |
|---|---|
| ೧. ಹೂಪೊ | ಅ) ತಂತಿಯಂತಿರುವ ಎರಡು ಗರಿಗಳು |
| ೨. ಕೋಡು ಗೂಬೆ | ಆ) ಗಟ್ಟಿಯಾದ ಮತ್ತು ಚೂಪಾದ ಕೆಂಪು ಬಣ್ಣದ ಕೊಕ್ಕು |

| | |
|---|---|
| ೩. ರ್ಯಾಕೆಟ್ ತೋಕೆಯ ಡ್ರಾಂಗೊ | ಇ) ಉದ್ದವಾದ ಮತ್ತು ಬಾಗಿದ ಕೊಕ್ಕು |
| ೪. ನೈಟ್ ಹೆರನ್ | ಈ) ಕೂದಲಿನ ದೊಡ್ಡ ಕುಚ್ಚಗಳು |
| ೫. ಜಾಲಗಾರ ಹಕ್ಕಿ | ಉ) ಉದ್ದವಾದ ಕಪ್ಪು-ಬಿಳಿ ಜುಟ್ಟುಗಳು |

**ಪ್ರಶ್ನೆ ೩) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ಸರ್ವನಾಮ ಎಂದರೇನು ?


೨) ಸರ್ವಾನಾಮದ ಪ್ರಕಾರಗಳು ಯಾವವು ?

೩) ತಾನು, ಏಕೆ-ಈ ಶಬ್ದಗಳ ಸರ್ವನಾಮ ಪ್ರಕಾರ ಗುರುತಿಸಿರಿ.

## ಉಪಕ್ರಮ

ನಿಮ್ಮ ಪರಿಸರದಲ್ಲಿ ಕಂಡುಬರುವ ಪಕ್ಷಿಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಿರಿ. ಅವುಗಳಲ್ಲಿ ಕಂಡುಬರುವ ವೈವಿಧ್ಯತೆಗಳ ಪಟ್ಟಿ ಮಾಡಿರಿ.

## ನಿಸರ್ಗವೇ ದೇವರು



## ೧೦. ಬದುಕಿನ ಪಾಠ

ಕೇಳಿರಿ ಮಕ್ಕಳೆ ಹೇಳುವೆ ನಿಮಗೆ
ಬಾಳನು ಬೆಳಗುವ ಪಾಠವನು
ನಾಳೆಯ ದಿನಗಳ ಸುಂದರಗೊಳಿಸಲು
ಕಾಳಜಿ ವಹಿಸುವ ಸೂತ್ರವನು ॥ ೧ ॥


ಓದುತ ಬರೆಯುತ ಶಾಲೆಯ ಪಾಠವ
ಮಾದರಿ ಎನಿಸಿರಿ ಗೆಳೆಯರಿಗೆ
ಹಿರಿಯರ ಜೊತೆಗೆ ವಾದವ ಮಾಡದೆ
ಮೋದದಿ ಬಾಳಿರಿ ಪ್ರತಿಘಳಿಗೆ ॥ ೨ ॥

ಪಾಲಕರಾಣತಿ ಶಿರಸಾ ವಹಿಸಿರಿ
ಸಾಲವನೆಂದಿಗೂ ಮಾಡದಿರಿ
ಕಾಲಕೆ ತಪ್ಪದೆ ಕಜ್ಜವ ಮಾಡುತ
ಸೋಲನು ಬದುಕಿಂದೋಡಿಸಿರಿ ॥ ೩ ॥

ಮಾತಿಗೆ ಮುನ್ನವೆ ಮನದಲಿ ಯೋಚಿಸಿ
ಮಾತನು ಕೊಟ್ಟರೆ ಅದನುಳಿಸಿ
ಇತಿಮಿತಿಯಲಿ ಮಾತನು ಹೇಳಿರಿ
ಮಾತಿನ ಗುಲಾಮ ಎನಿಸದಿರಿ ॥ ೪ ॥

ಗೆಳೆಯರ ಜೊತೆಗೆ ಜಗಳವ ಮಾಡದೆ
ನಗುತಾ ಜೊತೆಯಲಿ ಬೆರೆಯುತಿರಿ
ದೊರಕದ ವಸ್ತುವನೆಂದಿಗೂ ಬಯಸದೆ
ಸೊಗಸಿದೆ ಇದರಲಿ ಎನ್ನುತಿರಿ ॥ ೫ ॥

- ಕಿಗ್ಗಾಲು ಎಸ್. ಗಿರೀಶ್



**ಶಬ್ದಗಳ ಅರ್ಥ :**

ಬಾಳು - ಜೀವನ ; ಕಾಳಜಿ - ಎಚ್ಚರಿಕೆ ; ಮೋದ - ಸಂತೋಷ ;
ಕಾಲ - ಸಮಯ ; ಕಜ್ಜ - ಕಾರ್ಯ; ಬಯಸು - ಇಷ್ಟಪಡು.

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ಕವಿಯು ಯಾವ ಸೂತ್ರವನ್ನು ಹೇಳಲು ಬಯಸುತ್ತಾನೆ ?
೨) ನಾವು ಹೇಗೆ ಬಾಳಬೇಕು ?
೩) ನಮ್ಮ ಬದುಕಿನಿಂದ ಸೋಲನ್ನು ಹೇಗೆ ಓಡಿಸಬೇಕು ?
೪) ನಮ್ಮ ಮಾತಿನ ಬಗೆ ಎಂತಹದಾಗಿರಬೇಕು ?
೫) ಬಾಳಿನ ಸೊಗವು ಯಾವುದರಲ್ಲಿದೆ ?

**ಪ್ರಶ್ನೆ ೨) - ಕವಿತೆಯ ಬಿಟ್ಟ ಸಾಲುಗಳನ್ನು ಪೂರ್ಣ ಮಾಡಿರಿ.**

ಮಾತಿಗೆ ಮುನ್ನವೆ ......................................
...........................................................
...........................................................
......................................ಗುಲಾಮ ಎನಿಸದಿರಿ.

**ಪ್ರಶ್ನೆ ೩) - ಕೆಳಗಿನ ಶಬ್ದಗಳನ್ನು ವಾಕ್ಯಗಳಲ್ಲಿ ಬಳಸಿರಿ.**

೧) ಸುಂದರ ೨) ಮಾದರಿ ೩) ಸೊಗಸು ೪) ಬಯಸು.

**ಪ್ರಶ್ನೆ ೪) ಈ ಕವಿತೆಯನ್ನು ಸಾಭಿನಯದೊಂದಿಗೆ ಹಾಡಿರಿ.**

**ಉಪಕ್ರಮ**

ಈ ಕವಿತೆಯ ಭಾವಾರ್ಥವನ್ನು ಬರೆಯಿರಿ.

B23WI4

**ಸಜ್ಜನರ ಸಂಗ ಹೆಜ್ಜೇನು ಸವಿದಂತೆ**

# ೧೧. ಪತ್ರಲೇಖನ



ಬಸವ ನಿಲಯ
ಕೋಥರೂಡ ಪುಣೆ
ದಿನಾಂಕ : ೧೦-೧-೨೦೧೪

**ಪ್ರೀತಿಯ ತಮ್ಮ ಸಂಗಮೇಶನಿಗೆ,**

ನಿನ್ನ ನಲುಮೆಯ ಅಕ್ಕ ಗಿರಿಜಾಳು ಮಾಡುವ ಆಶೀರ್ವಾದಗಳು. ೧೫ ಡಿಸೆಂಬರ ೨೦೧೩ ರಂದು ನೀನು ಬರೆದ ಓಲೆ ತಲುಪಿತು. ಈ ವರ್ಷ ನಿಮ್ಮ ತರಗತಿಯ ವನಭೋಜನ ವಿಹಾರ ಕುರಿತು ಬರೆದ ನಿನ್ನ ಓಲೆಯನ್ನು ಓದಿ ಸಂತೋಷವಾಯಿತು. ಈ ವರ್ಷದ ನಮ್ಮ ಶಾಲೆಯ ಐದನೆಯ ತರಗತಿಯ 'ಪುಣೆ ದರ್ಶನ' ಒಂದು ದಿವಸದ ಪ್ರವಾಸ ಉತ್ಸಾಹ ಹಾಗೂ ಆನಂದದಿಂದ ನೆರವೇರಿತು ಎಂದು ನಿನಗೆ ತಿಳಿಸಲು ಸಂತೋಷವೆನಿಸುವುದು.

ಪುಣೆ ಇದೊಂದು ಮಹಾನಗರ. ಮಹಾರಾಷ್ಟ್ರದ ಸಾಂಸ್ಕೃತಿಕ ರಾಜಧಾನಿ, ಶಿಕ್ಷಣದ ತವರುಮನೆ ಎಂದು ಕರೆಯುವರು. ಇದಲ್ಲದೆ ಇತ್ತೀಚಿಗೆ ಮಾಹಿತಿ ತಂತ್ರಜ್ಞಾನ ಪಟ್ಟಣವೆಂದು ಅಭಿವೃದ್ಧಿಯಾಗುತ್ತಿದೆ. ಇಲ್ಲಿ ಅನೇಕ ಪ್ರೇಕ್ಷಣೀಯ ತಾಣಗಳಿವೆ. ಕೆಲವೊಂದು ತಾಣಗಳಿಗೆ

೨೭ ಡಿಸೆಂಬರ ೨೦೧೩ ಶುಕ್ರವಾರದಂದು ನಮ್ಮ ಶಾಲೆಯ ಐದನೆಯ ತರಗತಿಯ ಮಕ್ಕಳು ಭೇಟಿ ನೀಡಿದೆವು. ಆ ದಿನ ಬೆಳಿಗ್ಗೆ ಆರು ಗಂಟೆಗೆ ಮಹಾನಗರ ಪರಿವಹನ ಸಂಸ್ಥೆಯ ಡೆಕ್ಕನ ಬಸ ನಿಲ್ದಾಣದಲ್ಲಿ ಮಕ್ಕಳೆಲ್ಲರು ಸೇರಿದೆವು. ಹಾಜರಾತಿಯ ನಂತರ ಗುರುಗಳ ಆಜ್ಞೆಯ ಪ್ರಕಾರ ನಾವೆಲ್ಲರು ಸಾಲಾಗಿ ಬಸ್ಸನ್ನು ಪ್ರವೇಶಿಸಿದೆವು. ಚಾಲಕನು ಬಸ್ಸನ್ನು ಚಲಿಸಲು ಆರಂಭಿಸಿದಾಗ ಗಣಪತಿ ಬಪ್ಪಾ ಮೋರಯಾ ಎಂಬ ಜಯ ಜಯಕಾರದೊಂದಿಗೆ ಅದು ಮುಂದೆ ಸಾಗಿತು. ನಮ್ಮೆಲ್ಲರ ಆನಂದಕ್ಕೆ ಪಾರವೇ ಇರಲಿಲ್ಲ.

ನಮ್ಮ ಪುಣೆ ದರ್ಶನದ ಮೊದಲನೆಯ ಸ್ಥಳವೆಂದರೆ ಶನಿವಾರವಾಡಾ. ಇದೊಂದು ಐತಿಹಾಸಿಕ ವಾಸ್ತು ಕ್ರಿ.ಶ. ೧೭೩೦ ರಲ್ಲಿ ಮೊದಲನೆಯ ಬಾಜೀರಾವನು ಈ ಅರಮನೆಯನ್ನು ಕಟ್ಟಿಸಿದನು. ಶನಿವಾರವಾಡಾವು ಅನೇಕ ಅನುಭವಗಳನ್ನು ಪಡೆದಿದೆ. ಅದು ಇಂದಿಗೂ ಪೇಶ್ವೆಯವರ ರಾಜ್ಯಾಢಳಿತೆಯ ವೈಭವವನ್ನು ಸಾರುತ್ತಿದೆ.

ಶನಿವಾರವಾಡಾದ ಭೇಟಿಯ ನಂತರ ನಮ್ಮ ಬಸ್ಸು ವಿಶ್ರಾಮಬಾಗವಾಡಾದ ಭವ್ಯವಾದ ದ್ವಾರದ ಮೂರು ಮಹಡಿಯ ಕಟ್ಟಡದ ಮುಂದೆಬಂದು ನಿಂತಿತು. ಇದು ಪುಣೆಯ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆಗಳ ಕಥೆಯನ್ನು ಹೇಳುತ್ತದೆ. ಇಲ್ಲಿಂದ ಸುಮಾರು ಒಂದು ಕಿಲೋಮೀಟರ ಅಂತರದಲ್ಲಿರುವ ರಾಜಾ ದಿನಕರ ಕೇಳಕರ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದೆವು. ಅಲ್ಲಿಯ ಅಪರೂಪದ ಹಾಗೂ ಪ್ರಾಚೀನ ಕಲಾಕೃತಿಗಳನ್ನು ಕಂಡೆವು. ಈ ವಸ್ತುಸಂಗ್ರಹಾಲಯದ ಪ್ರದರ್ಶನವು ಪ್ರವಾಸಿಗರಿಗೆ ವಿಸ್ಮಯವನ್ನು ಉಂಟು ಮಾಡುತ್ತದೆ.

ಪುಣೆಯಲ್ಲಿ 'ಪರ್ವತಿ' ಎಂಬ ಹೆಸರಿನ ಅತ್ಯಂತ ರಮಣೀಯ ಬೆಟ್ಟವಿದೆ. ನಾವೆಲ್ಲರೂ ಬೆಟ್ಟವನ್ನೇರಿ ಪುಣೆಯ ಇಡೀ ವಿಸ್ತಾರವನ್ನು ನೋಡಲು ಪ್ರಯತ್ನಿಸಿದೆವು. ಬೆಟ್ಟದ ಮೇಲೆ ಸಣ್ಣ-ಪುಟ್ಟ ದೇವಾಲಯಗಳಿವೆ.

೧೮ ನೆಯ ಶತಮಾನದಲ್ಲಿ ಪೇಶ್ವೆಯವರು ಪರ್ವತಿ ಬೆಟ್ಟದ ಪರಿಸರದಲ್ಲಿ ಸೌಂದರ್ಯಕ್ಕಾಗಿ ಒಂದು ಸುಂದರವಾದ ತೋಟವನ್ನು ನಿರ್ಮಿಸಿದರು. ತೋಟದ ಮಧ್ಯದಲ್ಲಿ ಒಂದು ಸುಂದರ ಸರೋವರವನ್ನು ತಯಾರಿಸಿ, ಆ ಸರೋವರದಲ್ಲಿ ದ್ವೀಪದಂತೆ ದೇವಾಲಯವನ್ನು ಕಟ್ಟಿಸಿದರು ಮತ್ತು ಈ ಸುಂದರವಾದ ತೋಟವನ್ನು ಕಾವ್ಯಾತ್ಮಕವಾಗಿ 'ಸಾರಸಬಾಗ' ಎಂದು ಕರೆದರು. ಈ ಸಾರಸಬಾಗದಲ್ಲಿ ಸಿದ್ಧಿವಿನಾಯಕ ಮಂದಿರವನ್ನು ನಾವೆಲ್ಲರೂ ಪ್ರವೇಶಿಸಿ ಭಕ್ತಿಭಾವನೆಯಿಂದ ದರ್ಶನ ಪಡೆದೆವು. ಈ ಪವಿತ್ರ ಸ್ಥಳಕ್ಕೆ ದಿನಾಲು ನೂರಾರು ಮತ್ತು ಚತುರ್ಥಿಯ ದಿನ ಸಾವಿರಾರು ಭಕ್ತಜನರು ಆಗಮಿಸಿ ದರ್ಶನ ಪಡೆಯುವರು. ಸಾರಸಬಾಗ ಉದ್ಯಾನದಲ್ಲಿ ಮಧ್ಯಾಹ್ನ ಊಟ ಮಾಡಿದೆವು. ಸ್ವಲ್ಪ ವಿರಾಮದ ಬಳಿಕ ಮುಂದಿನ ಪ್ರೇಕ್ಷಣೀಯ ಸ್ಥಳ ಕಾತ್ರಜ ಸರ್ಪೋದ್ಯಾನದ ಕಡೆಗೆ ಹೊರಟೆವು.

ಕಾತ್ರಜ ಸರ್ಪೋದ್ಯಾನದಲ್ಲಿ ವಿವಿಧ ಜಾತಿಗಳ, ಬಣ್ಣ-ಬಣ್ಣಗಳ, ಸಣ್ಣ-ದೊಡ್ಡ ಗಾತ್ರ ಆಕಾರಗಳುಳ್ಳ ಅನೇಕ ಪ್ರಕಾರಗಳ ಜೀವಂತ ಹಾವುಗಳನ್ನು ನಾವು ಪ್ರತ್ಯಕ್ಷವಾಗಿ ಕಂಡೆವು. ಸರ್ಪಮಿತ್ರರು ಹಾವುಗಳನ್ನು ಇಲ್ಲಿಗೆ ತಂದು ಬಿಡುತ್ತಾರೆ ಎಂಬ ಸಂಗತಿ ನಮಗೆ ಇಲ್ಲಿ ತಿಳಿಯಿತು. ಹಾವುಗಳ ಚಿತ್ರ ಮತ್ತು ಅವುಗಳ ಬಗ್ಗೆ ಮಾಹಿತಿ ಇಲ್ಲಿಯ ಗ್ರಂಥಾಲಯದೊಳಗೆ ಪ್ರದರ್ಶಿಸಲಾಗಿದೆ.

ಅಲ್ಲಿಂದ ಶಿಂಧೆಛತ್ರಿ ಸ್ಥಳಕ್ಕೆ ಬಂದೆವು. ಇದು ಕೊಂಡವಾದಲ್ಲಿದೆ ಇದೊಂದು ಸುಂದರ ವಾಸ್ತುಶಿಲ್ಪ ವಿನ್ಯಾಸ ಹೊಂದಿರುವ ಪ್ರೇಕ್ಷಣೀಯ ಸ್ಥಳ, ಈ ದೇವಾಲಯದ ಆವರಣದಲ್ಲಿ ಮಹದೋಜಿ ಶಿಂಧೆಯವರು ಶಿವಮಂದಿರದ ಸ್ಥಾಪನೆ ಮಾಡಿದರು. ಶಿಂಧೆಛತ್ರಿಯಲ್ಲಿ ಛತ್ರಪತಿ ಮಹದೋಜಿ ಶಿಂಧೆಯವರ ಸಮಾಧಿಯಿದೆ.

ಸಮಾಜ ಸುಧಾರಕ ಮಹಾತ್ಮಾ ಜ್ಯೋತಿಬಾ ಫುಲೆಯವರ ನಿವಾಸವಾಗಿರುವ ಮಹಾತ್ಮಾ ಜ್ಯೋತಿಬಾ ಫುಲೆವಾಡಾ ಪುಣೆಯ ಗಂಜಪೇಠೆಯಲ್ಲಿದೆ. ಜ್ಯೋತಿಬಾ ಫುಲೆಯವರು ತಮ್ಮ ಪತ್ನಿ ಸಾವಿತ್ರಿಬಾಯಿ ಫುಲೆಯವರೊಂದಿಗೆ ಇಲ್ಲಿ ವಾಸಿಸುತ್ತಿದ್ದರು. ಇವರಿಬ್ಬರ ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ದರ್ಶಿಸುವ ಅನೇಕ ಪ್ರಸಂಗಚಿತ್ರಗಳ ವಸ್ತುಸಂಗ್ರಹಾಲಯ ಇಲ್ಲಿದೆ.

ಕೊನೆಯದಾಗಿ ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿರುವ ಆಗಾಖಾನ ಅರಮನೆಗೆ ನಾವು ಭೇಟಿ ನೀಡಿದೆವು. ಇದು ಭಾರತದ ಸ್ವಾತಂತ್ರ್ಯ ಚಳುವಳಿಯ ರಾಷ್ಟ್ರೀಯ ಸ್ಮಾರಕವಾಗಿದೆ. ಇಲ್ಲಿ ಮಹಾತ್ಮಾ ಗಾಂಧೀಜಿಯವರ ಧರ್ಮಪತ್ನಿ ಕಸ್ತೂರಬಾ ಗಾಂಧಿಯವರ ಸಮಾಧಿಯಿದೆ. ಇವುಗಳಲ್ಲದೆ ಅಂಬೇಡ್ಕರ ವಸ್ತು ಸಂಗ್ರಾಹಲಯ, ಶ್ರೀಮಂತ ದಗಡುಶೇಠ ಗಣಪತಿ ದೇವಾಲಯ, ಲಾಲಮಹಲ, ಎಲ್ಲ ಪ್ರಕಾರಗಳ ಕ್ರೀಡಾಕೂಟಗಳಿಗಾಗಿ ಸುಸಜ್ಜಿತವಾದ ಬಾಲೇವಾಡಿ ಕ್ರೀಡಾಸಂಕುಲ ಮುಂತಾದ ಪ್ರೇಕ್ಷಣೀಯ ಸ್ಥಳಗಳು ಪುಣೆಯಲ್ಲಿವೆ.

ಸಂಗಮೇಶ, ಪುಣೆ ದರ್ಶನ ಕುರಿತು ಓದಿದಾಗ ಈ ಸ್ಥಳಗಳನ್ನು ನೋಡುವ ಕುತೂಹಲ, ಬಯಕೆ ನಿನಗೆ ಆಗುವುದು ಸಹಜ. ನೀನು ಪುಣೆಗೆ ಬಂದಾಗ ನಾವೆಲ್ಲರೂ ಈ ಪ್ರವಾಸ ಕೈಗೊಳ್ಳೋಣ. ಮನೆಯಲ್ಲಿ ಚಿಕ್ಕಪ್ಪ ಹಾಗೂ ಚಿಕ್ಕಮ್ಮ ಇವರಿಗೆ ಸಾಷ್ಟಾಂಗ ನಮಸ್ಕಾರಗಳು.

**ನಿನ್ನ ಸಹೋದರಿ,**

**ಗಿರಿಜಾ**

**ಶಬ್ದಗಳ ಅರ್ಥ :**

| | | |
|---|---|---|
| ಓಲೆ – ಪತ್ರ; | ವಿಸ್ಮಯ – ಅದ್ಭುತ; | ರಮಣೀಯ – ಸುಂದರವಾದ; |
| ತಾಣ – ಸ್ಥಾನ; | ವಿಸ್ತಾರ – ಅಗಲ; | ಪಾರ – ದಡ, ದಂಡೆ. |

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

(ಅ) ಪುಣೆ ನಗರಕ್ಕೆ ಏನೆಂದು ಕರೆಯುವರು ?
(ಆ) ಶನಿವಾರವಾಡಾ ಅರಮನೆಯನ್ನು ಯಾರು ಕಟ್ಟಿಸಿದರು ?
(ಇ) ವಿಶ್ರಾಮಬಾಗವಾಡಾ ಯಾವ ಕಥೆಯನ್ನು ಹೇಳುತ್ತದೆ ?
(ಈ) ಶಿಂಧೆಛತ್ರಿಯಲ್ಲಿ ಯಾರ ಸಮಾಧಿಯಿದೆ ?
(ಉ) ಭಾರತದ ಸ್ವಾತಂತ್ರ್ಯ ಚಳುವಳಿಯ ರಾಷ್ಟ್ರೀಯ ಸ್ಮಾರಕ ಯಾವುದು ?
(ಊ) ಕಾತ್ರಜ ಸರ್ಪೋದ್ಯಾನದಲ್ಲಿ ನೀವು ಏನು ಕಾಣುವಿರಿ ?

**ಪ್ರಶ್ನೆ (೨) ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| (೧) ಪರ್ವತಿ | (ಅ) ದೇವಾಲಯದ ಸುಂದರ ವಾಸ್ತುಶಿಲ್ಪ |
| (೨) ಸಾರಸಬಾಗ | (ಆ) ವಿವಿಧ ಪ್ರಕಾರಗಳ ಹಾವುಗಳು |
| (೩) ಕಾತ್ರಜ ಸರ್ಪೋದ್ಯಾನ | (ಇ) ರಮಣೀಯ ಬೆಟ್ಟ |
| (೪) ಶಿಂಧೆಛತ್ರಿ | (ಈ) ಕಸ್ತೂರಬಾ ಗಾಂಧಿಯವರ ಸಮಾಧಿ |
| (೫) ಆಗಾಖಾನ ಅರಮನೆ | (ಉ) ಸಿದ್ಧಿವಿನಾಯಕ ಮಂದಿರ |

**ಪ್ರಶ್ನೆ (೩) ಬಿಟ್ಟ ಸ್ಥಳ ತುಂಬಿರಿ.**

(ಅ) ಇತ್ತೀಚಿಗೆ ಪುಣೆಯು .............. ಪಟ್ಟಣವೆಂದು ಅಭಿವೃದ್ಧಿಯಾಗುತ್ತಿದೆ.
(ಆ) ಪುಣೆಯಲ್ಲಿ................ ಎಂಬ ಹೆಸರಿನ ಅತ್ಯಂತ ರಮಣೀಯ ಬೆಟ್ಟವಿದೆ.
(ಇ) ಶಿಂದೆಛತ್ರಿ ಸ್ಥಳವು ........ ದಲ್ಲಿ ಇದೆ.
(ಈ) .......... ಭಾರತದ ಸ್ವಾತಂತ್ರ್ಯ ಚಳುವಳಿಯ ರಾಷ್ಟ್ರೀಯ ಸ್ಮಾರಕವಾಗಿದೆ.

**ಉಪಕ್ರಮ**

ನೀವು ಕೈಗೊಂಡ ಪ್ರವಾಸ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.

82CSJR

**ವೃತ್ತಪತ್ರ ಎಲ್ಲರ ಮಿತ್ರ**

## ವ್ಯಾಕರಣ

**ವಾಕ್ಯ :** ಪೂರ್ಣವಾದ ಅರ್ಥವನ್ನು ಕೊಡುವ ಶಬ್ದಗಳ ಸಮೂಹಕ್ಕೆ ವಾಕ್ಯ ಎಂದು ಕರೆಯುವರು.

**ಸಕರ್ಮಕ ವಾಕ್ಯ :** ಯಾವ ವಾಕ್ಯದಲ್ಲಿ ಕರ್ಮಪದ ಇರುತ್ತದೆಯೋ ಅದು ಸಕರ್ಮಕ ವಾಕ್ಯ.

ಉದಾ : ಹಸುವು <u>ನೀರನ್ನು</u> ಕುಡಿಯುತ್ತದೆ.


ಗೋವಿಂದನು <u>ಪುಸ್ತಕವನ್ನು</u> ಓದುತ್ತಾನೆ.

ಮೇಲಿನ ವಾಕ್ಯದಲ್ಲಿ ಗೆರೆಹೊಡೆದ ಶಬ್ದಗಳು ಕರ್ಮಪದಗಳಾಗಿವೆ. ಆದ್ಧರಿಂದ ಈ ವಾಕ್ಯಗಳು 'ಸಕರ್ಮಕ ವಾಕ್ಯ'ಗಳಾಗಿವೆ.

**ಅಕರ್ಮಕ ವಾಕ್ಯ :** ಯಾವ ವಾಕ್ಯದಲ್ಲಿ ಕರ್ಮಪದ ಇರುವುದಿಲ್ಲವೋ ಅದು ಅಕರ್ಮಕ ವಾಕ್ಯ.

ಉದಾ : ಅವನಿಗೆ ದೊರಕಿತು.

ಕೋಗಿಲೆ ಕೂಗಿತು.



# ೧೨. ಸರಕಾರಿ ಬಸ್ಸಿನ ಆತ್ಮಕಥೆ




ನಾನು ಸರಕಾರಿ ಬಸ್ಸು. ಸಾರಿಗೆ ವ್ಯವಸ್ಥೆಯಲ್ಲಿ ನನಗೆ ಅತ್ಯಂತ ಘನತೆ-ಗೌರವಗಳಿವೆ. ಅತೀ ಆಕರ್ಷಕ ಮೈಬಣ್ಣ, ಅದರ ಮೇಲೆ ಸಾರಿಗೆ ಸಂಸ್ಥೆಯ ಮೊಹರು. ಮೈಸುತ್ತಲೂ ಗಾಜಿನ ಕಿಡಕಿಗಳು ನನ್ನ ಅಂದವನ್ನು ಹೆಚ್ಚಿಸಿವೆ. ಒಳಗಡೆ ಮೆತ್ತಗಿನ ಆಸನಗಳು, ಝುಗಝುಗಿಸುವ ಲೈಟುಗಳು ಪ್ರವಾಸಿಗರ ಮನಸೆಳೆಯುತ್ತವೆ.

ಮುದ್ದು ಮಕ್ಕಳೇ, ಇಂದಿನ ಗಡಿಬಿಡಿ ಜೀವನದಲ್ಲಿ ಸುಖಕರ ಹಾಗೂ ಸುರಕ್ಷಿತ ಪ್ರವಾಸವು ಕಾಣೆಯಾಗಿದೆ. ತಾವು ದಿನವೂ ವೃತ್ತಪತ್ರಗಳ ಮುಖಾಂತರ, ಆಕಾಶವಾಣಿ-ದೂರದರ್ಶನಗಳಲ್ಲಿ ಅಪಘಾತ, ಸಾವು-ನೋವಿನ ಸುದ್ದಿಯನ್ನು ಕೇಳುತ್ತಲೇ ಇರುವಿರಿ. ಪ್ರವಾಸದಲ್ಲಿರುವವರು ಮರಳಿ ಮನೆಗೆ ಬರುತ್ತಾರೆಂಬ ಭರವಸೆ ಇಂದು ಇಲ್ಲದಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಜನರ ಮುಂದೆ ಇರುವ ಆಶಾಕಿರಣವೆಂದರೆ ನಾನು. ನನ್ನ ಚಾಲಕನನ್ನು ಸಾರಿಗೆ ಸಂಸ್ಥೆಯವರು ಸರಕಾರದ ನಿಯಮಗಳ ಅಡಿ ನೇಮಕ ಮಾಡಿರುತ್ತಾರೆ. ಆತನು ತರಬೇತಿ ಹೊಂದಿದವನಾಗಿರುತ್ತಾನೆ. ಸಾರಿಗೆ ಸಂಸ್ಥೆಯವರ ನಿಯಂತ್ರಣದಲ್ಲಿ ಆತನು

ಕಾರ್ಯ ನಿರ್ವಹಿಸುತ್ತಾನೆ. ಹೀಗಾಗಿ ನನ್ನ ಪ್ರವಾಸ ಅತ್ಯಂತ ಸುಖಕರ ಹಾಗೂ ಸುರಕ್ಷಿತವಾದುದು. ನನ್ನದು ವೇಳೆಗೆ ಸರಿಯಾಗಿ ಕೆಲಸ ಮಾಡುವ ಜಾಯಮಾನ. ಸಮಾಜದ ದೃಷ್ಟಿಯಲ್ಲಿ ನಾನು ಶಿಸ್ತಿನ ಸಿಪಾಯಿ.

ನನ್ನ ವೈಶಿಷ್ಟ್ಯಗಳೆಂದರೆ ನನ್ನಲ್ಲಿ ಮಹಿಳೆಯರಿಗೆ, ಅಂಗವಿಕಲರಿಗೆ, ಜನ ಪ್ರತಿನಿಧಿಗಳಿಗೆ ಕುಳಿತುಕೊಳ್ಳಲು ಆರಕ್ಷಿತ ಆಸನಗಳಿವೆ. ನನ್ನಲ್ಲಿ ಪ್ರವಾಸ ಮಾಡುವ ಶಾಲಾಮಕ್ಕಳಿಗೆ, ಹಿರಿಯ ನಾಗರಿಕರಿಗೆ, ವಿಕಲಾಂಗರಿಗೆ ಪ್ರವಾಸದರದಲ್ಲಿ ರಿಯಾಯಿತಿ ಉಂಟು. ಪ್ರಸಂಗದಲ್ಲಿ ಪ್ರಥಮೋಪಚಾರ, ಆಪತ್ತಿನಲ್ಲಿ ತುರ್ತು ನಿರ್ಗಮನ ವ್ಯವಸ್ಥೆಯೂ ನನ್ನಲ್ಲಿವೆ. ನಾನು ಆಗಾಗ ಶಾಲಾ ಮಕ್ಕಳ ಪ್ರವಾಸ, ವಿವಾಹ ಮುಂತಾದ ಸಮಾರಂಭಗಳಿಗೂ ಹೋಗುವೆ. ಊರಿಂದೂರಿಗೆ ಅಂಚೆ ಚೀಲಗಳನ್ನು ಒಯ್ಯುವ, ಚುನಾವಣೆಯ ವೇಳೆಯಲ್ಲಿ ಮತಪೆಟ್ಟಿಗೆಗಳನ್ನು ತಲುಪಿಸುವ ಹೊಣೆಗಾರಿಕೆ ನನ್ನದು. ಹೀಗಾಗಿ ನಾನು ಜನತೆಯ ಹಾಗೂ ಸರಕಾರದ ಮೆಚ್ಚುಗೆಯ ಮಗುವಾಗಿರುವೆ. "ಜನಸೇವೆಯೇ ಜನಾರ್ಧನನ ಸೇವೆ ಎಂಬುದು ನನ್ನ ಧ್ಯೇಯ. ಬಹುಜನ ಸುಖಾಯ, ಬಹುಜನ ಹಿತಾಯ," ಎಂಬುದು ನನ್ನ ಗುರಿಯಾಗಿದೆ.

ಮಕ್ಕಳೇ, ನನ್ನಲ್ಲಿ ಇತ್ತೀಚಿಗೆ ಬಹಳ ಪರಿವರ್ತನೆಯಾಗಿದೆ. ನಗರಗಳಲ್ಲಿ ರಂಗುರಂಗಿನ ಸಿಟಿಬಸ್ಸು, ಹಸಿರು ಬಣ್ಣದ ಏಶಿಯಾಡ್ ಬಸ್ಸು, ಹವಾನಿಯಂತ್ರಿತ ಬಸ್ಸು ಹೀಗೆ ದಿನದಿಂದ ದಿನಕ್ಕೆ ನನ್ನ ರೂಪ ಬದಲಾಗುತ್ತಿದೆ. ನನ್ನ ಸೇವಾಭಾವನೆಯನ್ನು ಮೆಚ್ಚಿ ಸರಕಾರ ನನಗೆ 'ಶಿವನೇರಿ', 'ಹಿರಕಣಿ' ಎಂಬ ಹೆಸರಿನಿಂದ ಜನರು ಗುರುತಿಸುವಂತೆ ಗೌರವ ನೀಡಿದೆ. ಕರ್ನಾಟಕದಲ್ಲಿ ನನಗೆ ಕನ್ನಡ ಕವಿ, ಲೇಖಕರ ಹೆಸರನ್ನೂ ಇಟ್ಟಿದ್ದಾರೆ. ಇದು ನನಗೆ ಸಮಾಜ ನೀಡುವ ಮನ್ನಣೆಯಲ್ಲದೇ ಇನ್ನೇನು ?

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ನಾನು ನನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಹಲವು ಕಾರಣಗಳಿವೆ. ನಾನು ಪ್ರವಾಸಿಗರ ಸುರಕ್ಷಿತತೆಯ ದೃಷ್ಟಿಯಿಂದ ಹಲವು ನಿರ್ಬಂಧನೆಗಳನ್ನು ಹಾಕಿಕೊಂಡಿರುವೆ. ಅವುಗಳಲ್ಲಿ ಚಾಲಕ ವಾಹಕರಿಗಾಗಿ ಹಾಗೂ ಪ್ರವಾಸಿಗರಿಗೂ ನಿರ್ಬಂಧನೆಗಳನ್ನು ಹಾಕಲಾಗಿದೆ. ಸೇವೆಯಲ್ಲಿರುವ ಚಾಲಕ, ವಾಹಕರು ಧೂಮ್ರಪಾನ, ಮದ್ಯಪಾನ ಮಾಡುವಂತಿಲ್ಲ. ಚಾಲಕರು ಬಸ್ಸು ಚಾಲನೆ ಮಾಡುವಾಗ ಮೊಬೈಲ್‌ನಲ್ಲಿ ಮಾತನಾಡುವುದಾಗಲಿ, ಪ್ರವಾಸಿಗರ ಜೊತೆಗೆ ಮಾತನಾಡುವದನ್ನು ನಿರ್ಬಂಧಿಸಿದೆ. ಹಗಲು-ಇರುಳೆನ್ನದೆ ನಿರ್ದಿಷ್ಟ ವೇಳೆಯಲ್ಲಿ ನಿರ್ದಿಷ್ಟ ಸ್ಥಳವನ್ನು ತಲುಪುವ ಹೊಣೆಗಾರಿಕೆ ಅವರದಾಗಿರುತ್ತದೆ.

ನನ್ನ ಪ್ರವಾಸಿಗರಿಗೂ ಕೆಲವೊಂದು ಬಂಧನಗಳುಂಟು. ನನ್ನಲ್ಲಿ ಪ್ರವಾಸಿಗರು ಟಿಕೆಟ್ ರಹಿತ ಪ್ರವಾಸ ಮಾಡುವಂತಿಲ್ಲ. ಟಿಕೇಟು ತಪಾಸಣಾಧಿಕಾರಿಯ ಕೈಯಲ್ಲಿ ಸಿಕ್ಕರೆ "ಹಣಕ್ಕೆ ಹಣವೂ ಹೋಯಿತು, ಗುಣಕ್ಕೆ ಗುಣವೂ

ಹೋಯಿತು." ಎಂಬಂತೆ ದಂಡ ತುಂಬಿ ಮಾನ ಕಳೆದುಕೊಳ್ಳಬೇಕಾಗುವುದು. ಪ್ರಾಮಾಣಿಕ ಪ್ರವಾಸಿಗರೇ ನನ್ನ ಹೆಗ್ಗುರುತು. ಪ್ರವಾಸಿಗರು ಬಸ್ಸಿನಲ್ಲಿ ಇಂಧನ ಇಲ್ಲವೇ ಸ್ಫೋಟಕ ವಸ್ತುಗಳನ್ನು ಸಾಗಿಸುವುದನ್ನು ನಿಷೇಧಿಸಲಾಗಿದೆ. ಪ್ರವಾಸಿಗರಿಗೆ ತೊಂದರೆಯುಂಟುಮಾಡುವ ಯಾವುದೇ ಅಹಿತಕರ ಘಟನೆಗಳು ಬಸ್ಸಿನಲ್ಲಿ ನಡೆಯದಂತೆ ಪ್ರವಾಸಿಗರೇ ಎಚ್ಚರ ವಹಿಸಬೇಕು. ಈ ನಿರ್ಬಂಧನೆಗಳು ನಿಮಗೆ ಹಿಡಿಸದೇ ಇರಬಹುದು. ಆದರೆ ಅವು ನಿಮ್ಮ ಹಿತಕ್ಕಾಗಿಯೇ ಇವೆ ಎಂಬುದನ್ನು ಮರೆಯದಿರಿ. ನನ್ನಲ್ಲಿರುವ ಇನ್ನೊಂದು ಗಮನಾರ್ಹ ಯೋಜನೆಯೆಂದರೆ "ಪ್ರವಾಸಿಗರ ಅಪಘಾತ ವಿಮಾಯೋಜನೆ." ಆಕಸ್ಮಿಕವಾಗಿ ಅಪಘಾತ ಸಂಭವಿಸಿದಲ್ಲಿ ಈ ಯೋಜನೆ ಅಡಿಯಲ್ಲಿ ಸಾರಿಗೆ ಸಂಸ್ಥೆಯು ಆರ್ಥಿಕ ಸಹಾಯಗೈದು ಪ್ರವಾಸಿಗರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತದೆ. ಮಿತ್ರರೇ, ನಿಮ್ಮಲ್ಲಿ ನನ್ನದೊಂದು ವಿನಂತಿ. ನೀವು ನನ್ನಲ್ಲಿ ಪ್ರವಾಸಮಾಡುವಾಗ ವಾಹಕರಿಂದ ಟಿಕೇಟಗಳನ್ನು ಕೇಳಿ ಪಡೆಯಿರಿ. ಸೀಟಿನ ಮೇಲೆ, ಹಿಂದುಗಡೆ ಗೀಚುಹಾಕುವುದು, ಹೆಸರು ಬರೆಯುವುದನ್ನು ಮಾಡಬೇಡಿ. ಸೀಟಿನ ಸ್ಪಂಜನ್ನು ಕಿತ್ತುಕೊಳ್ಳಬೇಡಿ. ಇದರಿಂದ ನನಗೆ ಬಲು ನೋವು ಉಂಟಾಗುತ್ತದೆ. ನನ್ನಲ್ಲಿ ಬರೆದ ಈ ಕೆಳಗಿನ ಸೂಚನೆಗಳನ್ನು ಗಮನಿಸಿರಿ.

೧) ಸಾಲಾಗಿ ಬಸ್ಸು ಹತ್ತಿರಿ.
೨) ಟಿಕೇಟ ಇಲ್ಲದ ಪ್ರಯಾಣ, ದಂಡಕ್ಕೆ ಆಹ್ವಾನ
೩) ವಾಹನ ಚಲಿಸುವಾಗ ಚಾಲಕರೊಂದಿಗೆ ಮಾತನಾಡಬೇಡಿ.
೪) ಚಲಿಸುತ್ತಿರುವ ಬಸ್ಸಿನಿಂದ ಇಳಿಯುವುದಾಗಲಿ, ಹತ್ತುವದಾಗಲಿ ಮಾಡಬೇಡಿ.
೫) ವಯೋವೃದ್ಧರಿಗೆ, ಮಹಿಳೆಯರಿಗೆ, ವಿಕಲಾಂಗರಿಗೆ ಕುಳಿತುಕೊಳ್ಳಲು ಅವಕಾಶಕಲ್ಪಿಸಿರಿ.
೬) ಚಲಿಸುವ ಬಸ್ಸಿನಿಂದ ನಿಮ್ಮ ಕೈ-ತಲೆಗಳನ್ನು ಹೊರಗೆ ಚಾಚಬೇಡಿ.
೭) ಹನ್ನೆರಡು ವರ್ಷ ಪೂರ್ಣವಾದ ಮಕ್ಕಳು ಪೂರ್ಣ ಟಿಕೇಟು ತೆಗೆದುಕೊಳ್ಳಬೇಕು.

ಈ ಸೂಚನೆಗಳನ್ನು ಪಾಲನೆಮಾಡು--ವುದರೊಂದಿಗೆ ಪ್ರಥಮೋಪಚಾರ ಪೆಟ್ಟಿಗೆ, ಅಗ್ನಿಶಾಮಕ ಉಪಕರಣ, ತುರ್ತು ನಿರ್ಗಮನ ಸ್ಥಳಗಳನ್ನು ಗುರುತಿಸಿರಿ. ನನ್ನಲ್ಲಿರುವ ಜಾಹೀರಾತುಗಳತ್ತ ಗಮನಹರಿಸಿ, ಅಲ್ಲಲ್ಲಿ ಬರೆದ ಸಮಾಜೋಪಯೋಗಿ ಹಿತನುಡಿಗಳನ್ನು ಓದಿ ಅರ್ಥೈಸಿಕೊಳ್ಳಿ. ಅವುಗಳಂತೆ ನಡೆದುಕೊಳ್ಳಲು ಪ್ರಯತ್ನಿಸಿರಿ. ನನ್ನ ಸ್ವಚ್ಛತೆಯನ್ನು ಕಾಪಾಡಿರಿ.

ಹಿತೈಷಿಗಳೇ, ನನ್ನದೊಂದು ಹಿತನುಡಿಯನ್ನು ಕೇಳುವಿರಾ ? ಅಂದು ನಾನು ಕಂಪನಿಯಿಂದ ಡೆಪೋಕ್ಕೆ ಪ್ರವೇಶಿಸುತ್ತಿರುವಂತೆಯೇ ನನಗೆ 'ಮದುಮಕ್ಕಳಂತೆ ಸಿಂಗಾರ' ಕಾದಿತ್ತು. ಮೈತುಂಬ ತೆಂಗಿನ ಗರಿಗಳ ಅಲಂಕಾರ, ಮುಖಕ್ಕೆ ಮಲ್ಲಿಗೆ ಹೂವಿನ ಹಾರ. ನನ್ನಲ್ಲಿ ಎಲ್ಲರಿಗೂ ಪ್ರೀತಿ, ಅಭಿಮಾನ. ಆ ಹುಮ್ಮಸ್ಸಿನಲ್ಲಿ

ಬಹುಕಾಲ ಹಗಲಿರುಳು ದುಡಿದು ಸರಕಾರದ ಬೊಕ್ಕಸ ತುಂಬಿದೆ. ದೇಶ ಸೇವೆಗೈದೆ. ಈಗ ವಯಸ್ಸಾಗಿ ಡೆಪೋದ ಒಂದು ಮೂಲೆಯಲ್ಲಿ ಬಿದ್ದುಕೊಂಡಿರುವೆ. ನಾನು ಬಾಳಿ ಬದುಕಿದ ದಿನಗಳನ್ನು ಮೆಲುಕು ಹಾಕುತ್ತಿರುವೆ. ಸಮಯೋಚಿತ ಹಾಗೂ ಸುರಕ್ಷಿತ ಪ್ರವಾಸಕ್ಕೆ ಹೆಸರುವಾಸಿಯಾದ ನಮ್ಮ ಕುಲದ ಗೌರವವನ್ನು ಕಾಪಾಡಿಕೊಂಡೆ ಎಂಬ ನೆಮ್ಮದಿ ನನಗಿದೆ. ಸೇವೆಯಲ್ಲಿ ಇರುವಷ್ಟು ಕಾಲ ಜನರ, ಸಂಸ್ಥೆಯ ಹಾಗೂ ಸರಕಾರದ ಕಣ್ಮಣಿಯಾಗಿ ಕಾಲ ಕಳೆದೆನಲ್ಲ ! ಅದು ನನ್ನ ಭಾಗ್ಯ.

ನೀವು ನನ್ನಹಾಗೆ ಪರೋಪಕಾರಿಗಳಾಗಿ ಬಾಳುತ್ತಿರಿ ತಾನೆ ? "ಪರೋಪಕಾರದಲ್ಲಿ ಪರಮಾನಂದವಿದೆ." ನಾವು ಸಂಕಟಗಳನ್ನು ತಾಳ್ಮೆಯಿಂದ ಎದುರಿಸಬೇಕು. "ತಾಳ್ಮೆಗಿಂತ ತಪವಿಲ್ಲ ಅಲ್ಲವೇ ?"

ಮಕ್ಕಳೇ, ನಾನಿನ್ನು ಬರಲೇ. ನನ್ನಲ್ಲಿಯೇ ಪ್ರವಾಸಮಾಡುವುದನ್ನು ಮಾತ್ರ ಮರೆಯಬೇಡಿ. ಧನ್ಯವಾದಗಳು.

**ಶಬ್ದಗಳ ಅರ್ಥ :**

| | | | |
|---|---|---|---|
| ಮೊಹರು | - ಗುರುತು ; | ಆಶಾಕಿರಣ | - ನಂಬಿಕೆಯ ಸ್ಥಾನ; |
| ಜಾಯಮಾನ | - ಪದ್ಧತಿ; | ರಿಯಾಯಿತಿ | - ಸವಲತ್ತು; |
| ಜನಾರ್ಧನ | - ದೇವರು | ನಿರ್ಗಮನ | - ಹೊರಗೆ ಹೋಗುವ ದಾರಿ; |
| ಯೋಗಕ್ಷೇಮ | - ಕಾಳಜಿ ; | ಅಗ್ನಿಶಾಮಕ | - ಬೆಂಕಿಯನ್ನು ಆರಿಸುವ; |
| ಕಣ್ಮಣಿ | - ಹೆಗ್ಗಳಿಕೆ ; | ಡೆಪೋ | - ಬಸ್ಸು ನಿಲ್ಲುವಸ್ಥಳ; |
| ಧೂಮ್ರ | - ಹೊಗೆ. | | |

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

(ಅ) ಇಂದಿನ ಗಡಿಬಿಡಿ ಜೀವನದಲ್ಲಿ ಏನು ಕಾಣೆಯಾಗಿದೆ ?

(ಬ) ಇಂದಿನ ಪ್ರವಾಸಿಗರಲ್ಲಿ ಯಾವ ಭರವಸೆ ಇಲ್ಲ ?

(ಕ) ಬಸ್ಸಿನಲ್ಲಿ ಯಾರ ಸಲುವಾಗಿ ಆರಕ್ಷಿತ ಆಸನಗಳಿರುತ್ತವೆ ?

(ಡ) ಬಸ್ಸು ಯಾರ ಮೆಚ್ಚುಗೆಯ ಮಗುವಾಗಿದೆ ?

(ಇ) ಬಸ್ಸಿನಲ್ಲಿ ಏನನ್ನು ಸಾಗಿಸಲು ನಿಷೇಧಿಸಲಾಗಿದೆ ?

**ಪ್ರಶ್ನೆ (೨) ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ನಾಲ್ಕು ಸಾಲುಗಳಲ್ಲಿ ಉತ್ತರ ಬರೆಯಿರಿ.**

(ಅ) ಬಸ್ಸಿನಲ್ಲಿ ಎಂತಹ ಪ್ರವಾಸಿಗರಿಗೆ ಪ್ರವಾಸದರದಲ್ಲಿ ರಿಯಾಯಿತಿ ಉಂಟು?

(ಆ) ಬಸ್ಸಿನ ಹೊಣೆಗಾರಿಕೆ ಯಾವುದು ?

(ಇ) ಬಸ್ಸಿನ ಬದಲಾಗುತ್ತಿರುವ ರೂಪಗಳು ಯಾವುವು ?

(ಈ) ಅಪಘಾತ ವಿಮಾ ಯೋಜನೆಯ ಮಹತ್ವವೇನು ?

(ಉ) ಬಸ್ಸು ಯಾವುದು ತನ್ನ ಭಾಗ್ಯವೆಂದು ಹೇಳುತ್ತದೆ ?

**ಪ್ರಶ್ನೆ (೩) ಟಿಪ್ಪಣಿ ಬರೆಯಿರಿ.**

(೧) ಬಸ್ಸಿನ ಪ್ರವಾಸಿಗರಿಗಾಗಿ ಇರುವ ನಿರ್ಬಂಧನೆಗಳು

(೨) ಬಸ್ಸಿನಲ್ಲಿ ಕಂಡುಬರುವ ಸೂಚನೆಗಳು.

**ಪ್ರಶ್ನೆ (೪) ಕೆಳಗಿನ ಪ್ರಸಂಗಗಳಲ್ಲಿ ನೀವು ಏನು ಮಾಡುವಿರಿ ?** ಎಂಬುದನ್ನು ಬರೆಯಿರಿ.

(ಅ) ಚಲಿಸುವ ಬಸ್ಸಿನಿಂದ ನಿಮಗೆ ಇಳಿಯಬೇಕಾಗಿದೆ.

(ಆ) ಬಸ್ಸಿನಲ್ಲಿ ವಯೋವೃದ್ಧರೊಬ್ಬರು ಸೀಟು ಸಿಗದೇ ಎದ್ದು ನಿಂತುಕೊಂಡೇ ಪ್ರವಾಸ ಮಾಡುತ್ತಿದ್ದಾರೆ.

(ಇ) ಕುರುಡ ಪ್ರವಾಸಿಗನೊಬ್ಬನಿಗೆ ಟಿಕೇಟ್ ತೆಗೆಯಬೇಕಾಗಿದೆ.

(ಈ) ಶಾಲಾ ಬಾಲಕನೊಬ್ಬ ಬಸ್ ಪಾಸನ್ನು ಬಿಟ್ಟು ಬಸ್ಸು ಹತ್ತಿದ್ದಾನೆ.

(ಉ) ಪ್ರವಾಸಿಗರೊಬ್ಬರು ಬಸ್ಸಿನಲ್ಲಿ ಪೆಟ್ರೋಲ್ ಸಾಗಿಸುತ್ತಿದ್ದಾರೆ.

(ಊ) ನೀವು ಬಸ್ಸಿನಲ್ಲಿ ಅರ್ಧಟಿಕೇಟ್ ತೆಗೆದುಕೊಳ್ಳುವಿರೋ ಇಲ್ಲವೆ ಪೂರ್ಣ ಟಿಕೇಟ್ ತೆಗೆದುಕೊಳ್ಳುವಿರೋ ?

**ಪ್ರಶ್ನೆ (೫) (ಅ) ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಶಬ್ದ ತುಂಬಿ ವಾಕ್ಯ ಪೂರ್ಣ ಮಾಡಿರಿ.**

(ಅ) ನನ್ನದು ವೇಳೆಗೆ ಸರಿಯಾಗಿ ಕೆಲಸ ಮಾಡುವ ........

(ಆ) ನನ್ನಲ್ಲಿ ಪ್ರವಾಸಿಗರು .............. ಪ್ರವಾಸ ಮಾಡುವಂತಿಲ್ಲ.

(ಇ) .................. ಪ್ರವಾಸಿಗರೇ ನನ್ನ ಹೆಗ್ಗುರುತು.

(ಈ) .................. ಬಸ್ಸಿನಿಂದ ನಿಮ್ಮ ಕೈ-ತಲೆಗಳನ್ನು ಹೊರಗೆ ಚಾಚಬೇಡಿ.

(ಉ) ನಾನು ಕಂಪನಿಯಿಂದ ಡಿಪೋಕ್ಕೆ ಪ್ರವೇಶಿಸುತ್ತಿದ್ದಂತೆಯೇ ನನಗೆ ........ಕಾದಿತ್ತು.

(ಊ) ಆ ಹುಮ್ಮಸ್ಸಿನಲ್ಲಿ ಹಗಲಿರುಳು ದುಡಿದು ನಾನು........... ಬೊಕ್ಕಸ ತುಂಬಿದೆ.

**(ಬ) ಕೆಳಗಿನ ಪಡೆನುಡಿಗಳನ್ನು ನಿಮ್ಮ ಸ್ವಂತವಾಕ್ಯಗಳಲ್ಲಿ ಉಪಯೋಗಿಸಿರಿ.**

(೧) ಮೆಲುಕುಹಾಕು - (೨) ಕಣ್ಮಣಿಯಾಗು -

(೩) ಮನಸೆಳೆ -

**ಪ್ರಶ್ನೆ (೬) ಈ ಕೆಳಗಿನ ವಾಕ್ಯಗಳಲ್ಲಿ ಅಕರ್ಮಕ, ಸಕರ್ಮಕ ವಾಕ್ಯಗಳನ್ನು ಗುರುತಿಸಿರಿ.**

(೧) ಭೀಮನು ಆಟವನ್ನು ಆಡುತ್ತಾನೆ.

(೨) ಲಕ್ಷ್ಮೀಯು ಪಾಠವನ್ನು ಓದಿದಳು.

(೩) ನಾಯಿ ಬೊಗಳಿತು.

(೪) ಮೀನು ನೀರಿನಲ್ಲಿ ಮುಳುಗಿ ಕಣ್ಮರೆಯಾಯಿತು.

(೫) ಮಗು ಅಳುತ್ತದೆ.

## ಉಪಕ್ರಮ

(೧) ಈ ಪಾಠದಲ್ಲಿ ಕಂಡು ಬರುವ ಗಾದೆಮಾತುಗಳನ್ನು ಸಂಗ್ರಹಿಸಿರಿ, ವರ್ಗದಲ್ಲಿ ಗೋಡೆಯ ಮೇಲೆ ಅಂಟಿಸಿರಿ.

(೨) ಬಸ್ಸಿನ ಆತ್ಮಕಥೆಯನ್ನು ನಿಮ್ಮ ಮಾತಿನಲ್ಲಿ ಹೇಳಿರಿ.

(೩) ಬಸ್ ನಿಲ್ದಾಣದಲ್ಲಿ ಬರೆದ ಬಸ್ಸಿನ ವೇಳಾಪತ್ರಿಕೆಯನ್ನು ಓದಿ ತಿಳಿದುಕೊಳ್ಳಿರಿ.

(೪) ಬಸ್ ನಿಲ್ದಾಣದಲ್ಲಿ ಬಸ್ ನಿಯಂತ್ರಕರು ಧ್ವನಿವರ್ಧಕದಲ್ಲಿ ಹೇಳುವ ಸೂಚನೆಗಳನ್ನು ಕೇಳಿ ತಿಳಿಯಿರಿ.

(೫) ಬಸ್ಸಿನ ವಿವಿಧ ಚಿತ್ರಗಳನ್ನು ಸಂಗ್ರಹಿಸಿರಿ.

**ಮುಳ್ಳಿನಲ್ಲಿ ಸುಮವು ಅರಳಿದಂತೆ ನೋವಿನಲ್ಲೂ ನಗು ಅರಳಲಿ.**

B2LNLE

# ೧೩. ಬಯಕೆ

ಹರಿವ ತೊರೆ ತೀರದಲಿ
ಎಲೆಹಸಿರ ಬಳ್ಳಿಯಲಿ
ಅರಳು ನೀ ಪುಷ್ಪವಾಗಿ.... ॥ ಪ ॥

ಬೆಳಗು ಮುಂಜಾವದಲಿ
ಅರಸುತ್ತಾ ಬನದಲಿ
ನಾ ಬರುವೆ ಭೃಂಗವಾಗಿ... ॥ ೧ ॥

ನೀಲಿ ಅಂಗಣದಲ್ಲಿ
ನೀಲಿ ಆಗಸದಲ್ಲಿ
ಮೂಡು ನೀ ಚುಕ್ಕೆಯಾಗಿ ॥ ೨ ॥

ಬಾನ ವಿಸ್ತಾರದಲಿ
ಹುಣ್ಣಿಮೆಯಾ ರಾತ್ರಿಯಲ್ಲಿ
ನಾ ಬರುವೆ ರಜನಿಯಾಗಿ ॥ ೩ ॥

ಸೃಷ್ಟಿಯಾ ಸೊಬಗಿನಲಿ
ಸೌಂದರ್ಯ ರಾಶಿಯಲಿ
ಮೂಡು ನೀ ಕವಿತೆಯಾಗಿ ॥ ೪ ॥

ನನ್ನನ್ನೇ ನಾ ಮರೆತು
ನಿನ್ನಲ್ಲಿ ನಾ ಬೆರೆತು
ಹಾಡುವೆನು ಕವಿತೆಯಾಗಿ ॥ ೫ ॥



**ಶಬ್ದಗಳ ಅರ್ಥ :**

ತೊರೆ - ನದಿ ; ರಜನಿ - ರಾತ್ರಿ; ಭೃಂಗ - ದುಂಬಿ;

ಬಾನು - ಆಕಾಶ ; ಸೊಬಗು - ಚೆಲುವು.

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(೧) ಪುಷ್ಪವು ಎಲ್ಲಿ ಅರಳುವದು ?

(೨) ಭೃಂಗವು ಯಾವಾಗ ಮತ್ತು ಹೇಗೆ ಬರುವದು ?

(೩) ನೀಲಿ ಆಗಸದಲ್ಲಿ ಏನು ಮೂಡುವುದು ?

(೪) ಕವಿತೆಯು ಹೇಗೆ ಮೂಡಿಬರುವುದೆಂದು ಕವಿ ಹೇಳುತ್ತಾನೆ ?

(೫) ಕವಿಯು ಕವಿತೆಯನ್ನು ಹೇಗೆ ಹಾಡುವೆನು ಎಂದು ಹೇಳುತ್ತಾನೆ ?

**ಪ್ರಶ್ನೆ (೨) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣ ಮಾಡಿರಿ.**

ಬಾನ...............................

.......................................

...................... ರಜನಿಯಾಗಿ

### ಉಪಕ್ರಮ

ಕನ್ನಡದ ಪ್ರಸಿದ್ಧ ಕವಿಗಳ ಭಾವಗೀತೆಗಳನ್ನು ಸಂಗ್ರಹಿಸಿರಿ ಮತ್ತು ರಾಗಬದ್ಧವಾಗಿ ಹಾಡಲು ಕಲಿಯಿರಿ.

**ದೇವರನ್ನು ನಿಸರ್ಗದಲ್ಲಿ ಕಾಣು.**

B2VJN2

# ೧೪. ಡಾ. ಹೋಮಿ ಜಹಾಂಗೀರ ಬಾಬಾ



ಮುಂಬಯಿಯಲ್ಲಿ ಜಹಾಂಗೀರ ಬಾಬಾ ಎಂಬ ಪ್ರಸಿದ್ಧ ವಕೀಲರಿದ್ದರು. ಇವರ ಪತ್ನಿಯ ಹೆಸರು ಮಿಹರಬಾಯಿ. ಈ ದಂಪತಿಗಳು ಪಾರ್ಷಿ ಮನೆತನಕ್ಕೆ ಸೇರಿದವರು. ಈ ಜನಾಂಗ ವಿದ್ಯಾವಂತರಿಂದ, ಸುಸಂಸ್ಕೃತರಿಂದ ಕೂಡಿತ್ತು. ಸಮಾಧಾನಚಿತ್ತದಿಂದ ಕೂಡಿದವರಾಗಿ, ಶಾಂತಿಪ್ರಿಯರೂ, ಕಷ್ಟಪಟ್ಟು ಕೆಲಸಮಾಡುವ ಗುಣವುಳ್ಳವರೂ ಆಗಿದ್ದರು. ಈ ಕುಟುಂಬದಲ್ಲಿ ೩೦ ಅಕ್ಟೋಬರ ೧೯೦೯ ರಲ್ಲಿ ಒಬ್ಬ ಗಂಡು ಮಗನು ಜನಿಸಿದನು. ದಂಪತಿಗಳು ತಮ್ಮ ಮಗನಿಗೆ ಹೋಮಿ ಎಂದು ಹೆಸರಿಟ್ಟರು. ಈ ಮಗುವೇ ಬೆಳೆದು ದೊಡ್ಡವನಾದ ಮೇಲೆ ಡಾ. ಹೋಮಿ ಜಹಾಂಗೀರ ಬಾಬಾ ಎಂದು ಜಗತ್ಪ್ರಸಿದ್ಧ ವಿಜ್ಞಾನಿಗಳೆನಿಸಿದರು.

ವಿದ್ಯಾವಂತರಾಗಿದ್ದ ದಂಪತಿಗಳು ತಮ್ಮ ಮಗನನ್ನು ಇಂಜನೀಯರನನ್ನಾಗಿ ಮಾಡಬೇಕೆಂಬ ಉದ್ದೇಶವಿಟ್ಟುಕೊಂಡಿದ್ದರು. ಬಾಲಕ ಹೋಮಿಯನ್ನು ಕ್ಯಾಥೆಡ್ರಿಯಲ್ ಹಾಗೂ ಜಾನ್ ಕ್ಯಾನನ್ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿಸಿದರು. ಮಗನಲ್ಲಿ ಏಕಾಗ್ರತೆಯನ್ನು ಮೂಡಿಸಲು ಮನೆಯಲ್ಲಿ ಹಲವಾರು ಮನೋರಂಜಕ ಆಟಗಳ ಅನುಕೂಲ ಮಾಡಿಕೊಟ್ಟರು. ಬುದ್ಧಿಯ ವಿಕಾಸಕ್ಕೆ ಅನುಕೂಲವಾಗುವಂಥ ವಾತಾವರಣವನ್ನು ರೂಪಿಸಿದರು. ಮನೆಯಲ್ಲಿಯೆ ಒಂದು ಪುಸ್ತಕ ಭಂಡಾರವನ್ನು ನಿರ್ಮಿಸಿದರು. ವಿಜ್ಞಾನ, ಸಾಹಿತ್ಯ, ಕಲೆ ಹೀಗೆ ಹಲವಾರು ಉತ್ತಮ ಪುಸ್ತಕಗಳು ಅಲ್ಲಿದ್ದವು. ಹೋಮಿಯವರಲ್ಲಿ

ಚುರುಕು ಬುದ್ಧಿ, ಅಪಾರ ನೆನಪಿನ ಶಕ್ತಿ ಮತ್ತು ಪ್ರತಿಭೆಗಳು ಅವರಲ್ಲಿ ಎದ್ದುಕಾಣುತ್ತಿದ್ದವು. ವಿದ್ಯೆಯಲ್ಲಿ ಆಸಕ್ತಿಯುಳ್ಳ ಈತ ಉತ್ತಮ ಅಂಕಗಳನ್ನು ಪಡೆದು ಉನ್ನತ ದರ್ಜೆಯಲ್ಲಿ ಪಾಸಾದನು.

ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲಂಡಿನ ರಾಯಲ್ ಇನಸ್ಟಿಟ್ಯೂಟ್ ಆಫ್ ಸೈನ್ಸ ಕಾಲೇಜಿನಲ್ಲಿ ಪ್ರವೇಶ ಕೊಡಿಸಲಾಯಿತು. ಭೌತಶಾಸ್ತ್ರ ಮತ್ತು ಗಣಿತ ಶಾಸ್ತ್ರಗಳು ಹೋಮಿಯನ್ನು ಆಕರ್ಷಿಸಿದವು. ಸೂಕ್ಷ್ಮಬುದ್ಧಿಯ ಮತ್ತು ಅಪಾರ ನೆನಪಿನ ಶಕ್ತಿಯುಳ್ಳ ಹೋಮಿ ಉತ್ತಮ ದರ್ಜೆಯಲ್ಲಿ ಪಾಸಾಗಿ ದಾಖಲೆ ನಿರ್ಮಿಸಿದರು. ಕ್ರಿಶ. ೧೯೩೦ ರಲ್ಲಿ ಮೆಕ್ಯಾನಿಕಲ್ ಇಂಜನೀಯರಿಂಗನಲ್ಲಿ ಪದವಿ ಪಡೆದು ಎರಡು ವರ್ಷಗಳ ಕಾಲ ಯುರೋಪಿನಲ್ಲಿ ಗಣಿತ ವಿಷಯದ ಅಧ್ಯಯನ ಮಾಡಿದರು. ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಸತತ ಆಳವಾದ ಅಧ್ಯಯನ ಮಾಡಿ ೧೯೩೪ ರಲ್ಲಿ ಪಿಎಚ್. ಡಿ ಪದವಿ ಪಡೆದುಕೊಂಡರು. ಡಾ. ಬಾಬಾರವರ ಪ್ರತಿಭೆಯನ್ನು ಗುರುತಿಸಿದ ಕೆಂಬ್ರೀಡ್ಜ್ ವಿಶ್ವವಿದ್ಯಾಲಯವು ಅವರನ್ನು ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ ನೇಮಕ ಮಾಡಿಕೊಂಡಿತು. ಇದೇ ಸಮಯದಲ್ಲಿ ಬಾಹ್ಯಾಕಾಶದ (ಕಾಸ್ಮಿಕ್) ಕಿರಣಗಳ ಬಗ್ಗೆ ಸಂಶೋಧನೆಯನ್ನು ಆರಂಭಿಸಿದರು. ಕ್ರಿ.ಶ. ೧೯೩೭ ರಲ್ಲಿ "ಕಾಸ್ಮಿಕ್ ಕಿರಣಗಳಲ್ಲಿ ಹೊಸದೊಂದು ಅಣು ಇದೆ." ಎಂಬ ರಹಸ್ಯವನ್ನು ಡಾ. ಬಾಬಾ ಕಂಡು ಹಿಡಿದರು. ಆ ಕಣಕ್ಕೆ "ಮೆಸಾನ್ಸ" ಎಂಬ ಹೆಸರಿಟ್ಟರು. ಆಗ ಡಾ. ಬಾಬಾರವರ ಕೀರ್ತಿ ಜಗತ್ತಿನಾದ್ಯಂತ ಪಸರಿಸಿತು.

ಕ್ರಿ.ಶ. ೧೯೪೦ ರಲ್ಲಿ ಭಾರತಕ್ಕೆ ಮರಳಿದ ಡಾ. ಬಾಬಾ ಅಣುಶಕ್ತಿಯ ವಿಚಾರದಲ್ಲಿ ಭಾರತವನ್ನು ಜಗತ್ತಿನಲ್ಲಿಯೇ ಬಲಿಷ್ಠ ರಾಷ್ಟ್ರವನ್ನಾಗಿ ಮಾಡಬೇಕೆಂದು ತೀರ್ಮಾನಿಸಿದರು. "ವಿಜ್ಞಾನ ಪ್ರಪಂಚದಲ್ಲಿ ಇಡೀ ವಿಶ್ವಕ್ಕೆ ಹಿರಿಮೆಯ ಸ್ಥಾನವನ್ನೂ, ನಾಯಕಪಟ್ಟವನ್ನೂ ಪಡೆಯುವವರೆಗೆ ನಾನು ಕಾರ್ಯ ನಿರತನಾಗುವೆನು. ಅವಿಶ್ರಾಂತವಾಗಿ ದುಡಿಯುವೆನು." ಎಂದು ಪ್ರತಿಜ್ಞೆ ಮಾಡಿದರು. ಅದರಂತೆ ಕಾರ್ಯ ಪ್ರವೃತ್ತರಾದರು.

ಡಾ. ಬಾಬಾರವರನ್ನು "ಭಾರತದ ಅಣು ವಿಜ್ಞಾನದ ಪಿತಾಮಹ" ಎಂದು ಗೌರವದಿಂದ ಕರೆಯುತ್ತಾರೆ. ಅಣುವಿದ್ಯುತ್ ಶಕ್ತಿಯ ಬಗ್ಗೆ ಇವರಿಗೆ ಸ್ಪಷ್ಟವಾದ ಕಲ್ಪನೆ ಇತ್ತು. ಅಣುಶಕ್ತಿಯನ್ನು ಕೇವಲ ಶಾಂತಿಯ ಉದ್ದೇಶಗಳಿಗಾಗಿಯೇ ಬಳಸಬೇಕೆಂಬುದು ಇವರ ಧ್ಯೇಯವಾಗಿತ್ತು. ಬಾಬಾರವರ ಸತತ ಪ್ರಯತ್ನದ ಫಲವಾಗಿ ಕ್ರಿ.ಶ. ೧೯೫೫ ರಲ್ಲಿ ಮುಂಬಯಿಯ ಹತ್ತಿರವಿರುವ ಟ್ರಾಂಬೆಯಲ್ಲಿ ಏಷ್ಯಾ ಖಂಡದಲ್ಲಿಯೇ ಪ್ರಥಮವೆನಿಸುವ "ಅಣು ಸಂಶೋಧನಾ ಘಟಕವನ್ನು" ಸ್ಥಾಪಿಸಲಾಯಿತು. ಅದರಲ್ಲೊಂದು ಪ್ಲುಟೋನಿಯಂ ಪ್ಲಾಂಟಿನ ಘಟಕವನ್ನೂ ಸ್ಥಾಪಿಸಿದರು. ಇದರ ಸ್ಥಾಪನೆಯಿಂದ ಭಾರತ

ಪ್ರಪಂಚದಲ್ಲಿಯೇ ಐದನೆಯ ಸ್ಥಾನ ಪಡೆಯಿತು. ಈ ಘಟಕದ ಸ್ಥಾಪನೆಯ ಶುಭ ಸಂದರ್ಭದಲ್ಲಿ ಇದೊಂದು ಅಪೂರ್ವವಾದ ಸಾಧನೆ, "ಭಾರತೀಯ ವಿಜ್ಞಾನಿಗಳೂ, ಇಂಜನೀಯರಗಳೂ ವಿದೇಶದ ನೆರವನ್ನು ಪಡೆಯದೆ ಈ ಪ್ಲುಟೋನಿಯಂ ಪ್ಲಾಂಟನ್ನು ದೇಶೀಯ ತಂತ್ರಜ್ಞಾನದಿಂದಲೇ ತಯಾರಿಸಿದ್ದಾರೆ." ಎಂದು ಹೆಮ್ಮೆಯಿಂದ ಭಾರತೀಯರ ಸಾಧನೆಯನ್ನು ಶ್ಲಾಘಿಸಲಾಯಿತು. ಕ್ರಿ.ಶ. ೧೯೫೭ ರಲ್ಲಿ ಭಾರತ ಸರಕಾರವು ಬಾಬಾರವರಿಗೆ "ಪದ್ಮಭೂಷಣ" ಪ್ರಶಸ್ತಿಯನ್ನಿತ್ತು ಸನ್ಮಾನ ಮಾಡಿತು. ಭಾರತದ ಅನೇಕ ವಿಶ್ವವಿದ್ಯಾಲಯಗಳೂ ಮತ್ತು ವಿದೇಶಿ ವಿಶ್ವವಿದ್ಯಾಲಯಗಳೂ "ಡಾಕ್ಟರ್ ಆಫ್ ಸೈನ್ಸ್" ಪದವಿಯನ್ನು ಕೊಟ್ಟು ಗೌರವಿಸಿದವು.

ಕ್ರಿ.ಶ. ೧೯೬೦ ರಲ್ಲಿ ಜಗತ್ತಿನಲ್ಲಿ ಎಲೆಕ್ಟ್ರಾನಿಕ್ ಸಂಶೋಧನೆಯಾಯಿತು. ಎಲೆಕ್ಟ್ರಾನಿಕ್ ಸಂಶೋಧನೆಯಿಂದ ಟೆಲಿವಿಜನ್, ರೇಡಿಯೋ, ಹಾಗೂ ಕಂಪ್ಯೂಟರಗಳನ್ನು ಸೃಷ್ಟಿಸಲು ಸಾಧ್ಯವಾಯಿತು. ಎಲೆಕ್ಟ್ರಾನಿಕ್ಸ್ ಅದ್ಭುತವಾಗಿ ಪರಿಸರವನ್ನೇ ಪ್ರಪಂಚದಾದ್ಯಂತ ಬದಲಾಯಿಸಿತು. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಪ್ರಪಂಚವೇ ಮುಂದೆ ಮುಂದೆ ಸಾಗುತ್ತಿರಲು, ಭಾರತದಲ್ಲಿ ಹೆಚ್ಚಿನ ಪ್ರಗತಿಯಾಗಿರಲಿಲ್ಲ. ಭಾರತವು ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಮುಂದುವರಿಯಬೇಕಾಗಿರುವುದು ಅತೀ ಮುಖ್ಯವೆಂದು ಡಾ. ಬಾಬಾರವರು ಭಾವಿಸಿದರು. ಅದಕ್ಕಾಗಿ ವರದಿಯೊಂದನ್ನು ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸಿದರು. ಸರಕಾರವು ತಕ್ಷಣ ವರದಿಯನ್ನು ಕಾರ್ಯರೂಪಕ್ಕೆ ತಂದಿತು. ಆ ಪ್ರಯತ್ನದಿಂದಲೇ ಇಂದು ಭಾರತವು ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಅದ್ಭುತ ಸಾಧನೆಯನ್ನು ಮಾಡಿದೆ.

ಡಾ. ಬಾಬಾರವರು ನಿಸರ್ಗವನ್ನು ಪ್ರೀತಿಸುತ್ತಿದ್ದರು. ಹಚ್ಚ ಹಸಿರಾದ ಗಿಡ ಮರಗಳು, ಸುಂದರವಾದ ಹೂವುಗಳು ಮನಸ್ಸಿಗೆ ಮುದವನ್ನು ನೀಡುತ್ತವೆ. ಅಲ್ಲಿ ಏಕಾಗ್ರತೆ, ಮನ:ಶಾಂತಿ ದೊರೆಯುತ್ತದೆ ಎಂಬುದು ಬಾಬಾರವರ ಅಭಿಪ್ರಾಯವಾಗಿತ್ತು. ಅದಕ್ಕಾಗಿ ಅವರು ತಮ್ಮ ಬಿಡುವಿನ ಸಮಯವನ್ನು ನಿಸರ್ಗ ನಿರೀಕ್ಷಣೆಯಲ್ಲಿ ಕಳೆಯುತ್ತಿದ್ದರು.

೨೪ ಜನವರಿ ೧೯೬೬ ರಂದು ಜಿನೇವಾದಲ್ಲಿ ಅಂತರರಾಷ್ಟ್ರೀಯ ಸಮ್ಮೇಲನವಿತ್ತು. ಅವರು ಭಾಗವಹಿಸಲು ಹೋಗುತ್ತಿದ್ದಾಗ ಹಿಮಾಚ್ಛಾದಿತ ಆಲ್ಪ್ಸ ಪರ್ವತದಲ್ಲಿ ವಿಮಾನ ಅಘಘಾತಕ್ಕೀಡಾಯಿತು. ಅಲ್ಲಿ ಬಾಬಾರವರ ಜೀವನದ ಜ್ಯೋತಿ ನಂದಿಹೋಯಿತು. ಈ ದುರ್ಘಟನೆಯಿಂದ ಭಾರತವಷ್ಟೇ ಅಲ್ಲ, ಇಡೀ ವಿಶ್ವವೇ ದು:ಖ ಸಾಗರದಲ್ಲಿ ಮುಳುಗಿತು. ಟ್ರಾಂಬೆಯಲ್ಲಿರುವ ಅಣು ಸಂಶೋಧನಾ ಕೇಂದ್ರಕ್ಕೆ "ಡಾ. ಬಾಬಾ ಅಣು ಸಂಶೋಧನಾ ಕೇಂದ್ರ" ಎಂದು ನಾಮಕರಣ ಮಾಡಿದರು. ಡಾ. ಬಾಬಾ ನಡೆದ ದಾರಿಯಲ್ಲಿಯೇ ನಡೆದು ಅವರ ಧ್ಯೇಯೋದ್ದೇಶಗಳನ್ನು ಈಡೇರಿಸುವುದೇ

ನಾವು ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ. ನಮ್ಮ ಸಂಹಾರಕ್ಕಾಗಿ ಅಲ್ಲ !" ಎಂಬುದರ ಅರಿವು
ಧ್ಯೇಯ ಮತ್ತು ಸಾಧನೆಗಳು "ವಿಜ್ಞಾನದ ನಮ್ಮಲ್ಲಿರಬೇಕು.
ಬಳಕೆ ಮಾನವನ ಉತ್ಕರ್ಷಕ್ಕಾಗಿರಬೇಕೇ ವಿನ: **– ಬಿ.ಎ.ರಂಗನಾಥ**

**ಶಬ್ದಗಳ ಅರ್ಥ :**

ವಿಕಾಸ – ಅಭಿವೃದ್ಧಿ ; ಸಂಹಾರ – ನಾಶ; ಪ್ರತಿಭೆ – ವಿಶೇಷ ಪ್ರಜ್ಞೆ ;
ಉತ್ಕರ್ಷ – ಅಭಿವೃದ್ಧಿ ; ಸನ್ಮಾನ – ಗೌರವ.

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(೧) ಡಾ.ಹೋಮಿ ಜಹಾಂಗೀರ ಬಾಬಾರವರು ಯಾವ ಮನೆತನಕ್ಕೆ ಸೇರಿದವರು ?
(೨) ಡಾ.ಹೋಮಿ ಬಾಬಾರವರು ಯಾವ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದರು?
(೩) ಕ್ರಿ.ಶ. ೧೯೫೫ ರಲ್ಲಿ ಟ್ರಾಂಬೆಯಲ್ಲಿ ಏನನ್ನು ಸ್ಥಾಪಿಸಲಾಯಿತು ?
(೪) ಡಾ.ಬಾಬಾ ಅವರ ಆಸಕ್ತಿಯ ವಿಷಯಗಳಾವವು ?
(೫) ಡಾ. ಬಾಬಾ ಅವರು ಏನನ್ನು ಪ್ರೀತಿಸುತ್ತಿದ್ದರು ?

**ಪ್ರಶ್ನೆ (೨) ಹೊಂದಿಸಿ ಬರೆಯಿರಿ.**

| | | | |
|---|---|---|---|
| ೧) | ಕ್ರಿ.ಶ.೧೯೦೯ | ಅ) | ಇನಸ್ಟಿಟ್ಯೂಟ್ ಆಪ್ ಸೈನ್ಸ ಕಾಲೇಜು |
| ೨) | ಇಂಗ್ಲಂಡ | ಆ) | ಕ್ರಿ.ಶ. ೧೯೩೪ |
| ೩) | ಪಿಎಚ್.ಡಿ.ಪದವಿ | ಇ) | ಕ್ರಿ.ಶ. ೧೯೫೭ |
| ೪) | ಪದ್ಮಭೂಷಣ | ಈ) | ಡಾ.ಬಾಬಾರವರ ಜನನ |

### ಉಪಕ್ರಮ

ಭಾರತೀಯ ವಿಜ್ಞಾನಿಗಳ ಚರಿತ್ರೆಗಳನ್ನು ಕೇಳಿ ತಿಳಿದುಕೊಳ್ಳಿರಿ ಮತ್ತು ಅವರ ಭಾವಚಿತ್ರಗಳನ್ನು ಸಂಗ್ರಹಿಸಿರಿ.

**ವಿಜ್ಞಾನದ ಉನ್ನತಿ, ಮಾನವನ ಪ್ರಗತಿ.**

B35FPP

# ೧೫. ಪರಿಶ್ರಮ



ಸಕಲೇಶಪುರ ಎಂಬ ಹಳ್ಳಿಇತ್ತು. ಅಲ್ಲಿ ಭರಮಪ್ಪ ಮಲ್ಲಮ್ಮ ಎಂಬ ದಂಪತಿಗಳಿದ್ದರು. ಕಷ್ಟಪಟ್ಟು ದುಡಿದು ಜೀವನ ಸಾಗಿಸುತ್ತಿದ್ದರು. ಸುಂದರ ಅವರ ಮಗ. ಬಡತನದ ಕುಟುಂಬದಲ್ಲಿ ಬೆಳೆದವನಾಗಿದ್ದರಿಂದ ಅವನಿಗೆ ಮನೆತನದ ಪರಿಸ್ಥಿತಿಯ ಅರಿವಿತ್ತು. ಹಗಲಿರುಳು ಕಷ್ಟಪಟ್ಟು ಓದುತ್ತಿದ್ದನು. ಬರಬರುತ್ತ ಸಕಲೇಶಪುರದಲ್ಲಿ ದುಡಿಯಲು ಕೆಲಸ ಸಿಗುವುದು ಕಷ್ಟಕರವಾಯಿತು. ಜೀವನಸಾಗಿಸುವುದು ಕಠಿಣವಾಯಿತು. ಹೊಟ್ಟೆ ತುಂಬಿಕೊಳ್ಳಲು ಅವರು ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಬಂದರು. ಒಬ್ಬ ಗುತ್ತಿಗೆದಾರನ ಹತ್ತಿರ ಗಾರೆಯ ಕೆಲಸ ಮಾಡುತ್ತ ಬದುಕಿನ ಬಂಡಿ ಎಳೆಯತೊಡಗಿದರು. ಸುಂದರನಿಗೆ ಶಾಲೆ ಕಲಿಯುವ ಆಸೆ ಇದ್ದರೂ ಅದನ್ನು ಬಿಟ್ಟು ಕೆಲಸಕ್ಕೆ ತೊಡಗಬೇಕಾಯಿತು.

ಒಂದು ಸಲ ಶಿಕ್ಷಣ ಇಲಾಖೆಯವರು "ಶಾಲಾ ಬಾಹ್ಯ ವಿದ್ಯಾರ್ಥಿಗಳ" ಶೋಧ ಮಾಡುತ್ತಿದ್ದರು. ಆಗ ಕಟ್ಟಡ ನಿರ್ಮಾಣ ಸ್ಥಳದಲ್ಲಿ ಈ ಬಾಲಕನು ಕಂಡು ಬಂದನು. ಅವರು ಭರಮಪ್ಪ-ಮಲ್ಲಮ್ಮರಿಗೆ ತಿಳುವಳಿಕೆ ಹೇಳಿ ಸುಂದರನನ್ನು ಶಾಲೆಗೆ ಕರೆತಂದರು. ಮೊದಲೇ ಕಲಿಯಬೇಕೆಂಬ ತವಕದಲ್ಲಿದ್ದ ಸುಂದರನಿಗೆ ರೊಟ್ಟಿ ಜಾರಿ ತುಪ್ಪದಲ್ಲಿ

ಬಿದ್ದಂತಾಯಿತು. ಆದರೂ ತಂದೆ-ತಾಯಿಗಳ ಕಷ್ಟವನ್ನು ಕಂಡು ಮರುಗಬೇಕಾಯಿತು. "ಹನಿ ಹನಿ ಕೂಡಿದರೆ ಹಳ್ಳ. ತೆನೆ ತೆನೆ ಕೂಡಿದರೆ ರಾಶಿ'' ಎಂಬಂತೆ ತಂದೆ ತಾಯಿಗಳ ದುಡಿತದಲ್ಲಿ ತಾನೂ ಭಾಗಿಯಾಗಲು ನಿರ್ಧರಿಸಿದನು. ಮುಂಜಾನೆ ಎದ್ದು ಮನೆ ಮನೆಗೆ ಪೇಪರ ಮತ್ತು ಹಾಲಿನ ಪಾಕೀಟು ಹಾಕುತ್ತಿದ್ದನು. ಶಾಲೆಯ ವೇಳೆಯಲ್ಲಿ ಶಾಲೆಗೆ ಹೋಗಿ ಲಕ್ಷ್ಯಪೂರ್ವಕ ಕಲಿಯುತ್ತಿದ್ದನು. ಒಂದು ಹಳೆಯ ಓಲೆ ಗಾಡಿಯನ್ನು ಕೊಂಡನು. ಶಾಲೆ ಬಿಟ್ಟ ಬಳಿಕ ಓಲೆಗಾಡಿಯಲ್ಲಿ ಆಲೂಗಡ್ಡೆ, ಬದನೆ, ಬೆಂಡೆ, ಹೀರೆ, ಹಾಗಲ ಇತ್ಯಾದಿ ಕಾಯಿಪಲ್ಲೆಗಳನ್ನಿಟ್ಟುಕೊಂಡು ಓಣಿ ಓಣಿಗಳಲ್ಲಿ ಕೂಗಾಡಿ ಕಾಯಿಪಲ್ಲೆ ಮಾರುತ್ತಿದ್ದನು. ಬಂದ ಹಣದಲ್ಲಿ ತಕ್ಕ ಮಟ್ಟಿಗೆ ಖರ್ಚು ಮಾಡುತ್ತಿದ್ದನು. ಜೊತೆಗೆ ಉಳಿತಾಯವನ್ನೂ ಮಾಡುತ್ತಿದ್ದನು. ತಡರಾತ್ರಿಯವರೆಗೆ ಓದುತ್ತಿದ್ದನು. ಹೀಗೆ ಕಷ್ಟಪಟ್ಟು ಓದಿ ಪದವೀಧರನಾದನು.

"ಮಗೂ, ಎಷ್ಟೊಂದು ಕಷ್ಟ ಪಡುತ್ತಿದ್ದೀಯಾ? ಸ್ವಲ್ಪ ಕೆಲಸ ಕಡಿಮೆ ಮಾಡು." ಎಂದು ತಂದೆತಾಯಿ ಒತ್ತಾಯಿಸುತ್ತಿದ್ದರು. ಅಪ್ಪಾ, ಸ್ವಲ್ಪ ಸ್ವಲ್ಪ ಹಣ ಸಂಗ್ರಹದಿಂದ ರೂಪಾಯಿಗಳ ಉಳಿತಾಯವಾಗುತ್ತದೆ ಎಂದು ವಿವೇಕಭರಿತನಾಗಿ ಉತ್ತರ ಹೇಳುತ್ತಿದ್ದನು. ಮಗೂ ಚಿಕ್ಕ ವಯಸ್ಸಿನಲ್ಲಿ ಅದೆಂತಹ ಕಠಿಣ ಪರಿಶ್ರಮ ಪಡುತ್ತಿರುವಿ ಎಂದು ವಾತ್ಸಲ್ಯದಿಂದ ತಾಯಿ ಕಂಬನಿ ಮಿಡಿದರೆ, "ಅಮ್ಮಾ ! ನೀವು ಯಾಕೆ ಚಿಂತಿಸುತ್ತೀರಿ. ನೀವು ನಗುನಗುತ್ತಾ ಇರಬೇಕು. ನಾನೇನು ನಿಮ್ಮ ಹಾಗೆ ಇಳಿವಯಸ್ಸಿನವನಲ್ಲ. ನನ್ನ ಬಳಿ ದುಡಿಯುವ ಶಕ್ತಿಯೂ, ಓದುವ ಯುಕ್ತಿಯೂ ಇದೆ. ಈ ವಯಸ್ಸಿನಲ್ಲಿ ನನಗೆ ಪರಿಶ್ರಮದ ರೂಢಿಯಾದರೆ ಅದು ಶಾಶ್ವತವಾಗಿ ಉಳಿಯುತ್ತದೆ. ನೀವು ನನ್ನ ಪರಿಶ್ರಮಕ್ಕೆ ಪ್ರೇರಣೆ ಕೊಡಬೇಕು." ಎಂದು ಮಾರ್ಮಿಕವಾಗಿ ಉತ್ತರಿಸಿ ತಂದೆ ತಾಯಿಗಳನ್ನು ಸಮಾಧಾನಪಡಿಸುತ್ತಿದ್ದನು.

ಪದವೀಧರನಾದ ಸುಂದರನು ತನ್ನ ಸ್ವಪ್ರಯತ್ನದಿಂದ ಓದುತ್ತಾ ಆಯ್.ಎ.ಎಸ್. ಪರೀಕ್ಷೆಯನ್ನು ಕಟ್ಟಿದನು. ಚೆನ್ನಾಗಿ ಓದಿ ಅದರಲ್ಲಿಯೂ ರ್‍ಯಾಂಕ ವಿದ್ಯಾರ್ಥಿಯಾಗಿ ಪಾಸಾದನು. ಏನಾಶ್ಚರ್ಯ ! ಎಲ್ಲ ಪತ್ರಿಕೆಗಳ ಮುಖಪುಟದಲ್ಲಿ ಸುದ್ದಿಯೋ ಸುದ್ದಿ. "ಓಣಿ ಓಣಿ ತಿರುಗಾಡಿ ಕಾಯಿಪಲ್ಲೆ ಮಾರುತ್ತಿದ್ದ ಹುಡುಗ ಆಯ್. ಎ. ಎಸ್. ಪಾಸಾಗಿದ್ದಾನೆ." ಎಂದು ರಂಗು ರಂಗಾಗಿ ಬರೆಯಲಾಗಿತ್ತು. ಅದನ್ನ ಓದಿ ಸುಂದರನಿಗೆ ಆನಂದವಾಯಿತು. ಭರಮಪ್ಪ ಮಲ್ಲಮ್ಮರಿಗಂತೂ ಸಂತೋಷವು ಉಕ್ಕಿ ಹರಿಯಿತು. ತುತ್ತು ಅನ್ನಕ್ಕೂ ದಿಕ್ಕಿಲ್ಲದೆ ಪರದಾಡುತ್ತ ಕೂಲಿ ಕೆಲಸ ಹುಡುಕಿಕೊಂಡು ಬಂದ ಕುಟುಂಬಕ್ಕೆ ಆಧಾರ ದೊರೆತಂತಾಯಿತು. ಇಷ್ಟೆಲ್ಲಕ್ಕೂ ಏನು ಕಾರಣ ? "ಕೇವಲ ಸತತ ಪರಿಶ್ರಮ" ಪರಿಶ್ರಮಪಡುವವರಿಗೆ ಫಲ ಸಿಗುವುದು ನಿಶ್ಚಿತ ಎಂಬುದನ್ನು ಸುಂದರನಿಂದ ಕಲಿಯಬೇಕು.

ತರಬೇತಿಯ ನಂತರ ಗುಡ್ಡಗಾಡು ಪ್ರದೇಶದಲ್ಲಿದ್ದ ಆನಂದಗಡ ಜಿಲ್ಲೆಗೆ ಜಿಲ್ಲಾಧಿಕಾರಿ ಎಂದು ಸುಂದರನಿಗೆ ನೌಕರಿ ಆದೇಶ ಬಂದಿತು.

ಎಲ್ಲರಿಗೂ ಆನಂದವೇ ಆನಂದ. ಕಡು ಬಡತನದಲ್ಲಿಯೂ ತನ್ನನ್ನು ಓದಿಸಿದ ತಂದೆ ತಾಯಿಗಳ ಶ್ರಮಕ್ಕೆ ಋಣ ವ್ಯಕ್ತಪಡಿಸುತ್ತಾ ತಂದೆ ತಾಯಿಗಳ ಪಾದ ಮುಟ್ಟಿ ನಮಸ್ಕಾರ ಮಾಡಿದನು. ಅತ್ಯಂತ ಪರಿಶ್ರಮದಿಂದ ಈ ಸಾಧನೆಯನ್ನು ಮಾಡಿದ ಮಗನ ಛಲಗಾರಿಕೆಗೆ ಅವರು ಹೆಮ್ಮೆ ಪಟ್ಟರು.

ಬಡತನದ ಬೇಗುದಿಯಲ್ಲಿ ಬೆಂದು, ಬಡತನದ ಅನುಭವವನ್ನು ಅನುಭವಿಸಿದ, ಸುಂದರನು ನಿಸ್ವಾರ್ಥತನದಿಂದಲೂ, ಕೆಲಸಮಾಡತೊಡಗಿದನು. ಸರಕಾರದ ಎಲ್ಲ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಮುಟ್ಟಿಸತೊಡಗಿದನು. ಕೆಲಸದಲ್ಲಿ ಬಿಡುವು ಮಾಡಿಕೊಂಡು ಶಾಲೆ ಕಾಲೇಜುಗಳಿಗೆ ಭೆಟ್ಟಿಕೊಡುತ್ತಿದ್ದನು. ಶಿಕ್ಷಣದ ಮಹತ್ವ ಮತ್ತು ಅದನ್ನು ಸಾಧಿಸುವ ವಿಧಾನಗಳ ಬಗ್ಗೆ ತಿಳುವಳಿಕೆ ನೀಡುತ್ತಿದ್ದನು. ದಕ್ಷ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತ ಎಲ್ಲರ ಮೆಚ್ಚುಗೆಗೆ ಪಾತ್ರನಾದನು.

**ಶಬ್ದಗಳ ಅರ್ಥ :**

ತವಕ – ಆತುರ ;

ಶಾಶ್ವತ – ಸ್ಥಿರವಾದ;

ವಾತ್ಸಲ್ಯ – ಪ್ರೀತಿ, ಮಮತೆ ;

ಪ್ರೇರಣೆ – ಹುರಿದುಂಬಿಸು.

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

(೧) ಸುಂದರನಿಗೆ ಯಾವ ಆಸೆ ಇತ್ತು ?
(೨) ಶಿಕ್ಷಣ ಇಲಾಖೆಯವರು ಯಾರ ಶೋಧ ಮಾಡುತ್ತಿದ್ದರು ?
(೩) ಸುಂದರನ ತಾಯಿ ಕಂಬನಿ ಏಕೆ ಮಿಡಿದಳು ?
(೪) ಪದವೀಧರನಾದ ಸುಂದರನು ಯಾವ ಪರೀಕ್ಷೆ ಕಟ್ಟಿದನು ?
(೫) ಸುಂದರನಿಗೆ ಯಾವ ನೌಕರಿ ದೊರಕಿತು ?

**ಪ್ರಶ್ನೆ (೨) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(೧) ದಂಪತಿಗಳು ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಏಕೆ ಬಂದರು ?
(೨) ಸುಂದರನು ಯಾವ ರೀತಿ ದುಡಿತದಲ್ಲಿ ಭಾಗಿಯಾದನು ?
(೩) ಸುಂದರನು ತಂದೆ ತಾಯಿಗಳನ್ನು ಹೇಗೆ ಸಮಾಧಾನ ಪಡಿಸುತ್ತಿದ್ದನು ?
(೪) ತಂದೆತಾಯಿಗಳು ಮಗನ ಛಲಗಾರಿಕೆಗೆ ಹೇಗೆ ಹೆಮ್ಮೆಪಟ್ಟರು ?
(೫) ಸುಂದರನು ದಕ್ಷ ಅಧಿಕಾರಿಯಾಗಿ ಎಲ್ಲರಿಗೂ ಹೇಗೆ ಮೆಚ್ಚುಗೆಯಾದನು ?

**ಪ್ರಶ್ನೆ (೩) ಬಿಟ್ಟ ಸ್ಥಳ ತುಂಬಿರಿ.**

(೧) ರೊಟ್ಟಿಜಾರಿ .......... ದಲ್ಲಿ ಬಿದ್ದಂತಾಯಿತು.

(೨) ಪರಿಶ್ರಮ ಪಡುವವರಿಗೆ .........ಸಿಗುವುದು ನಿಶ್ಚಿತ.

(೩) ಕೆಲಸದಲ್ಲಿ ಬಿಡುವು ಮಾಡಿಕೊಂಡು ....... ಗಳಿಗೆ ಭೆಟ್ಟಿ ಕೊಡುತ್ತಿದ್ದನು.


**ಪ್ರಶ್ನೆ (೪) ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.**

| | | | |
|---|---|---|---|
| ಕಠಿಣ | X | ಆಸೆ | X |
| ಮುಂಜಾನೆ | X | ಉಳಿವು | X |
| ಶಾಶ್ವತ | X | ನಿಶ್ಚಿತ | X |

**ಉಪಕ್ರಮ:** **(೧)** ಬಡಮಕ್ಕಳಿಗೆ ಮತ್ತು ಅಸಹಾಯಕರಿಗೆ ನೀವು ಯಾವ ರೀತಿ ಸಹಾಯ ಮಾಡಬಲ್ಲಿರಿ ಎಂಬುದನ್ನು ಬರೆಯಿರಿ.

**(೨)** ವಿದ್ಯಾರ್ಥಿಗಳಿಗೆ ಸರಕಾರದಿಂದ ಸಿಗುವ ಸಹಾಯ, ಸೌಲತ್ತುಗಳನ್ನು ಶಿಕ್ಷಕರಿಂದ, ಪಾಲಕರಿಂದ ಕೇಳಿ ಮಾಹಿತಿ ತಿಳಿದುಕೊಳ್ಳಿರಿ.

**ಛಲವಿದ್ದಲ್ಲಿ ಬಲವಿದೆ.**



# ೧೬. ನೇತಾಜಿ



ಭಾರತ ಮಾತೆಯ ಬಸಿರಲಿ ಬಂದನು
ಹಿರಿಮೆಯ ಹಿರಿಮಗ ನೇತಾಜಿ
ದೇಶದ ಬಂಧನ ಕಳಚಲು ಹೆಣಗಿದ
ಸ್ವಾತಂತ್ರ್ಯಪ್ರಿಯನು ನೇತಾಜಿ ॥

ಬಿಳಿಯರ ಗುಂಡಿಗೆ ಬೆದರದ ಗಂಡೆದೆ
ತೋರಿದ ಗಟ್ಟಿಗ ನೇತಾಜಿ
ಪ್ರತಿ ಸರಕಾರವ ರಚಿಸುವ ಪೌರುಷ
ಮೆರೆದ ಪರಾಕ್ರಮಿ ನೇತಾಜಿ ॥

ಭಾರತ ರಾಷ್ಟ್ರದ ಸೇನೆಯ ಕಟ್ಟಿದ
ಶಿಸ್ತಿನ ಸೈನಿಕ ನೇತಾಜಿ
ಜೈಹಿಂದ್ ಗೀತವ ಮೊದಲಿಗೆ ಹಾಡಿದ
ಗಾಯಕ ಮುಖ್ಯನು ನೇತಾಜಿ ॥

ಸ್ವಾತಂತ್ರ್ಯಕಾಗಿ ಅವಿರತ ಶ್ರಮಿಸಿರಿ
ಎಂದರು ನಮ್ಮಯ ನೇತಾಜಿ
ಕ್ಷತ್ರಿಯ ಧೈರ್ಯದ ಸಿಂಹದ ಶೌರ್ಯದ
ಸಾಹಸಿ ನಾಯಕ ನೇತಾಜಿ

ಆಂಗ್ಲರ ಸೈನ್ಯಕೆ ಸಡ್ಡು ಹೊಡೆಯುತ
ಸಮರ ಸಾರಿದರು ನೇತಾಜಿ
ನಾಡಿನ ಒಳಿತಿಗೆ ದೇಹವ ಸವೆಸಿದ
ಜನತೆಯ ಸೇವಕ ನೇತಾಜಿ

– ಪಳಕಳ ಸೀತಾರಾಮ ಭಟ್ಟ

**ಶಬ್ದಗಳ ಅರ್ಥ :**

ಕಳಚು - ಬೇರೆಮಾಡು; ಬಿಚ್ಚು; ಪೌರುಷ - ಪರಾಕ್ರಮ ; ಸಮರ - ಯುದ್ಧ ;
ಒಳಿತು - ಒಳ್ಳೆಯ ; ಸವೆಸು - ಕ್ಷೀಣಿಸು.

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(೧) ನೇತಾಜಿ ಯಾವುದಕ್ಕಾಗಿ ಹೆಣಗಿದರು ?
(೨) ನೇತಾಜಿ ಮೊದಲಿಗೆ ಹಾಡಿದ ಗೀತೆ ಯಾವುದು ?
(೩) ನೇತಾಜಿಯವರು ನಮಗೆ ಏನು ಹೇಳಿದರು ?
(೪) ಅವರು ಯಾವುದಕ್ಕಾಗಿ ದೇಹ ಸವೆಸಿದರು ?

**ಪ್ರಶ್ನೆ (೨) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣ ಮಾಡಿರಿ.**

ಬಿಳಿಯರ ಗುಂಡಿಗೆ ....................................

.............................................................

.............................................................

..........................................ನೇತಾಜಿ

## ಉಪಕ್ರಮ

(೧) ಈ ಕವಿತೆಯನ್ನು ಸಾಭಿನಯದಿಂದ ಹಾಡಿರಿ.
(೨) ದೇಶಕ್ಕಾಗಿ ಶ್ರಮಿಸಿದ ಮುಖಂಡರ ಚಿತ್ರಗಳನ್ನು ಸಂಗ್ರಹಿಸಿ, ಅಂಟುಪುಸ್ತಕ ತಯಾರಿಸಿರಿ.

**ದೇಶ ಸೇವೆಯೇ ಈಶ ಸೇವೆ.**

83N7SZ

# ೧೭. ಸ್ವಾಮಿ ವಿವೇಕಾನಂದರು



ಕಲಕತ್ತ (ಈಗ ಕೊಲ್ಕತ್ತ) ಭಾರತದ ದೊಡ್ಡ ನಗರಗಳಲ್ಲಿ ಒಂದು. ಅಲ್ಲಿ ಹಿಂದೆ ವಿಶ್ವನಾಥದತ್ತ ಎಂಬ ಪ್ರಸಿದ್ಧ ವಕೀಲರಿದ್ದರು. ಅವರ ಹೆಂಡತಿಯ ಹೆಸರು ಭುವನೇಶ್ವರಿದೇವಿ. ಈ ದಂಪತಿಗಳ ಮುದ್ದಿನ ಮಗುವಾಗಿ ೧೮೬೩ ನೆಯ ಇಸ್ವಿ ಜನವರಿ ೧೨ ನೆಯ ತಾರೀಖಿನ ದಿನ ವಿವೇಕಾನಂದರು ಜನಿಸಿದರು. ಇವರ ಮೂಲ ಹೆಸರು ನರೇಂದ್ರ. ಸೂರ್ಯೋದಯ ಸಮಯದಲ್ಲಿ ಜನಿಸಿದ ಇವರು ಜನರಿಗೆ ವಿವೇಕವನ್ನೂ, ಆನಂದವನ್ನೂ ಕೊಟ್ಟರು. ಇದರಿಂದಲೇ ಇವರು ವಿವೇಕಾನಂದರೆಂದು ಹೆಸರಿಸಲ್ಪಟ್ಟರು.

ಮಕ್ಕಳಿಗೆ ತಾಯಿಯೇ ಮೊದಲಗುರು. ನರೇಂದ್ರನಿಗೆ ಭುವನೇಶ್ವರಿದೇವಿಯೇ ಮೊದಲು ಅಕ್ಷರಗಳನ್ನು ಹೇಳಿಕೊಟ್ಟಳು. ನಂತರ ಉಪಾಧ್ಯಾಯರನ್ನು ನೇಮಿಸಿದರು. ಉಪಾಧ್ಯಾಯರು ಹೇಳಿದುದನ್ನೆಲ್ಲಾ ನರೇಂದ್ರನು ಸ್ವಲ್ಪವೂ ತಪ್ಪದೆ ಮರಳಿ ಹೇಳುತ್ತಿದ್ದನು. ಈ ಅದ್ಭುತ ಜಾಣ್ಮೆಯನ್ನು ಕಂಡು ಉಪಾಧ್ಯಾಯರು ಇವನು ತುಂಬಾ ವಿದ್ಯಾವಂತನಾಗುತ್ತಾನೆ ಎಂದು ತಿಳಿಸಿದರು. ನರೇಂದ್ರನು ಏಳು ವರ್ಷದವನಿದ್ದಾಗಲೇ ಸಂಸ್ಕೃತ ಮತ್ತು ವ್ಯಾಕರಣ ಪುಸ್ತಕದ ಪಾಠಗಳನ್ನೆಲ್ಲ ಬಲ್ಲವನಾಗಿದ್ದನು. ರಾಮಾಯಣ, ಮಹಾಭಾರತದ ಶ್ಲೋಕಗಳನ್ನು ಚೆನ್ನಾಗಿ ಹೇಳುತ್ತಿದ್ದನು.

ನರೇಂದ್ರನು ತುಂಬಾ ಜಾಣನಿದ್ದಂತೆ ಕೋಮಲ ಹೃದಯದವನೂ ಪ್ರಾಮಾಣಿಕನೂ ಆಗಿದ್ದನು. ಇನ್ನೊಬ್ಬರ ದು:ಖವನ್ನು ಕಂಡು

ಅವನಿಗೆ ತುಂಬಾ ಕೆಡುಕೆನಿಸುತಿತ್ತು. ಒಮ್ಮೆ ಭಿಕ್ಷುಕನೊಬ್ಬನು ಬಾಗಿಲ ಬಳಿಗೆ ಬಂದನು. ಅವನು ಚಳಿಯಿಂದ ನಡುಗುತ್ತಿದ್ದನು. ಮಗೂ, ನನಗೆ ಒಂದು ಬಟ್ಟೆ ಇದ್ದರೆ ಕೊಡು ಎಂದು ಕೇಳಿದನು. ಇದರಿಂದ ನರೇಂದ್ರನ ಮನಸ್ಸು ಕಳವಳಗೊಂಡಿತು. ತಕ್ಷಣ ತಾನು ಉಡುವ ಪಂಚೆಯನ್ನೇ ಭಿಕ್ಷುಕನಿಗೆ ಕೊಟ್ಟುಬಿಟ್ಟನು.

ನರೇಂದ್ರನು ಕಲಕತ್ತೆಯಲ್ಲಿ ಕಾಲೇಜಿಗೆ ಸೇರಿದ ಮೇಲೆ ಅಲ್ಲಿದ್ದ ಪುಸ್ತಕ ಭಂಡಾರದಲ್ಲಿದ್ದ ಮಹತ್ವದ ಪುಸ್ತಕಗಳನ್ನು ಓದಿ ಹೊಸ ಹೊಸ ವಿಷಯಗಳನ್ನು ತಿಳಿದುಕೊಂಡನು. ಸ್ವದೇಶದ ಮತ್ತು ವಿದೇಶದ ಆಧ್ಯಾತ್ಮಿಕ ಗ್ರಂಥಗಳನ್ನೂ, ತರ್ಕ ಶಾಸ್ತ್ರಗಳನ್ನೂ ಅಭ್ಯಾಸ ಮಾಡಿದನು. ಪರಸ್ಪರ ನಂಬಿಕೆಗಳನ್ನೂ , ಭಾವನೆಗಳನ್ನೂ ತುಲನಾತ್ಮಕವಾಗಿ ವಿಮರ್ಶೆ ಮಾಡಿದನು. ಅಪಾರವಾದ ಪಾಂಡಿತ್ಯವನ್ನು ಸಂಪಾದಿಸಿದನು.

ಒಂದು ಸಲ ನರೇಂದ್ರನ ನೆರೆಮನೆಯಲ್ಲಿ ರಾಮಕೃಷ್ಣ ಪರಮಹಂಸರೆಂಬ ಮಹಾತ್ಮರು ಬಂದಿದ್ದರು. ಆ ಸಮಯದಲ್ಲಿ ನರೇಂದ್ರನೂ ಅಲ್ಲಿಗೆ ಹೋಗಿದ್ದನು. ಬಾಲಕನು ಹಾಡಿದ ಹಾಡನ್ನು ಕೇಳಿ ರಾಮಕೃಷ್ಣರಿಗೆ ತುಂಬಾ ಸಂತೋಷವಾಯಿತು. ಇವನೇ ತಮಗೆ ನಿಜವಾದ ಶಿಷ್ಯನೆಂಬುದನ್ನು ತಿಳಿದುಕೊಂಡರು. ನರೇಂದ್ರನಿಗೆ ಅವರ ಬಗ್ಗೆ ಗೌರವ ಭಾವನೆ ಮೂಡಿತು. ಶಿಷ್ಯತ್ವವನ್ನು ಸ್ವೀಕರಿಸಿದನು. ಸದಾ ಅವರ ಸಾನಿಧ್ಯದಲ್ಲಿದ್ದು ಉಪದೇಶಗಳನ್ನು ತಿಳಿದುಕೊಳ್ಳುತ್ತಿದ್ದನು. ಕೆಲವು ದಿನಗಳ ಬಳಿಕ ರಾಮಕೃಷ್ಣರು ನರೇಂದ್ರನನ್ನು ಹತ್ತಿರ ಕರೆದರು. ಅವನನ್ನೇ ದಿಟ್ಟಿಸಿ ನೋಡತೊಡಗಿದರು. ಮಹಾತ್ಮರ ದೇಹದಿಂದ ದಿವ್ಯ ತೇಜಸ್ಸು ಹೊರಹೊಮ್ಮಿತು. "ನರೇನ್, ನನ್ನ ಎಲ್ಲ ಶಕ್ತಿಯನ್ನು ಇಂದು ನಿನಗೆ ದಯಪಾಲಿಸಿದ್ದೇನೆ. ಈ ಶಕ್ತಿಯನ್ನು ಲೋಕದ ಒಳಿತಿಗಾಗಿ ಉಪಯೋಗಿಸು. ನಿನಗೆ ಒಳ್ಳೆಯದಾಗಲಿ.'' ಎಂದು ಹರಸಿದರು. ಮುಂದೆ ಕೆಲವು ದಿನಗಳಲ್ಲಿ ಗುರುಗಳು ದೈವಾಧೀನರಾದರು.

ನರೇಂದ್ರನು ಲೋಕಕಲ್ಯಾಣಕ್ಕಾಗಿ ಸನ್ಯಾಸತ್ವವನ್ನು ಸ್ವೀಕರಿಸಿದನು. ಜನರು ನರೇಂದ್ರನನ್ನು ಸ್ವಾಮಿ ವಿವೇಕಾನಂದ ಎಂದು ಸಂಬೋಧಿಸತೊಡಗಿದರು. ಕ್ರಿ.ಶ. ೧೮೯೩ ಸಪ್ಟೆಂಬರ ತಿಂಗಳಲ್ಲಿ ಅಮೇರಿಕಾದಲ್ಲಿ ವಿಶ್ವಧರ್ಮ ಸಮ್ಮೇಳನ ಜರುಗಿತು. ಬೇರೆ ಬೇರೆ ದೇಶಗಳಿಂದ ಬಂದಿದ್ದ ಪ್ರತಿನಿಧಿಗಳು ವೇದಿಕೆಯ ಮೇಲೆ ಭಾಷಣ ಮಾಡಿದರು. ಸ್ವಾಮೀಜಿಯವರ ಸರದಿ ಬಂದಿತು. ತಮ್ಮ ಆರಾಧ್ಯದೈವ ಸರಸ್ವತಿ ಮಾತೆಗೆ ವಂದಿಸಿದರು. ಪರಮ ಪೂಜ್ಯ ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರನ್ನು ಮನದಲ್ಲಿ ನೆನೆದು ಭಾಷಣವನ್ನು ಪ್ರಾರಂಭಿಸಿದರು. ಪ್ರಾರಂಭದಲ್ಲಿ "ಅಮೇರಿಕಾ ದೇಶದ ಸಹೋದರ ಸಹೋದರಿಯರೇ'' ಎಂದು ಸಂಬೋಧಿಸಿದರು. ವಾತ್ಸಲ್ಯಪೂರಿತ ಮತ್ತು ವಿಶ್ವಬಂಧುತ್ವದ ಎರಡು ಶಬ್ದಗಳನ್ನು ಕೇಳಿದ ತಕ್ಷಣ ಸಭೆಯಲ್ಲಿ ಉತ್ಸಾಹದ ಚಿಲುಮೆ

ಚಿಮ್ಮಿತು. ಚಪ್ಪಾಳೆಗಳಿಂದ ಇಡೀ ಸಭಾಭವನ ಪ್ರತಿಧ್ವನಿಸಿತು. ಇಲ್ಲಿಯ ವರೆಗೆ ಯಾವ ಭಾಷಣಕಾರನು ಸಭಿಕರನ್ನು ಸಹೋದರ ಸಹೋದರಿಯರೆ ಎಂದು ಕರೆದಿರಲಿಲ್ಲ. ಭಾರತದಿಂದ ಬಂದ ಸನ್ಯಾಸಿಯೋರ್ವನು ಈ ರೀತಿ ಸಂಬೋಧಿಸಿದಾಗ ಸನ್ಯಾಸಿಯ ಹೃದಯ ವೈಶಾಲ್ಯತೆ ಎಲ್ಲರಿಗೂ ಮನವರಿಕೆಯಾಯಿತು.

"ಭಾರತದ ಎಲ್ಲ ಧರ್ಮಗಳ ಪರವಾಗಿ ನಿಮಗೆಲ್ಲ ಕೃತಜ್ಞತೆ ಸಲ್ಲಿಸುತ್ತೇನೆ. ಸಹಿಷ್ಣುತೆ ಮತ್ತು ಸರ್ವಧರ್ಮ ಸಮಾನತೆಯನ್ನು ಇಡೀ ಜಗತ್ತಿಗೆ ಬೋಧಿಸಿದ ದೇಶ ನನ್ನದು. ಪ್ರಪಂಚದ ಎಲ್ಲ ಧರ್ಮಗಳ, ಭಾಷೆಗಳ, ಜನರನ್ನು ತನ್ನ ಒಡಲಲ್ಲಿ ಇರಿಸಿಕೊಂಡ ದೇಶ ನನ್ನದು. ಮತಾಂಧತೆಯನ್ನು ಎಲ್ಲರೂ ಕೂಡಿ ಹೊಡೆದೋಡಿಸಬೇಕು. ಹಿಂಸೆ, ಅಸಹನೆ, ದ್ವೇಷ ಮತ್ತು ಮನಸ್ತಾಪಗಳಿಗೆ ಕೊನೆ ಹಾಡಬೇಕು. ವಿಶ್ವಬಂಧುಗಳಾದ ನಾವೆಲ್ಲ ಪರಸ್ಪರ ಪ್ರೀತಿಯಿಂದ ಅನ್ಯೋನ್ಯವಾಗಿ ಬಾಳೋಣ ಎಂದು ಭಾಷಣ ಮಾಡಿದರು. ಈ ಸೊಗಸಾದ ಭಾಷಣ ಕೇಳಿದವರೆಲ್ಲ ಸ್ವಾಮಿಗಳನ್ನು ಹೊಗಳತೊಡಗಿದರು. ಭಾರತದ ಹೃದಯದಲ್ಲಿರುವ ವಿಶ್ವಶಾಂತಿಯ ಭಾವನೆಯನ್ನು ಅರಿತರು. ಸ್ವಾಮಿ ವಿವೇಕಾನಂದರು ವಿಶ್ವಧರ್ಮ ಸಮ್ಮೇಳನದ ಹೃದಯವನ್ನು ಗೆದ್ದರು."

ಲಂಡನ್ನಿನ ಮಾರ್ಗರೆಟ್ ನೋಬೆಲ್ ಎಂಬ ಮಹಿಳೆ ಸ್ವಾಮಿ ವಿವೇಕಾನಂದರ ವಿಚಾರ ಧಾರೆಗಳಿಂದ ಪ್ರಭಾವಿತಳಾದಳು. ಅವರ ಶಿಷ್ಯಳಾಗಿ ಭಾರತಕ್ಕೆ ಬಂದಳು. ಬಡವರ, ದೀನ ದಲಿತರ ಸೇವೆಮಾಡುತ್ತ ಸಹೋದರಿ ನಿವೇದಿತಾ ಎಂಬ ಹೆಸರಿನಿಂದ ಪ್ರಖ್ಯಾತಳಾದಳು.

ಸ್ವಾಮಿ ವಿವೇಕಾನಂದರು ಅಮೇರಿಕಾ, ಇಂಗ್ಲಂಡಗಳಲ್ಲಿ ಅಷ್ಟೇ ಅಲ್ಲ ವಿಶ್ವದ ಎಲ್ಲ ಕಡೆಗಳಲ್ಲಿ ಭಾರತದ ಕೀರ್ತಿಯನ್ನು ಬೆಳಗುವಂತೆ ಮಾಡಿದರು. ದೇವರು ಒಬ್ಬನೆ, ಬಡವರ ಉದ್ಧಾರಕ್ಕಾಗಿ ಶ್ರಮಿಸಿರಿ ಎಂದು ಹೇಳುತ್ತಿದ್ದರು.

ಸ್ವಾಮಿ ವಿವೇಕಾನಂದರಿಗೆ ಮೂವತ್ತೊಂಭತ್ತು ವರ್ಷಗಳು ತುಂಬಿದವು. ಇಷ್ಟು ಸಣ್ಣ ವಯಸ್ಸಿನಲ್ಲಿ ಅಮೋಘವಾದ ಕಾರ್ಯ ಮಾಡಿದರು. ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಭಾರತದಾದ್ಯಂತ ಸಂಚರಿಸಿದರು. ತಮ್ಮ ಪ್ರಭಾವಶಾಲಿ ವಾಣಿಯಿಂದ ಅಜ್ಞಾನದಲ್ಲಿ ಮೈಮರೆತಿದ್ದ ಜನರನ್ನು ಎಚ್ಚರಿಸಿದರು. ಭಾರತದ ಆಧ್ಯಾತ್ಮ ಜ್ಯೋತಿಯನ್ನು ಜಗತ್ತಿನಲ್ಲೆಲ್ಲ ಬೆಳಗಿಸಿದರು. ಸಮಾಜ ಸೇವೆ ಮಾಡುತ್ತ ೪ ನೇ ಜುಲೈ ೧೯೦೨ ರಲ್ಲಿ ಕೊನೆಯುಸಿರೆಳೆದರು.

ಸ್ವಾಮಿ ವಿವೇಕಾನಂದರು ಅಮರರಾದರೂ ಸಹಿತ ಅವರು ಬಾಳಿದ ಬದುಕು ನಮಗೆಲ್ಲ ಆದರ್ಶವಾಗಿದೆ. ಅವರ ಉಪದೇಶ ನಮಗೆ ದಾರಿದೀಪವಾಗಿವೆ. "ಏಳಿ! ಎಚ್ಚರಗೊಳ್ಳಿ ! ಗುರಿಮುಟ್ಟುವವರೆಗೆ ನಿಲ್ಲದಿರಿ!" ಎಂಬ ಅವರ ವಾಣಿ ಸದಾ ನಮಗೆ ಸ್ಫೂರ್ತಿ ಕೊಡುತ್ತಿದೆ.

**- ಈಶ್ವರಚಂದ್ರ**

**ಶಬ್ದಗಳ ಅರ್ಥ :**

ನಂಬಿಕೆ – ವಿಶ್ವಾಸ ;
ಕೃತಜ್ಞತೆ – ಉಪಕಾರ ಸ್ಮರಿಸು;
ಹೊಗಳು – ಕೊಂಡಾಡು.
ತೇಜಸ್ಸು – ಹೊಳಪು, ಘನತೆ;
ಅಮೋಘ – ಬೆಲೆಬಾಳುವ;

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(೧) ಸ್ವಾಮಿ ವಿವೇಕಾನಂದರು ಯಾವಾಗ ಜನಿಸಿದರು ?
(೨) ವಿಶ್ವಧರ್ಮ ಸಮ್ಮೇಳನ ಎಲ್ಲಿ ಜರುಗಿತು ?
(೩) ಸ್ವಾಮಿ ವಿವೇಕಾನಂದರು ತಮ್ಮ ಭಾಷಣದಲ್ಲಿ ಯಾವ ಮಾತುಗಳನ್ನು ಹೇಳಿದರು?
(೪) ಅಜ್ಞಾನದಲ್ಲಿ ಮೈಮರೆತ ಜನರನ್ನು ವಿವೇಕಾನಂದರು ಹೇಗೆ ಎಚ್ಚರಿಸಿದರು ?
(೫) ಸ್ವಾಮಿ ವಿವೇಕಾನಂದರ ಯಾವ ವಾಣಿ ನಮಗೆ ಸದಾ ಸ್ಫೂರ್ತಿಯನ್ನು ಕೊಡುತ್ತದೆ?

**ಪ್ರಶ್ನೆ (೨) ಬಿಟ್ಟ ಸ್ಥಳ ತುಂಬಿರಿ.**

(೧) ನರೇಂದ್ರನಿಗೆ ............... ಮೊದಲು ಅಕ್ಷರಗಳನ್ನು ಹೇಳಿಕೊಟ್ಟಳು.
(೨) ನರೇಂದ್ರನು ................ ಉಡುವ ಪಂಜೆಯನ್ನೇ ಕೊಟ್ಟು ಬಿಟ್ಟನು.
(೩) ........... ಸಹಿಷ್ಣುತೆ ಮತ್ತು ಸರ್ವಧರ್ಮ ಸಮಾನತೆ ಬೋಧಿಸಿದ ದೇಶ ನನ್ನದು.
(೪) ಲಂಡನ್ನಿನ ..................... ಎಂಬ ಮಹಿಳೆ ಸ್ವಾಮೀಜಿಯವರ ಲೋಕಕಲ್ಯಾಣದ ವಿಚಾರಗಳಿಂದ ಪ್ರಭಾವಿತಳಾದಳು.
(೫) ಭಾರತದ ....... ಜಗತ್ತಿನಲ್ಲೆಲ್ಲ ಬೆಳಗಿಸಿದರು.
(೬) ವಿವೇಕಾನಂದರು ಅಮರರಾದರೂ ಸಹಿತ ಅವರು ಬಾಳಿದ ಬದುಕು ನಮಗೆಲ್ಲಾ ............

**ಪ್ರಶ್ನೆ (೩) ಕೆಳಗಿನ ಪದಗಳನ್ನು ವಾಕ್ಯದಲ್ಲಿ ಉಪಯೋಗಿಸಿರಿ.**

(೧) ಕೋಮಲ (೨) ಸಾನಿಧ್ಯ (೩) ಪ್ರತಿನಿಧಿ
(೪) ಸರತಿ (೫) ಅಮರ

## ಉಪಕ್ರಮ

ಕೆಳಗಿನ ಚಿತ್ರಗಳನ್ನು ನೋಡಿರಿ. ಅವರ ಬಗ್ಗೆ ಮಾಹಿತಿ ಪಡೆದುಕೊಳ್ಳಿರಿ.



ಶಂಕರಾಚಾರ್ಯರು




ರಾಮಕೃಷ್ಣಪರಮಹಂಸರು

83X3UH

# ಧೈರ್ಯಂ ಸರ್ವತ್ರ ಸಾಧನಂ



# ೧೮. ಸ್ಕೌಟ್ಸ್ ಮತ್ತು ಗೈಡ್ಸ್



ಆರರಿಂದ ಹತ್ತು ವರ್ಷ ವಯಸ್ಸಿನ ಮಕ್ಕಳಿಗೆ ಒಳ್ಳೆಯ ನಡತೆ, ಉತ್ತಮ ಆರೋಗ್ಯ ಉತ್ಕೃಷ್ಟ ಕರಕೌಶಲ ಹಾಗೂ ನಿಸ್ವಾರ್ಥಸೇವೆ ಎಂಬ ನಾಲ್ಕು ಮೂಲಭೂತ ತತ್ವಗಳನ್ನು ಕಲಿಸುವ ಏಕೈಕ ಅಂತರರಾಷ್ಟ್ರೀಯ ಸಂಸ್ಥೆಗೆ "ಸ್ಕೌಟ್ಸ್ ಮತ್ತು ಗೈಡ್ಸ" ಸಂಸ್ಥೆ ಎನ್ನುವರು. (ದೇಹ ಮತ್ತು ಮನಸ್ಸುಗಳು ಆರೋಗ್ಯಕರವಾಗಿ ಬೆಳೆಯಬೇಕು. ಅವರಲ್ಲಿ ದೇಶಪ್ರೇಮ ಉಕ್ಕಿ ಹರಿಯಬೇಕು. ತಮ್ಮ ಸಮುದಾಯದ, ದೇಶದ ಹಾಗೂ ಜಗತ್ತಿನ ಉತ್ತಮ ಪ್ರಜೆಗಳಾಗಬೇಕು. ಇದನ್ನು ಸಾಧಿಸಲು ಅವರಿಗೆ ಸೂಕ್ತವಾದ ತರಬೇತಿ ನೀಡುವುದು. ಈ ಸಂಸ್ಥೆಯ ಉದ್ದೇಶವಾಗಿದೆ.)

ಇಂಗ್ಲೆಂಡಿನ ಲಾರ್ಡ ಬೆಡೆನ್ ಪೊವೆಲ್ ರವರು ಕ್ರಿ.ಶ. ೧೯೦೭ ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದರು. ಇವರು ೨೨ ಫೆಬ್ರುವರಿ ೧೮೫೭ ರಲ್ಲಿ ಜನಿಸಿದರು. ಇವರ ಸ್ಮರಣಾರ್ಥವಾಗಿ ಪ್ರತಿ ವರ್ಷ ಫೆಬ್ರುವರಿ ೨೨ ನೆಯ ತಾರೀಖಿನ ದಿನ "ಸ್ಕೌಟ್ಸ್ ಮತ್ತುಗೈಡ್ಸ್ ದಿನಾಚರಣೆ" ಎಂದು ವಿಶ್ವದಾದ್ಯಂತ ಆಚರಿಸಲಾಗುವದು.

ಸ್ಕೌಟ್ಸ ಮತ್ತು ಗೈಡ್ಸದಲ್ಲಿ ಮೂರು ವಿಭಾಗಗಳಿವೆ.

೧) ಅ) ಕಬ್ – ೬ ರಿಂದ ೧೦ ವರ್ಷದೊಳಗಿನ ಬಾಲಕರು.

ಬ) ಬುಲ್ ಬುಲ್ – ೬ ರಿಂದ ೧೦ ವರ್ಷದೊಳಗಿನ ಬಾಲಕಿಯರು.

೨) ಅ) ಸ್ಕೌಟ್ಸ್ – ೧೦ ರಿಂದ ೧೬ ವರ್ಷದೊಳಗಿನ ಬಾಲಕರು.

ಬ) ಗೈಡ್ಸ್ – ೧೦ ರಿಂದ ೧೬ ವರ್ಷದೊಳಗಿನ ಬಾಲಕಿಯರು.

೩) ಅ) ರೋವರ್ಸ – ೧೬ ರಿಂದ ೨೧ ವರ್ಷದೊಳಗಿನ ಯುವಕರು.

ಬ) ರೇಂಜರ್ಸ – ೧೬ ರಿಂದ ೨೧ ವರ್ಷದೊಳಗಿನ ಯುವತಿಯರು.

ಉತ್ತಮ ನೀತಿ, ಒಳ್ಳೆಯ ಆದರ್ಶ, ಶಿಸ್ತು ಮತ್ತು ಸಹಬಾಳ್ವೆ ಮುಂತಾದ ಗುಣಗಳನ್ನು ಮಕ್ಕಳು ಇಲ್ಲಿ ಬೆಳೆಸಿಕೊಳ್ಳುತ್ತಾರೆ. ಮಾನಸಿಕ ಮತ್ತು ದೈಹಿಕ ಬಲವನ್ನು ಹೆಚ್ಚಿಸಿಕೊಳ್ಳುತ್ತಾರೆ. ರಾಷ್ಟ್ರಭಕ್ತಿ, ವಿಶ್ವಪ್ರೇಮ ಮುಂತಾದ ಉದಾತ್ತ ಗುಣಗಳನ್ನು ಮೈಗೂಡಿಸಿಕೊಳ್ಳುವರು. "ಬಿ ಪ್ರಿಪೇರ್ಡ್" ಎಂಬುದು ಸ್ಕೌಟ್‌ನ ಧ್ಯೇಯ ವಾಕ್ಯವಾಗಿದೆ. ಅಂದರೆ "ನಿನ್ನ ಕರ್ತವ್ಯವನ್ನು ಮಾಡಲು ಸದಾ ಸಿದ್ಧನಾಗಿರು" ಎಂದರ್ಥ. ಸೇವೆ ಮತ್ತು ಪರೋಪಕಾರ ಇವರ ದಾರಿದೀಪಗಳಾಗಿವೆ. ಎಲ್ಲ ಸಮಾಜದ ಜನರು ನಮ್ಮ ಬಂಧುಗಳು ಎಂಬ ಭಾವನೆ ಮಕ್ಕಳಲ್ಲಿ ಮೂಡಿಬರುತ್ತದೆ.

ಸ್ಕೌಟ್ಸ್ ಮತ್ತು ಗೈಡ್ಸ್‌ದವರು ಶಿಬಿರಗಳನ್ನು ಆಯೋಜಿಸುತ್ತಾರೆ. ಪ್ರಾಯೋಗಿಕವಾಗಿ ಕೆಲಸಮಾಡುವುದನ್ನು ಕಲಿಸುತ್ತಾರೆ. ಸಮವಸ್ತ್ರ ಧರಿಸಿ ಶಿಸ್ತಿನಿಂದ ವ್ಯಾಯಾಮ ಮಾಡುವುದು, ಶಿಬಿರಗಳ ಮುಖಾಂತರ ಸಹಬಾಳ್ವೆ ಕಲಿಯುವುದು, ಸಮಾಜಸೇವೆ ಮಾಡುವುದು, ತನ್ಮೂಲಕ ಸಮಾಜಸೇವಾ ವಿಧಾನವನ್ನು ಇತರರಿಗೂ ಕಲಿಸುವುದು, ದೇಶಭಕ್ತಿ ಗೀತೆಗಳನ್ನು ಹಾಡಿ ಜನರಲ್ಲಿ ದೇಶಪ್ರೇಮವನ್ನು ಬೆಳೆಸುವ ಕೆಲಸ ಮಾಡುತ್ತಾರೆ.

ಪ್ರಥಮ ಚಿಕಿತ್ಸೆ ಸ್ವಯಂಸೇವಕತನ ಹಾಗೂ ರಕ್ಷಣೆಗೆ ಸಂಬಂಧಿಸಿದಂತಹ ತರಬೇತಿ ಕೊಡಲಾಗುತ್ತದೆ. ವಿಶ್ವ ಬಂಧುತ್ವ ಬೆಳೆಸಲು ಮತ್ತು ಮಾನವರೆಲ್ಲ ಒಂದೇ ಎಂದು ಬಿಂಬಿಸಲು ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಶಿಬಿರಗಳು ನಡೆಯುತ್ತವೆ. ನಿಪುಣ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಗಳಿವೆ. ಈ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ಸ್ಥಾನಗಳನ್ನು ಕಾಯ್ದಿರಿಸಲಾಗಿದೆ.

ಸ್ಕೌಟ್ಸ್ ಮತ್ತು ಗೈಡ್ಸ್ ನಿಯಮಗಳು ಒಂಬತ್ತು ಅಂಶಗಳನ್ನೊಳಗೊಂಡಿವೆ.

೧) ಅವರು ನಿಷ್ಠಾವಂತರಾಗಿತ್ತಾರೆ.

೨) ಅವರು ಗೌರವಾರ್ಹರಾಗಿರುತ್ತಾರೆ.

೩) ಎಲ್ಲರ ಜೊತೆಗೆ ಗೆಳೆತನದಿಂದಲೂ ಮತ್ತು ಸಹೋದರತ್ವದಿಂದಲೂ ವರ್ತಿಸುತ್ತಾರೆ.

೪) ಎಲ್ಲ ಜೀವಿಗಳನ್ನು ಗೌರವಿಸುತ್ತಾರೆ ಮತ್ತು ಪ್ರೀತಿಸುತ್ತಾರೆ.

೫) ವಿನಯಶಾಲಿಗಳೂ ಮತ್ತು ನಿಸರ್ಗ ಪ್ರೇಮಿಗಳೂ ಆಗಿರುತ್ತಾರೆ.

೬) ಶಿಸ್ತಿನ ಸಿಪಾಯಿಗಳಾಗಿರುತ್ತಾರೆ.

೭) ಸಾರ್ವಜನಿಕ ಆಸ್ತಿ-ಪಾಸ್ತಿಗಳ ರಕ್ಷಣೆಗೆ ನೆರವಾಗುತ್ತಾರೆ.

೮) ಧೈರ್ಯವಂತರಾಗಿದ್ದು ತ್ರಿಕರಣ ಶುದ್ಧರಾಗಿರುತ್ತಾರೆ.

೯) ಸ್ವೇಚ್ಛಾ ಮನೋಭಾವದವರಾಗಿರದೇ ಮಿತವ್ಯಯಿಗಳಾಗಿರುತ್ತಾರೆ.

ಸ್ಕೌಟ್ಸ್ ಮತ್ತು ಗೈಡ್ಸ್ ಆಗುವುದರಿಂದ ಅವರು ವಿಶ್ವ ಬಂಧುತ್ವವನ್ನುಗಳಿಸುತ್ತಾರೆ. ದೇಶದ ಸತ್ಪ್ರಜೆಯಾಗಿ ತಾವು ಹುಟ್ಟಿದ ದೇಶಕ್ಕೆ ಕೀರ್ತಿ ತರುತ್ತಾರೆ. ಅವರು ಸೇವೆಯನ್ನೇ ಗುರಿಯಾಗಿಟ್ಟುಕೊಂಡು ಪರೋಪಕಾರ ಬುದ್ಧಿಯುಳ್ಳವರಾಗುತ್ತಾರೆ. ಸ್ಕೌಟ್ಸ್ ಮತ್ತು ಗೈಡ್ಸ್ ಧರ್ಮವು ವಿಶ್ವವ್ಯಾಪಿಯಾಗಿದ್ದು ಅದು ವಿಶ್ವಧರ್ಮ ಎನಿಸಿದೆ. ವಿಶ್ವದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯನ್ನು ಯಾವುದೇ ಮತ-ಪಂಥಗಳಿಗೆ ಅನ್ವಯಿಸದೆ ಆರಂಭಿಸಿ ಯಶಸ್ಸಿ ಕಂಡುಕೊಂಡವರು ಲಾರ್ಡ ಬೆಡೆನ್ ಪೊವೆಲ್‌ರವರು.

**ಶಬ್ದಗಳ ಅರ್ಥ :**

ಕರಕೌಶಲ - ಕೈಯಿಂದ ಮಾಡಿದ ವಸ್ತುಗಳು; ತ್ರಿಕರಣ - ಮಾತು, ಮನಸು, ದೇಹ;
ಉದಾತ್ತ - ಶ್ರೇಷ್ಠವಾದ, ನಿಷ್ಠೆ - ಭಕ್ತಿ ; ಸ್ವೇಚ್ಛಾ - ಸ್ವಇಚ್ಛೆ

## ಅಭ್ಯಾಸ

**ಪ್ರಶ್ನೆ(೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

(ಅ) ಸ್ಕೌಟ್ಸ್ ಮತ್ತು ಗೈಡ್ಸ್ ಎಂದರೇನು ?
(ಆ) ಲಾರ್ಡ ಬೆಡೆನ್ ಪೊವೆಲ್‌ರವರು ಯಾವಾಗ ಜನಿಸಿದರು ?
(ಇ) ಸ್ಕೌಟ್ಸ ಮತ್ತು ಗೈಡ್ಸ್‌ದಲ್ಲಿ ಎಷ್ಟು ವಿಭಾಗಗಳಿವೆ ?
(ಈ) ಮಕ್ಕಳು ಯಾವ ಗುಣಗಳನ್ನು ಬೆಳೆಸಿಕೊಳ್ಳುತ್ತಾರೆ ?
(ಎ) ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಏನೇನು ಆಯೋಜಿಸುತ್ತಾರೆ ?

**ಪ್ರಶ್ನೆ(೨) ಕೆಳಗಿನ ಪ್ರಶ್ನೆಗಳಿಗೆ ೩ ರಿಂದ ೪ ಸಾಲುಗಳಲ್ಲಿ ಉತ್ತರ ಬರೆಯಿರಿ.**

(ಅ) ಮಕ್ಕಳು ಸ್ಕೌಟ್ಸ್‌ಮತ್ತು ಗೈಡ್ಸಗಳಲ್ಲಿ ಯಾವ ಯಾವ ಗುಣಗಳನ್ನು ಬೆಳೆಸಿಕೊಳ್ಳುತ್ತಾರೆ ?
(ಆ) ಸ್ಕೌಟ್ಸ್ ಮತ್ತು ಗೈಡ್ಸ್ ಶಿಬಿರಗಳಿಂದ ಯಾವ ಪ್ರಯೋಜನಗಳಾಗುವವು ?
(ಇ) ಸ್ಕೌಟ್ಸ್ ಮತ್ತು ಗೈಡ್ಸ್‌ದ ನಿಯಮಗಳು ಯಾವವು ?

**ಪ್ರಶ್ನೆ (೩) ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಶಬ್ದ ತುಂಬಿ ವಾಕ್ಯ ಪೂರ್ಣ ಮಾಡಿರಿ.**

(ಅ) .............. ಕ್ರಿ.ಶ. ೧೯೦೭ ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದರು.

(ಆ) 'ಬಿ ಪ್ರಿಪೇಡ್' ಎಂಬುದು ಸ್ಕೌಟ್ಸ್‌ನ ................ ವಾಕ್ಯವಾಗಿದೆ.

(ಇ) ಸೇವೆ ಮತ್ತು ಪರೋಪಕಾರ ಇವರ ದಾರಿ...............

(ಈ) ................ ಧರಿಸಿ ಶಿಸ್ತಿನಿಂದ ವ್ಯಾಯಾಮ ಮಾಡುವದು.

(ಉ) ವಿಶ್ವದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯನ್ನು ಯಾವುದೇ ಮತ - ಪಂಥಗಳಿಗೆ ಸ್ಕೌಟ್ಸ್ ಅನ್ವಯಿಸುವಂತೆ ಆರಂಭಿಸಿ ಯಶಸ್ಸು ಕಂಡುಕೊಂಡವರು.................

**ಪ್ರಶ್ನೆ (೪) ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| (ಅ) ಕಬ್ | ೧) ೧೬ ರಿಂದ ೨೧ ವರ್ಷದೊಳಗಿನ ಯುವಕರು. |
| (ಆ) ಬುಲ್‌ಬುಲ್ | ೨) ೧೦ ರಿಂದ ೧೬ ವರ್ಷದೊಳಗಿನ ಬಾಲಕರು. |
| (ಇ) ಸ್ಕೌಟ್ಸ್ | ೩) ೬ ರಿಂದ ೧೦ ವರ್ಷದೊಳಗಿನ ಬಾಲಕರು. |
| (ಈ) ಗೈಡ್ಸ್ | ೪) ೬ ರಿಂದ ೧೦ ವರ್ಷದೊಳಗಿನ ಬಾಲಕಿಯರು. |
| (ಎ) ರೋವರ್ಸ | ೫) ೧೬ ರಿಂದ ೨೧ ವರ್ಷದೊಳಗಿನ ಯುವತಿಯರು. |
| (ಏ) ರೇಂಜರ್ಸ | ೬) ೧೦ ರಿಂದ ೧೬ ವರ್ಷದೊಳಗಿನ ಬಾಲಕಿಯರು. |

**ಉಪಕ್ರಮ**

ಇನ್ನಿತರ ಗುಂಪು ಆಟಗಳ ನಿಯಮಗಳನ್ನು ಕುರಿತು ಮಕ್ಕಳಿಗೆ ಹೇಳಿರಿ.

## ಆರೋಗ್ಯವೇ ಸಂಪತ್ತು



## ವ್ಯಾಕರಣ

ಯಾವ ಪದಗಳನ್ನು ವಾಕ್ಯದಲ್ಲಿ ಬಳಸುವಾಗ ಲಿಂಗ, ವಚನ, ವಿಭಕ್ತಿಯಲ್ಲಿ ವ್ಯತ್ಯಾಸವಾಗುವದಿಲ್ಲವೋ ಅವುಗಳನ್ನು 'ಅವ್ಯಯಗಳು' ಎನ್ನುತ್ತಾರೆ.
ಉದಾ - ಎಲ್ಲೋರಾ ವಾಸ್ತುಶಿಲ್ಪಕ್ಕೆ ಬಹಳ ಪ್ರಸಿದ್ಧವಾಗಿದೆ.

★ **ಭಾವಬೋಧಕ ಅವ್ಯಯ -** ಓಹೋ, ಆಹಾ, ಅಯ್ಯೋ, ಛೀ, ಇವುಗಳ ಮೂಲಕ ಆಶ್ಚರ್ಯ, ಆನಂದ, ದು:ಖ, ತಿರಸ್ಕಾರ ಮುಂತಾದ ನಮ್ಮ ಭಾವನೆಗಳನ್ನು ವ್ಯಕ್ತಪಡಿಸಬಹುದು. ಆದ್ದರಿಂದ ಇವು 'ಭಾವಬೋಧಕ' ಅವ್ಯಯಗಳು.
ಉದಾ - ಓಹೋ, ರಾಮನು ಬಂದೇ ಬಿಟ್ಟನಲ್ಲ!

★ **ಅನುಸರ್ಗಾವ್ಯಯ -** ಇಂಥ, ತನಕ, ವರೆಗೆ, ಅಂತೆ, ಓಸ್ಕರ, ಸಲುವಾಗಿ, ಬಂದಿದೆ, ಈ, ಅಲ್ಲದೆ, ಮುಂತಾದ ಅವ್ಯಯಗಳು ನಾಮಪದಕ್ಕೆ ಹೊಂದಿಕೊಂಡು ಬರುವವು. ಆದ್ದರಿಂದ ಇವು 'ಅನುಸರ್ಗಾವ್ಯಯಗಳು'.
ಉದಾ : "ನನ್ನ ಸಲುವಾಗಿ ಎಷ್ಟೊಂದು ತೊಂದರೆ ಪಡುವಿಯಲ್ಲ ?"

★ **ಸಂಬಂಧಸೂಚಕ ಅವ್ಯಯ -** ಮತ್ತು, ಆದರೆ, ಅಥವಾ, ಆದರೂ, ಆದ್ದರಿಂದ, ಯಾಕೆಂದರೆ ಇವು ಎರಡು ಶಬ್ದಗಳ ಇಲ್ಲವೆ ವಾಕ್ಯಗಳ ಸಂಬಂಧವನ್ನು ಸೂಚಿಸುತ್ತದೆ. ಆದುದರಿಂದ ಇವು 'ಸಂಬಂಧಸೂಚಕ' ಅವ್ಯಯಗಳು.
ಉದಾ : ಮಳೆ ಸುರಿಯುತ್ತಲೇ ಇದೆ. ಆದ್ದರಿಂದ ಅವನು ಬರಲಿಕ್ಕಿಲ್ಲ.

# ೧೯. ಗುರುವಂದನೆ



ಅರಿವ ಬೆಳಕು ತೋರಿ ಗುರುವೆ
ಸತ್ಪಥದಿ ನಡೆಸಿದೇ .........
ಜ್ಞಾನಜ್ಯೋತಿಯನ್ನು ಬೆಳಗಿ
ಮನುಜನಾಗಿ ಮಾಡಿದೆ ....

ಶ್ರದ್ಧೆಯಿಂದ ಪಾಠ ಕಲಿಸಿ
ಮುಂದೆ ಗುರಿಯ ತೋರಿದೇ
ಗುರಿಯ ಸೇರು ಜಾಣನಾಗಿ
ಎಂದು ಧೈರ್ಯ ತುಂಬಿದೆ

ಕಲಿಕೆಯಲ್ಲಿ ತಪ್ಪಿದಾಗ
ಸಹನೆಯಿಂದ ತಿದ್ದಿದೆ
ಸಿಟ್ಟುಗೊಳದೆ ಪ್ರೀತಿಯಿಂದ
ನೇರ ದಾರಿ ತೋರಿದೆ

ನನ್ನ ಸುಪ್ತ ಪ್ರತಿಭೆಯನ್ನು
ಬೆಳಗುವಂತೆ ಮಾಡಿದೆ
ನಾನು ಬರೆದ ಕವನವನ್ನು
ಓದಿ ಬೆನ್ನು ತಟ್ಟಿದೆ

ನಿಮ್ಮ ಪ್ರೀತಿಯಿಂದ ನಾನು
ಜಾಣನಾಗಿ ಮೆರೆದೆನು
ನಿಮ್ಮ ನುಡಿಯ ಹರಕೆಯಿಂದ
ಕೀರ್ತಿವಂತನಾದೆನು

ಗುರುವೆ ನಿಮ್ಮ ಚರಣಗಳಿಗೆ
ನಾನು ಶರಣು ಎನ್ನುವೆ
ನಿಮ್ಮ ಕರುಣೆ ಕೃಪೆಯಿಂದ
ಧನ್ಯನಾದೆ ಎನ್ನುವೆ.

\- ಪ್ರಸನ್ನಾ ಚೆಕ್ಕೆಮನೆ

**ಶಬ್ದಗಳ ಅರ್ಥ :**

ಸತ್ಪಥ - ಯೋಗ್ಯ ಮಾರ್ಗ, ಸನ್ಮಾರ್ಗ; ಪ್ರತಿಭೆ - ಬುದ್ಧಿವಂತಿಕೆ;

ಚರಣ - ಪಾದ; ತಿದ್ದು - ಸರಿಪಡಿಸು;

**ವಿಶೇಷ ವಿಚಾರ** - ಸುಪ್ತಪ್ರತಿಭೆ - ಮಕ್ಕಳಲ್ಲಿ ಅಡಗಿದ ಬುದ್ಧಿ.

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(೧) ಗುರು ಶಿಷ್ಯನಿಗೆ ಸತ್ಪಥದಿ ಹೇಗೆ ನಡೆಸುವನು ?

(೨) ಗುರು ಶಿಷ್ಯನಿಗೆ ಏನೆಂದು ಧೈರ್ಯ ತುಂಬುವನು ?

(೩) ಶಿಷ್ಯನು ಕಲಿಕೆಯಲ್ಲಿ ತಪ್ಪಿದಾಗ ಗುರುಗಳು ಏನು ಮಾಡುವರು ?

(೪) ಶಿಷ್ಯನು ಗುರುಗಳಿಂದ ಹೇಗೆ ಧನ್ಯನಾಗುವನು ?

**ಪ್ರಶ್ನೆ (೨) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.**

ನಿಮ್ಮ ಪ್ರೀತಿಯಿಂದ ................................

.........................................................

.........................................................


............................................ ನಾದೆನು

**ಉಪಕ್ರಮ** (೧) ಗುರುಭಕ್ತಿಗೆ ಸಂಬಂಧಿಸಿದ ಕಥೆ, ಕವಿತೆಗಳನ್ನು ಓದಿರಿ.

(೨) ಕೃಷ್ಣ, ಸುದಾಮ, ಏಕಲವ್ಯ ಮುಂತಾದವರ ಗುರುಭಕ್ತಿ ಪರವಾದ ಚರಿತ್ರೆಗಳನ್ನು ಓದಿರಿ.

## ಅರಿವೇ ಗುರು

# ೨೦. ಆದರ್ಶ ಸಹೋದರರು



(ರಾಜಯೋಗ್ಯವಾದ ಆಸನದ ಮೇಲೆ ಕೈಕೇಯಿ ಕುಳಿತಿದ್ದಾಳೆ. ಬಿಲ್ಲು-ಬಾಣಗಳನ್ನು ಕೈಯಲ್ಲಿ ಹಿಡಿದು ಭರತ ಪ್ರವೇಶಿಸುತ್ತಾನೆ. ಕೂಡಲೇ ತಾಯಿಗೆ ನಮಸ್ಕಾರ ಮಾಡಿ ಮಾತನಾಡುತ್ತಾನೆ.)

ಭರತ : ಅಮ್ಮಾ, ಅಮ್ಮಾ ! ಅಯೋಧ್ಯೆಯೆಲ್ಲಾ ಕಾಂತಿಹೀನವಾಗಿದೆ. ಪ್ರಜೆಗಳೆಲ್ಲಾ ಕಳೆಗುಂದಿದ್ದಾರೆ. ಅರಮನೆಯೆಲ್ಲಾ ಬಿಕೋ ಎನ್ನುತ್ತಿದೆ. ತಂದೆಯವರು ಎಲ್ಲಿಯೂ ಕಾಣಿಸುವುದಿಲ್ಲವಲ್ಲ! ಅಣ್ಣ ಶ್ರೀರಾಮಚಂದ್ರನೂ ಕಾಣಿಸುತ್ತಿಲ್ಲ. ಅತ್ತಿಗೆ ಸೀತಾ ಮಾತೆ ಎಲ್ಲಿ ? ಅಣ್ಣ ಲಕ್ಷ್ಮಣ ಎಲ್ಲಿ ಹೋದ ? ಹೇಳಮ್ಮ, ಬೇಗ ಹೇಳಮ್ಮ.

ಕೈಕೇಯಿ : ಅಪ್ಪಾ ಭರತ ! ದಶರಥ ಮಹಾರಾಜರು ಸ್ವರ್ಗಸ್ಥರಾದರು.

ಭರತ : ಅಯ್ಯೋ ! ಎಂಥ ದು:ಸ್ಥಿತಿ ಬಂತು ನಮಗೆ. ತಂದೆಯವರು ಸ್ವರ್ಗವಾಸಿಯಾದರೇ! ಅಮ್ಮಾ, ತಂದೆಯವರು ಏನು ಹೇಳಿದರಮ್ಮಾ ಕಡೆಗಾಲದಲ್ಲಿ ?

ಕೈಕೇಯಿ : ಹಾ ರಾಮ ! ಹಾ ಸೀತಾ ! ಹಾ ಲಕ್ಷ್ಮಣ ! ಎಂದು ಹಂಬಲಿಸುತ್ತ ಪ್ರಾಣ ಬಿಟ್ಟರು, ಭರತ.

ಭರತ : ಏನು ? ಹಾ ರಾಮ ! ಹಾ ಸೀತಾ ! ಹಾ ಲಕ್ಷ್ಮಣ ! ಎಂದು ಹಂಬಲಿಸುತ್ತ ಪ್ರಾಣ ಬಿಟ್ಟರೇ ತಂದೆಯವರು... ?

ಕೈಕೇಯಿ : ಹೌದು ಭರತ. ಅವರು ಸಾಯುವಾಗ ಶ್ರೀರಾಮಚಂದ್ರನು ದೊರೆಯ ಬಳಿ ಇರಲಿಲ್ಲ.

ಭರತ : ಆಶ್ಚರ್ಯ ! ಅಣ್ಣ ಶ್ರೀರಾಮಚಂದ್ರ ತಂದೆಯವರ ಬಳಿ ಇರಲಿಲ್ಲವೇ ? ಅಮ್ಮಾ ಆ ಸಮಯದಲ್ಲಿ ?

ಕೈಕೇಯಿ : ಮಗೂ ಭರತ, ನಿನ್ನ ಅಣ್ಣ ಶ್ರೀ ರಾಮಚಂದ್ರ, ಸೀತೆ ಲಕ್ಷ್ಮಣರೊಡನೆ ಆಗ ದಂಡಕಾರಣ್ಯಕ್ಕೆ ವನವಾಸಕ್ಕೆ ಹೋಗಿ ಬಿಟ್ಟಿದ್ದ.

ಭರತ : ಅಮ್ಮಾ ! ಅಮ್ಮಾ ! ಏನು ಹೇಳುತ್ತಿರುವೆ ? ಅಣ್ಣ ಶ್ರೀರಾಮಚಂದ್ರ ಏನು ತಪ್ಪು ಮಾಡಿದ ಕಾಡಿಗೆ ಹೋಗುವುದಕ್ಕೆ ? ನನ್ನ ಅಣ್ಣ ರಾಮಚಂದ್ರ ಯಾರಿಗೂ ಒಂದು ಕೆಟ್ಟ ಮಾತನ್ನು ಆಡಿದವನು ಅಲ್ಲವಲ್ಲ ! ತಂದೆಯ ಅಪ್ಪಣೆ ಮೀರಿದವನೂ ಅಲ್ಲವಲ್ಲ! ತಾಯಿಯರ ಮನಸ್ಸು ನೋಯಿಸುವವನೂ ಅಲ್ಲವಲ್ಲ ! ಗುರುಗಳಿಗೆ ಅಪ್ರಿಯವಾಗಿ ನಡೆದುಕೊಳ್ಳುವವನೂ ಅಲ್ಲವಲ್ಲ ! ತಮ್ಮಂದಿರಾದ ನಮಗೆ ಬೇಡದ್ದು ಮಾಡುವವನೂ ಅಲ್ಲವಲ್ಲ ! ಇಂಥ ಸದ್ಗುಣನಿಧಿಯಾದ ನಮ್ಮಣ್ಣ ಶ್ರೀರಾಮಚಂದ್ರನಿಗೆ ದಂಡಕಾರಣ್ಯ ವನವಾಸವೇ ಅಮ್ಮಾ !

ಕೈಕೇಯಿ : ಶ್ರೀರಾಮಚಂದ್ರ ತಪ್ಪು ಮಾಡುವವನಲ್ಲ. ಆತನು ಈಗಲೂ ತಪ್ಪು ಮಾಡಿಲ್ಲ. ಅವನ ಹಣೆಬರಹವೇ ಹಾಗಿತ್ತು. ಭರತ, ತಂದೆಯ ಮಾತನ್ನು ಉಳಿಸುವುದಕ್ಕೆ ಶ್ರೀರಾಮಚಂದ್ರನಿಗೆ ಈಗ ಹದಿನಾಲ್ಕು ವರುಷಗಳ ವನವಾಸ, ನಿನಗೆ ಸಿಂಹಾಸನದ ಪಟ್ಟಾಭಿಷೇಕ ಪ್ರಾಪ್ತವಾಗಿದೆ.

ಭರತ : ಅಮ್ಮಾ, ಅಮ್ಮಾ ಇದು ಯಾರ ಅಪ್ಪಣೆ ?

ಕೈಕೇಯಿ : ಇದು ನಿಮ್ಮ ತಂದೆಯವರು ನನಗೆ ಕೊಟ್ಟ ಎರಡು ವರಗಳ ಫಲ.

ಭರತ : ಅಮ್ಮಾ, ಅಮ್ಮಾ, ಏನೆಂದೆ ?

ಕೈಕೇಯಿ : ನಿನ್ನ ತಂದೆಯವರು ನನಗೆ ಕೊಟ್ಟ ಎರಡು ವರಗಳು ! ಒಂದನೆಯ ವರ ಶ್ರೀರಾಮಚಂದ್ರನಿಗೆ ಹದಿನಾಲ್ಕು ವರ್ಷಗಳ ವನವಾಸ. ಎರಡನೆಯ ವರ ನಿನಗೆ ಕೋಸಲ ರಾಜ್ಯದ ರಾಜ್ಯಭಾರ, ಪಟ್ಟಾಭಿಷೇಕ.

ಭರತ : ಏನಮ್ಮಾ ? ಏನನ್ನು ಹೇಳುತ್ತಿರುವಿ ?

ಕೈಕೇಯಿ : ಹೌದು ಮಗನೆ, ನಾನು ಸರಿಯಾಗಿ ಹೇಳಿರುವೆ.

ಭರತ : ಅಯ್ಯೋ ವರಗಳೇ ! ತಂದೆಯನ್ನು ಕಳೆದುಕೊಂಡು, ಅಣ್ಣನನ್ನು ಕಾಡಿಗೆ ಅಟ್ಟಿ ಇಲ್ಲಿ ತಮ್ಮನಾದವನು ರಾಜ್ಯಭಾರ ಮಾಡುವುದು ಎಂಥ ವರಗಳಮ್ಮ, ಇವು ಹಾಳು ವರಗಳು.

ಕೈಕೇಯಿ : ದು:ಖ ಬಿಡು, ರಾಜ್ಯ ಒಪ್ಪಿಸಿಕೋ ಮಗನೇ.

ಭರತ : ರಾಮರಾಮ ! ಇವೆಂಥ ಮಾತುಗಳಮ್ಮಾ ! ಯಾರಿಗೆ ಬೇಕಾಗಿವೆ ಈ ವರಗಳು?

ಕೈಕೇಯಿ : ನಾನು ನಿನಗಾಗಿ, ನಿನ್ನ ಕ್ಷೇಮಕ್ಕಾಗಿ ಈ ಎರಡು ವರಗಳನ್ನು ಬೇಡಿದೆ. ಈಗ ಒಲ್ಲೆ ಎನ್ನಬೇಡ. ಸಿಂಹಾಸನದ ಮೇಲೆ ಕುಳಿತು ರಾಜ್ಯಭಾರ ಮಾಡು, ನನ್ನನ್ನು ತೃಪ್ತಿಪಡಿಸು.

ಭರತ : ಅಮ್ಮಾ, ನೀನು ನನಗೆ ಒಳ್ಳೆಯದು ಮಾಡಲಿಲ್ಲವಮ್ಮಾ. ಸತ್ಯ, ಶೀಲ, ಧರ್ಮ, ನ್ಯಾಯ, ಈ ಎಲ್ಲ ಗುಣಗಳು ಅಣ್ಣ ಶ್ರೀರಾಮಚಂದ್ರನ ರೂಪದಲ್ಲಿ ಕಾಡಿಗೆ ಹೊರಟು ಹೋದವಮ್ಮ. ನಿನ್ನ ವರಗಳಿಂದ ನಮ್ಮ ತಂದೆ, ದಶರಥ ಚಕ್ರವರ್ತಿ, ಮಕ್ಕಳನ್ನು ಅಗಲಿದ ಕೊರಗಿನಲ್ಲಿ ಮರಣ ಹೊಂದಿದರು. ನಾನು ಇಂಥ ದು:ಖವನ್ನು ಕಟ್ಟಿಕೊಂಡು ರಾಜ್ಯವಾಳಬೇಕೆ ? ಅಮ್ಮಾ, ನನಗೆ ನೀನು ಎಂಥ ಅನ್ಯಾಯ ಮಾಡಿದೆ ?

ಕೈಕೇಯಿ : ಭರತ ! ಭರತ !

ಭರತ : ಅಣ್ಣ ಶ್ರೀರಾಮಚಂದ್ರ, ಅತ್ತಿಗೆ ಸೀತಾದೇವಿ ಅನುಭವಿಸುತ್ತಿರುವ ವನವಾಸದ ದಂಡಕಾರಣ್ಯಕ್ಕೆ ನಾನೂ ಹೋಗುತ್ತೇನೆ. ಅಣ್ಣನ ಕಾಲು ಹಿಡಿದು ಕೇಳಿಕೊಳ್ಳುತ್ತೇನೆ. "ರಾಜ್ಯಕ್ಕೆ ಹಿಂದಿರುಗು ಅಣ್ಣಾ" ಎಂದು ಯಾವ ಕಾಲದಲ್ಲಿ ಸೂರ್ಯವಂಶದಲ್ಲಿ, ಅಣ್ಣನ ರಾಜ್ಯವನ್ನು ತಮ್ಮನು ಆಳಿದ್ದಾನೆ; ಹೇಳಮ್ಮ ? ಇಗೋ ಈ ಕಿರೀಟ, ಈ ಖಡ್ಗ ಎಲ್ಲವನ್ನು ಧರಿಸಿ ನೀನೇ ರಾಜ್ಯಭಾರ ಮಾಡು.

(ತಲೆಯ ಮೇಲೆ ಇದ್ದ ಕಿರೀಟ ತೆಗೆದು ಕೈಕೇಯಿಯ ಪಾದಗಳ ಮೇಲೆ ಇಟ್ಟು , ಬಿಲ್ಲು ಬಾಣಗಳನ್ನು ಕಾಲ ಬಳಿ ಇಟ್ಟು , ಟೊಂಕಕ್ಕೆ ಸಿಕ್ಕಿಸಿದ್ದ ಖಡ್ಗ ತೆಗೆದು ಕೆಳಗಿಟ್ಟು ಬಿರುಗಾಳಿಯಂತೆ ಹೊರಟು ಹೋಗುವವನು.)

ಕೈಕೇಯಿ : (ಕುಳಿತಿದ್ದವಳು ಎದ್ದು) ಭರತ, ಭರತ, ಅಯ್ಯೋ ಮಗನೇ ! (ಎಂದು ತಲೆಯನ್ನು ಕೈಗಳಿಂದ ಚಚ್ಚಿಕೊಳ್ಳುವಳು.)

**ಶಬ್ದಗಳ ಅರ್ಥ :**

ಸ್ವರ್ಗಸ್ಥ – ಮರಣಹೊಂದು; ದು:ಸ್ಥಿತಿ – ಕೆಟ್ಟಸ್ಥಿತಿ;
ಸದ್ಗುಣ – ಒಳ್ಳೆಯ ಗುಣ; ಕಾಡಿಗೆ ಅಟ್ಟು – ಅರಣ್ಯಕ್ಕೆ ಕಳುಹಿಸು.

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(೧) ಭರತನು ತಾಯಿಗೆ ಏನು ಕೇಳಿದನು ?
(೨) ಶ್ರೀರಾಮಚಂದ್ರನು ಎಲ್ಲಿಗೆ ಹೋಗಿದ್ದನು ?
(೩) ಕೈಕೇಯಿ ಬೇಡಿದ ಎರಡು ವರಗಳು ಯಾವವು ?
(೪) ಭರತನು ರಾಜ್ಯವನ್ನು ದಿಕ್ಕರಿಸಲು ಕಾರಣವೇನು ?
(೫) ಭರತನು ಕಾಡಿಗೆ ಏಕೆ ಹೋದನು ?

**ಪ್ರಶ್ನೆ (೨) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು.**

(೧) ಅಮ್ಮಾ ಅಯೋಧ್ಯೆಯೆಲ್ಲಾ ಕಾಂತಿಹೀನವಾಗಿದೆ.
(೨) ಹಾ ರಾಮ ! ಹಾ ಸೀತಾ ! ಹಾ ಲಕ್ಷ್ಮಣಾ.
(೩) ಮಗೂ ಭರತಾ, ನಿನ್ನ ಅಣ್ಣ ಶ್ರೀರಾಮಚಂದ್ರ ಸೀತೆ, ಲಕ್ಷ್ಮಣರೊಡನೆ ವನವಾಸಕ್ಕೆ ಹೋದನು.
(೪) ಇಗೋ ಈ ಕಿರೀಟ, ಈ ಖಡ್ಗ ಎಲ್ಲವನ್ನು ಧರಿಸಿ ನೀನೇ ರಾಜ್ಯಭಾರ ಮಾಡು.

**ಪ್ರಶ್ನೆ (೩) ವಿರುದ್ಧಾರ್ಥಕ ಶಬ್ದ ಬರೆಯಿರಿ.**

(೧) ದು:ಸ್ಥಿತಿ (೨) ಕೆಟ್ಟ (೩) ಪ್ರಿಯ (೪) ಸದ್ಗುಣ (೫) ಧರ್ಮ

**ಪ್ರಶ್ನೆ (೪) ಕೆಳಗಿನ ಶಬ್ದಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ.**

(೧) ಹಂಬಲಿಸು (೨) ಮನಸ್ಸು (೩) ರಾಜ್ಯಭಾರ (೪) ವನವಾಸ

**ಪ್ರಶ್ನೆ (೫) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(೧) ಅವ್ಯಯ ಎಂದರೇನು ?
(೨) ಈ ಕೆಳಗಿನ ಶಬ್ದಗಳು ಯಾವ ಪ್ರಕಾರದ ಅವ್ಯಯಗಳಾಗಿವೆ ?
ಅಯ್ಯೋ, ತನಕ, ಆನಂದ, ಆದರೆ, ಆದರೂ

**ಉಪಕ್ರಮ**

ಮಹಾಭಾರತದಲ್ಲಿಯ ಸಹೋದರವಾತ್ಸಲ್ಯಕ್ಕೆ ಹೆಸರಾದ ಯಕ್ಷಪ್ರಶ್ನೆ ಕಥೆಯನ್ನು ಕೇಳಿ ತಿಳಿದುಕೊಳ್ಳಿರಿ.

**ನೋಡಿ ಕಲಿಯಬೇಕು, ಕೂಡಿ ಬಾಳಬೇಕು.**

B4PQZK

## ವ್ಯಾಕರಣ

★ **ಕ್ರಿಯಾ ವಿಶೇಷಣಾತ್ಮಕ ಅವ್ಯಯ -** ಸುಯ್ಯನೆ, ಎಡೆ, ಅಲ್ಲಿ ಮೊದಲಾದವು ಕ್ರಿಯೆಯನ್ನು ವರ್ಣಿಸುತ್ತವೆ. ಆದ್ದರಿಂದ ಇವು ಕ್ರಿಯಾ ವಿಶೇಷಣಾತ್ಮಕ ಅವ್ಯಯಗಳು.

ಉದಾ - ಸುಗಂಧ ಎಲ್ಲೆಡೆಯಲ್ಲಿ ಪಸರಿಸಿತ್ತು.

★ **ಸಂಬೋಧನಾತ್ಮಕ ಅವ್ಯಯ -** ರೇ, ಎಲೋ, ಓ. ಇವು ಜನರನ್ನು ಸಂಬೋಧಿಸುವುದಕ್ಕೆ ಉಪಯೋಗಿಸುವ ಅವ್ಯಯಗಳು.

ಉದಾ - ಭಾರತೀಯರೇ ಎದ್ದೇಳಿರಿ, ಗುರಿಮುಟ್ಟುವ ತನಕ ನಿಲ್ಲದಿರಿ.


★ **ಅನುಕರಣಾವ್ಯಯ -** ಕಿಲಕಿಲನೆ, ಧಡಮ್ಮನೆ, ಕೊಕ್ಕೋ, ಪರಪರ, ಮ್ಯಾಂವ್ ಮ್ಯಾಂವ್ ಇವು ಮನುಷ್ಯರ, ಪಶುಪಕ್ಷಿಗಳ, ಇಲ್ಲವೆ ಯಾವುದಾದರೊಂದು ಧ್ವನಿಯನ್ನು ಅನುಕರಣ ಮಾಡುತ್ತವೆ.

ಉದಾ - ಹುಡುಗರು ಧಡಮ್ಮನೆ ನೀರಿಗೆ ಧುಮುಕಿದರು.

★ **ಅವಧಾರಣಾವ್ಯಯ-** ಎ,ಏ, ಈ ಅಕ್ಷರಗಳು ಹಿಂದಿನ ಶಬ್ದದ ಅರ್ಥವನ್ನು ನಿಶ್ಚಿತಗೊಳಿಸುತ್ತವೆ. ಆದ್ದರಿಂದ ಇವು ಅವಧಾರಣಾವ್ಯಯಗಳು.

ಉದಾ - ನಾನು ರೈಲಿನಲ್ಲಿಯೇ ಪುಣೆಗೆ ಹೋಗುವೆನು.

# ೨೧. ವನವಿಹಾರ



ಶಾಲೆಯ ಗೆಳೆಯ
ಗೆಳತಿಯರೆಲ್ಲರು
ಮಾವಿನ ತೋಪಿಗೆ ಹೊರಟಿಹರು
ಕಲಸಿದ ಅನ್ನ
ಪಾಯಸವನ್ನ
ಜೊತೆಯಲಿ ಬುತ್ತಿಯ ಕಟ್ಟಿಹರು

ರಾಣಿ ವಾಣಿ
ಗೋಪು ಎಲ್ಲರು
ಕೂಡಿಯೆ ನಾವೂ ಹೋಗೋಣ
ಕಿಟ್ಟು ಪುಟ್ಟೂ
ಒಟ್ಟಿಗೆ ಅಂದರು
ಖುಷಿಯಲಿ ದಾರಿಯ ಸವೆಸೋಣ

ಬಂದೇ ಬಿಟ್ಟಿತು
ಮಾವಿನ ತೋಪು
ಮುಳ್ಳನು ಜತನದಿ ದಾಟಿದರು
ಕೊಂಬೆಯ ಹಿಡಿದು
ರೆಂಬೆಯನೆಳೆದು
"ಮರಕೋತಿ' ಆಟ ಆಡಿದರು

ಕಡಲೆ ಬೆಲ್ಲ
ಕಾರದ ಪುರಿಯನು
ತಿನ್ನುತ ಚೊಲ್ಲನು ಸುರಿಸಿದರು
ಮಾತನು ಹೇಳುತ
ಹರಟೆಯ ಹೊಡೆಯುತ
ನಗುವಿನ ಹೊಳೆಯನು ಹರಸಿದರು

ನೆನಪನು ಮೆಲ್ಲುತ
ಮಜವನು ಮಾಡುತ
ಹರುಷದ ಹೊಳೆಯಲಿ ಮಿಂದಿಹರು
ಸೂರ್ಯನು ಮುಳುಗಲು
ಕತ್ತಲೆ ಹರಡಲು
ಎಲ್ಲರೂ ಮನೆಯೆಡೆ ಸಾಗಿದರು.

– ಟಿ.ಎಸ್.ನಾಗರಾಜಶೆಟ್ಟಿ

**ಶಬ್ದಗಳ ಅರ್ಥ :**

ಖುಷಿ – ಆನಂದ, ಸಂತೋಷ; ಜತನ – ಜೋಪಾನ; ಕೊಂಬೆ – ಟೊಂಗೆ, ರೆಂಬೆ.

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

(ಅ) ಶಾಲೆಯ ಗೆಳೆಯರು ಯಾವ ತೋಪಿಗೆ ಹೊರಟಿಹರು ?

(ಆ) ಬುತ್ತಿಯಲ್ಲಿ ಏನೇನು ಕಟ್ಟಿಹರು ?

(ಇ) ಮುಳ್ಳನ್ನು ಹೇಗೆ ದಾಟಿದರು ?
(ಈ) ತೋಪದಲ್ಲಿ ಅವರು ಯಾವ ಆಟ ಆಡಿದರು ?
(ಉ) ಮಕ್ಕಳು ಎಂಥ ಹೊಳೆಯಲ್ಲಿ ಮಿಂದರು ?
(ಊ) ಮಕ್ಕಳು ಯಾವಾಗ ಮನೆಯೆಡೆ ಸಾಗಿದರು ?

**ಪ್ರಶ್ನೆ (೨) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣ ಮಾಡಿರಿ.**

ಬಂದೇ ಬಿಟ್ಟಿತು
--------------------
--------------------
--------------------
--------------------
-------------------- ಆಡಿದರು

**ಪ್ರಶ್ನೆ (೩) ಉದಾಹರಣೆಯಲ್ಲಿ ತೋರಿಸಿದಂತೆ ಪದಗಳನ್ನು ರಚಿಸಿರಿ.**

ಉದಾ : ಕಟ್ಟು - ಕಟ್ಟುವರು

(ಅ) ದಾಟು -
(ಆ) ಹೊರಡು -
(ಇ) ಸುರಿಸು -
(ಈ) ಮಾಡು -
(ಉ) ಆಡು -
(ಊ) ಮಿಂದು -

**ಉಪಕ್ರಮ**

ಮಕ್ಕಳೆ, ಶಿಕ್ಷಕರೊಂದಿಗೆ ನಿಮ್ಮೂರ ಸಮೀಪದ ತೋಟವೊಂದಕ್ಕೆ 'ವನಭೋಜನ'ಕ್ಕೆ ಹೋಗಿರಿ.

**ಮನೆಗೊಂದು ಮರ, ಊರಿಗೊಂದು ವನ**

# ೨೨. ಅನ್ನದ ಮಹಿಮೆ



ಮಾವಿನ ಹಳ್ಳಿ ಎಂಬ ಒಂದು ಊರು ಇತ್ತು. ಅಲ್ಲಿಯ ಜನರ ಮುಖ್ಯ ಉದ್ಯೋಗ ಒಕ್ಕಲುತನ. ಊರವರೆಲ್ಲರೂ ಕಷ್ಟಪಟ್ಟು ದುಡಿಯುತ್ತಿದ್ದರು. ದವಸ-ಧಾನ್ಯ ಬೆಳೆಯುತ್ತಿದ್ದರು. ಸಂತೋಷದಿಂದ ಜೀವಿಸುತ್ತಿದ್ದರು. ಅವರಲ್ಲಿ ಸಂಗಪ್ಪನೂ ಒಬ್ಬ.

ಶಾಲೆಗೆ ಬಿಡುವು ಇತ್ತು. ಪಟ್ಟಣದ ರಹವಾಸಿಯಾಗಿದ್ದ ರವಿ ತನ್ನ ಅಜ್ಜನಾದ ಸಂಗಪ್ಪನ ಮನೆಗೆ ಬಂದನು. ಆಗ ಸುಗ್ಗಿಯ ಸಮಯವಿತ್ತು. ರೈತರು ತಮ್ಮ ತಮ್ಮ ಹೊಲದಲ್ಲಿಯ ಬೆಳೆಗಳನ್ನು ಕೊಯ್ದು ರಾಶಿ ಮಾಡುತ್ತಿದ್ದರು. ದಿನವಿಡೀ ಅವರು ಹೊಲದಲ್ಲಿ ಕೆಲಸ ಮಾಡಿ ದಣಿದು ರಾತ್ರಿ ಮನೆಗೆ ಬರುತ್ತಿದ್ದರು. ರವಿ ತನ್ನ ಅಜ್ಜನೊಂದಿಗೆ ಹೊಲಕ್ಕೆ ಹೋದನು. ಅಜ್ಜನು ತನ್ನ ಕೆಲಸದಲ್ಲಿ ತೊಡಗಿದ್ದನು. ರವಿ ಒಂದು ಮರದ ನೆರಳಿನಲ್ಲಿ ಕಥೆಯ ಪುಸ್ತಕವನ್ನು ಓದುತ್ತ ಕುಳಿತನು.

ಊಟದ ಸಮಯವಾಯಿತು. ಸಂಗಪ್ಪನು ತನ್ನ ಕೆಲಸವನ್ನು ಬಿಟ್ಟು ಮರದ ಕಡೆಗೆ ಬಂದನು. ಅಜ್ಜ ಮತ್ತು ಮೊಮ್ಮಗ ಇಬ್ಬರೂ ಕೈ-ಕಾಲು ಮುಖ ತೊಳೆದುಕೊಂಡು ಊಟಕ್ಕೆ ಕುಳಿತರು. ಅಜ್ಜನು ಊಟ ಬಡಿಸಿದನು. ವಿನೋದದ ಮಾತುಗಳನ್ನಾಡುತ್ತ ಇಬ್ಬರೂ ಊಟ ಮಾಡತೊಡಗಿದರು. ರವಿಯು ಅರ್ಧ ರೊಟ್ಟಿಯನ್ನು ಉಂಡು ಉಳಿದರ್ಧ ರೊಟ್ಟಿಯನ್ನು ತಟ್ಟೆಯಲ್ಲಿಯೇ ಬಿಟ್ಟು ಕೈತೊಳೆದುಕೊಂಡನು.

ಸಂಗಪ್ಪ : ರವಿ, ನಿನಗೆ ಹಸಿವೆಯಾಗಿಲ್ಲವೇ ?

ರವಿ : ಹಸಿವೆಯಾಗಿತ್ತು. ನಾನು ಊಟ ಮಾಡಿದೆನಲ್ಲ.

ಸಂಗಪ್ಪ : ಹಾಗಾದರೆ ಅರ್ಧ ರೊಟ್ಟಿಯನ್ನು ತಟ್ಟೆಯಲ್ಲಿಯೆ ಏಕೆ ಬಿಟ್ಟಿರುವಿ ?

ರವಿ : ನನ್ನ ಹೊಟ್ಟೆ ತುಂಬಿತು. ಅದಕ್ಕಾಗಿ ಕೈ ತೊಳೆದುಕೊಂಡೆ.

ಸಂಗಪ್ಪ : ನೀನು ಅರ್ಧ ರೊಟ್ಟಿಯನ್ನೇ ತೆಗೆದುಕೊಳ್ಳಬೇಕಾಗಿತ್ತು.

ರವಿ : ಏಕೆ ಅಜ್ಜಾ ? ಈಗೇನು ಮಹಾ ಅನರ್ಥವಾಯಿತು.

ಸಂಗಪ್ಪ : ರವಿ, ನೀನು ತಟ್ಟೆಯಲ್ಲಿ ಅರ್ಧ ರೊಟ್ಟಿಯನ್ನು ಬಿಟ್ಟಿದ್ದು ಹಾನಿಯಲ್ಲವೇ ?

ರವಿ : (ನಗುತ್ತ) ಅಲ್ಲ, ಇದು ಅರ್ಧ ರೊಟ್ಟಿ ಹಾಳಾದರೆ ನಿನಗೇನು ಬಡತನ ಬರುತ್ತದೆಯೇ ಅಜ್ಜಾ ?

ಸಂಗಪ್ಪ : ಹಾಗಲ್ಲ ರವಿ. ಅನ್ನದ ಮಹಿಮೆ ನಿನಗೆ ಇನ್ನೂ ತಿಳಿದಿಲ್ಲ. ಈ ತುತ್ತು ಅನ್ನಕ್ಕಾಗಿ ಅದೆಷ್ಟು ಜನರು ಪರದಾಡುತ್ತಿದ್ದಾರೆ ನಿನಗೆ ಗೊತ್ತಿಲ್ಲ. ಅದೂ ಅಲ್ಲದೆ ಈ ಅರ್ಧ ರೊಟ್ಟಿಯನ್ನು ತಯಾರಿಸಲು ರೈತರು ಅದೆಷ್ಟು ಕಷ್ಟಪಡುತ್ತಿದ್ದಾರೆ ಗೊತ್ತೇ ?

ರವಿ : ಹೋಗಲಿ ಬಿಡು ಅಜ್ಜಾ. ಅದೆಷ್ಟು ಜಿಪುಣತನ ಮಾಡುತ್ತಿರುವೆ ?

ಸಂಗಪ್ಪ : ಹಾಗಲ್ಲ ರವಿ. ನಮ್ಮ ದೇಶದ ಜನಸಂಖ್ಯೆ ನೂರು ಕೋಟಿಗೂ ಮಿಕ್ಕಿದೆ. ನಿನ್ನಂತೆಯೇ ಪ್ರತಿಯೊಬ್ಬರೂ ಅರ್ಧ ಅರ್ಧ ರೊಟ್ಟಿಗಳನ್ನು ಹಾಳು ಮಾಡಿದರೆ ಐವತ್ತು ಕೋಟಿಗೂ ಮಿಕ್ಕಿ ರೊಟ್ಟಿಗಳು ಹಾಳಾಗುತ್ತವೆ. ಅಲ್ಲವೇ ?

ರವಿ : ಹೌದು.

ಸಂಗಪ್ಪ : ಅಷ್ಟೊಂದು ರೊಟ್ಟಿಗಳನ್ನು ತಯಾರಿಸಲು ಎಷ್ಟು ಕ್ವಿಂಟಲ್ ಜೋಳ ಬೇಕು ಗೊತ್ತೇ?

ರವಿ : ಇಲ್ಲ.

ಸಂಗಪ್ಪ : ಒಂದೊಂದು ತುತ್ತು ಅನ್ನಕ್ಕೂ ನಾವು ಎಷ್ಟು ಕಷ್ಟಪಡುತ್ತೇವೆ ಎಂಬುದು ನಿನಗೆ ಗೊತ್ತಿಲ್ಲ. ರವಿ ನೀನು ಪದೇ ಪದೇ ಕಥೆ ಹೇಳಲು ಒತ್ತಾಯಿಸುತ್ತಿದ್ದೆ. ಈಗ ನಾನು ರೊಟ್ಟಿಯ ಕಥೆಯನ್ನೇ ಹೇಳುತ್ತೇನೆ ಕೇಳು.

ರವಿ : ಆಗಲಿ ಅಜ್ಜ ಕಥೆಯನ್ನು ಹೇಳು.

ಸಂಗಪ್ಪ : ರವಿ, ಈ ಜೋಳ ಎಲ್ಲಿಂದ ಬರುತ್ತದೆ ?

ಸಂಗಪ್ಪ : ರೈತರು ಹೊಲದಲ್ಲಿ ನೇಗಿಲು ಹೊಡೆಯುತ್ತಾರೆ. ಅಲ್ಲಿರುವ ದೊಡ್ಡ ದೊಡ್ಡ ಹೆಂಟೆಗಳನ್ನು ಒಡೆದು ಪುಡಿ ಪುಡಿ ಮಾಡುತ್ತಾರೆ. ಆಮೇಲೆ ಕುಂಟೆ ಹೊಡೆದು ಹೊಲವನ್ನು ಮೆತ್ತಗೆ ಮಾಡುತ್ತಾರೆ. ಮಳೆರಾಯನ ದಾರಿ ಕಾಯುತ್ತ ಕುಳಿತು ಬಿಡುತ್ತಾರೆ.

ರವಿ : ಮಳೆ ಬಂದ ಮೇಲೆ ಏನು ಮಾಡುತ್ತಾರೆ ?

ಸಂಗಪ್ಪ : ಮಳೆ ಬಂದ ಮೇಲೆ ಕೂರಿಗೆಯಿಂದ ಬಿತ್ತನೆ ಮಾಡುತ್ತಾರೆ. ಬೀಜ ನಾಟಿ ಮೊಳಕೆಯೊಡೆದು ಮೇಲೆ ಬಂದು ಫಸಲು ರೂಪ ಪಡೆದುಕೊಳ್ಳುತ್ತದೆ. ಆಮೇಲೆ ಫಸಲಿಗೆ ತೆನೆ ಬಂದು ಹಾಲುಗಾಳು ಆಗುತ್ತವೆ.

ರವಿ : ಹೌದೇನು ?

ಸಂಗಪ್ಪ : ಸುಗ್ಗಿಯ ಸಮಯದಲ್ಲಿ ರೈತರು ಹಾಲು ತೆನೆಯನ್ನು ಸುಟ್ಟು ತಿನ್ನುತ್ತಾರೆ. ಇದಕ್ಕೆ 'ಬೆಳಸಿ' ಎನ್ನುತ್ತಾರೆ. ತೆನೆಯಲ್ಲಿ ಕಾಳುಗಳು ಬಲಿತ ಮೇಲೆ ತೆನೆ ಒಣಗುತ್ತದೆ. ಆಮೇಲೆ ಬೆಳೆಯನ್ನು ಕಿತ್ತಿ, ಸೂಡುಕಟ್ಟಿ ಗೂಡು ಒಟ್ಟಿ, ತೆನೆ ಮುರಿದು ರಾಶಿಮಾಡುತ್ತಾರೆ. ಗಾಳಿಗೆ ತೂರಿ ಜೋಳವನ್ನು ಚೀಲದಲ್ಲಿ ತುಂಬುತ್ತಾರೆ. ಬಂಡಿಯಲ್ಲಿ ಹೇರಿಕೊಂಡು ಮನೆಗೆ ತರುತ್ತಾರೆ.

ರವಿ : ಅಜ್ಜಾ ಇದು ನಿಜಕ್ಕೂ ಕಷ್ಟದ ಕೆಲಸ.

ಸಂಗಪ್ಪ : ರೈತರು ಇಷ್ಟೊಂದು ಕಷ್ಟಪಟ್ಟು ಬೆಳೆದ ಅನ್ನವನ್ನು ಜನರು ಈ ರೀತಿ ಹಾಳು ಮಾಡುವುದು ಸರಿಯೇ ?

ರವಿ : ತಪ್ಪು, ಶುದ್ಧತಪ್ಪು.

ಸಂಗಪ್ಪ : ಆದ್ದರಿಂದ ನಾವು ಅನ್ನವನ್ನು ಹಾಳು ಮಾಡಬಾರದು. ಮನುಷ್ಯನು ಬದುಕಲು ಮುಖ್ಯವಾಗಿ ಹವೆ, ಅನ್ನ ಮತ್ತು ನೀರು ಬೇಕು. ಪರಿಸರದಲ್ಲಿಯ ಗಿಡ-ಮರಗಳು ನಮಗೆ ಹವೆಯನ್ನು ಒದಗಿಸುತ್ತವೆ. ಮೋಡಗಳನ್ನು ಆಕರ್ಷಿಸಿ ಮಳೆಯನ್ನು ಸುರಿಸುತ್ತವೆ. ಆದ್ದರಿಂದ ನಾವು ಗಿಡ-ಮರಗಳನ್ನು ಉಳಿಸಿ, ಬೆಳೆಸಿ ಪೋಷಿಸಬೇಕು.

ರವಿ : ಹೌದು, ಅಜ್ಜ ನಾವು ಪರಿಸರವನ್ನು ಉಳಿಸಿ ಬೆಳೆಸಿದರೆ ಮಾತ್ರ ನಮಗೆ ಗಾಳಿ ಮತ್ತು ನೀರು ದೊರಕುತ್ತವೆ.

ಸಂಗಪ್ಪ : ಅದರಂತೆ, ಚಿನ್ನ, ಬೆಳ್ಳಿ , ವಜ್ರ, ನಗ, ನಾಣ್ಯಗಳನ್ನು ತಿಂದು ಬದುಕಲು ಸಾಧ್ಯವೇ?

ರವಿ : ಛೇ ! ಅದ್ಹೇಗೆ ಸಾಧ್ಯ. ಅನ್ನವನ್ನು ತಿಂದಾಗ ಮಾತ್ರ ಬದುಕಲು ಸಾಧ್ಯ. ಅನ್ನದ ಹೊರತಾಗಿ ಇನ್ನಾವ ವಸ್ತುಗಳೂ ತಿನ್ನಲು ಬರುವುದಿಲ್ಲ.

ಸಂಗಪ್ಪ : ತುತ್ತು ಅನ್ನದ ಹಿಂದೆ ಸಾವಿರಾರು ರೈತರ ಶ್ರಮ ಅಡಗಿರುತ್ತದೆ. ಆದ್ದರಿಂದ ನಾವು ಅನ್ನವನ್ನು ಹಾಳು ಮಾಡಬಾರದು.

ರವಿ : ಸರಿ ಅಜ್ಜಾ , ಈಗ ನನ್ನ ಕಣ್ಣುಗಳು ತೆರೆದವು. ಇನ್ನು ಮುಂದೆ ಎಂದೂ ಅನ್ನವನ್ನು ಹಾಳು ಮಾಡುವುದಿಲ್ಲ, ಇಷ್ಟೆ ಅಲ್ಲ ನನ್ನ ಗೆಳೆಯರೆಲ್ಲರಿಗೂ

ಈ ಅನ್ನದ ಮಹಿಮೆಯನ್ನು ಹೇಳುತ್ತೇನೆ. ಅನ್ನವನ್ನು ಹಾಳು ಮಾಡದಂತೆ ಬುದ್ಧಿವಾದ ಹೇಳುತ್ತೇನೆ.

ಸಂಗಪ್ಪ : ಭೇಷ್ ರವಿ, ನೀನು ತುಂಬ ಜಾಣ, ನೀನಿನ್ನು ಓದುತ್ತ ಕುಳಿತುಕೋ. ನಾನು ನನ್ನ ಕೆಲಸದಲ್ಲಿ ತೊಡಗುತ್ತೇನೆ.

ರವಿಯು ಕಥೆಯ ಪುಸ್ತಕವನ್ನು ಓದುತ್ತ ಕುಳಿತುಕೊಳ್ಳುವನು. ಸಂಗಪ್ಪನು ತನ್ನ ಕೆಲಸದಲ್ಲಿ ತೊಡಗುವನು. ಸಂಜೆ ಇಬ್ಬರೂ ಕೂಡಿ ಮನೆಗೆ ಬರುವರು.

**ಶಬ್ದಗಳ ಅರ್ಥ :**

ರಾಶಿ – ಗುಂಪು; ಅಲೆದಾಡು – ಕಷ್ಟಪಡು; ಕುಂಟೆ – ಬೇಸಾಯದ ಒಂದು ಉಪಕರಣ; ಕೂರಿಗೆ – ಬೀಜ ಬಿತ್ತುವ ಉಪಕರಣ; ಸೂಡು – ಕಂತೆ; ಬುದ್ಧಿವಾದ – ಉಪದೇಶ

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

(ಅ) ರವಿಯು ತಟ್ಟೆಯಲ್ಲಿ ಅರ್ಧ ರೊಟ್ಟಿಯನ್ನು ಏಕೆ ಬಿಟ್ಟನು ?
(ಆ) ಅನ್ನದ ಮಹಿಮೆ ಯಾರಿಗೆ ತಿಳಿದಿಲ್ಲ ?
(ಇ) ಯಾರು ಮಳೆರಾಯನ ದಾರಿ ಕಾಯುತ್ತ ಕುಳಿತು ಬಿಡುತ್ತಾರೆ ?
(ಈ) ನಾವು ಏನನ್ನು ತಿಂದು ಬದುಕಲು ಸಾಧ್ಯವಿಲ್ಲ ?
(ಉ) ರವಿಯು ಯಾವ ಪುಸ್ತಕವನ್ನು ಓದುತ್ತಾ ಕುಳಿತಿರುವನು ?

**ಪ್ರಶ್ನೆ (೨) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(ಅ) ರವಿಯು ಹೇಗೆ ಊಟ ಮಾಡಿದನು ?
(ಆ) ಸಂಗಪ್ಪನು ರವಿಗೆ ಅನ್ನದ ಮಹಿಮೆಯನ್ನು ಹೇಗೆ ತಿಳಿಸಿಕೊಟ್ಟನು ?
(ಇ) ರೈತರು ಜೋಳವನ್ನು ಹೇಗೆ ಬೆಳೆಯುತ್ತಾರೆ ?
(ಈ) ನಾವು ಗಿಡ-ಮರಗಳನ್ನು ಉಳಿಸಿ, ಬೆಳೆಸಿ ಏಕೆ ಪೋಷಿಸಬೇಕು?

**ಪ್ರಶ್ನೆ (೩) ಕೆಳಗಿನ ಶಬ್ದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.**

ಅನರ್ಥ, ಶ್ರಮ, ಪರಿಸರ, ಹಾಲುತೆನೆ, ಜಿಪುಣತನ.

**ಪ್ರಶ್ನೆ (೪) ಬಿಟ್ಟ ಸ್ಥಳವನ್ನು ತುಂಬಿರಿ.**

(ಅ) ರವಿಯು ತನ್ನ ಅಜ್ಜನಾದ .......... ಮನೆಗೆ ಬಂದನು.

(ಆ) ............. ಹೊಡೆದು ಹೊಲವನ್ನು ಮೆತ್ತಗೆ ಮಾಡುತ್ತಾರೆ.


(ಇ) ಸುಗ್ಗಿಯ ಸಮಯದಲ್ಲಿ ರೈತರು ........... ಸುಟ್ಟು ತಿನ್ನುತ್ತಾರೆ.

(ಈ) ಮನುಷ್ಯನು ಬದುಕಲು ಮುಖ್ಯವಾಗಿ ............ , ................. ಮತ್ತು ............. ಬೇಕು.


(ಉ) ತುತ್ತು ಅನ್ನದ ಹಿಂದೆ ಸಾವಿರಾರು ........... ಶ್ರಮ ಅಡಗಿರುತ್ತದೆ.

## ಉಪಕ್ರಮ

ಕೆಳಗಿನ ಚಿತ್ರಗಳನ್ನು ನೋಡಿ ಹತ್ತಿಯಿಂದ ಬಟ್ಟೆ ತಯಾರಾಗುವ ವಿಧಾನವನ್ನು ಶಿಕ್ಷಕರಿಂದ / ಪಾಲಕರಿಂದ ತಿಳಿದುಕೊಳ್ಳಿರಿ.









**ರೈತ ಭಾರತದ ಬೆನ್ನೆಲುಬು**

# ೨೩. ನವ ಯುಗಾದಿ



ಚಿಗುರಿದ ಹಸಿರಿನ
ತಳಿರು ತೋರಣ
ನವಯುಗಾದಿಯ ಆಗಮನ
ಮಾವಿನ ಮರದಲಿ
ಹಾಡಿತು ಕೋಗಿಲೆ
ನವ ಯುಗಾದಿಗೆ ಶುಭ ನಮನ

ಸಡಗರದಿಂದಲಿ
ಧರಣಿಯ ಮೈಯನು
ಮುಚ್ಚಿತು ಚಿಗುರಿನ ಚಿತ್ತಾರ
ಗೆಲ್ಲು ಗೆಲ್ಲಿನಲಿ
ಚೆಲ್ಲಾಡುತಿಹುದು
ಕೋಟಿ ಜೇನಿನ ಝೇಂಕಾರ

ಬಂದಿತು ವರುಷವು
ತಂದಿತು ಹರುಷವು
ನಾಚಿ ಓಡಿತು ಕೊರೆವ ಚಳಿ
ಸುಗ್ಗಿಯ ಸಿರಿಯು
ಹಿಗ್ಗಿನ ಹೊಳೆಯ
ಹರಿಯುತ ಬಂದಿದೆ ನಮ್ಮ ಬಳಿ

ಹೂವಿಗೆ ಮುತ್ತುವ
ದುಂಬಿಯ ಕಲರವ
ತೇಲಿ ನಲಿಯುವ ಸಂಗೀತ
ಚಿಗುರನು ತಿನ್ನುವ
ಕೋಗಿಲೆ ಕುಹುರುವ
ಕೇಳಿದ ಮನವು ಸಂಪ್ರೀತ.

- ಎಚ್.ಎಂ.ಮಾರುತಿ

**ಶಬ್ದಗಳ ಅರ್ಥ :**

ತಳಿರು – ಹಸಿರು; ನವ – ಹೊಸ; ಚಿತ್ತಾರ – ಚಿತ್ರ ;
ಸಂಪ್ರೀತ – ಅತಿ ಪ್ರೇಮ; ಝೇಂಕಾರ – ದುಂಬಿಯ ಧ್ವನಿ.

**ವಿರುದ್ಧಾರ್ಥಕ ಶಬ್ದಗಳು :** ಆಗಮನ X ನಿರ್ಗಮನ ; ಶುಭ X ಅಶುಭ

## ಅಭ್ಯಾಸ

**ಪ್ರಶ್ನೆ (೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(೧) ನವ ಯುಗಾದಿಯ ಆಗಮನ ಹೇಗಿದೆ ?
(೨) ಸುಗ್ಗಿಯ ಸಿರಿಯು ಹೇಗೆ ಬಂದಿತು ?
(೩) ಚಿಗುರಿನ ಚಿತ್ತಾರ ಏನು ಮಾಡಿತು ?
(೪) ಮನವು ಯಾವಾಗ ಸಂಪ್ರೀತವಾಗುತ್ತದೆ ?

**ಪ್ರಶ್ನೆ (೨) ಬಿಟ್ಟ ಸ್ಥಳಗಳನ್ನು ತುಂಬಿರಿ.**

(ಅ) ಚಿಗುರಿದ ಹಸಿರಿನ .......... ನವಯುಗಾದಿಯ ಆಗಮನ.
(ಆ) ಗೆಲ್ಲು ಗೆಲ್ಲಿನಲಿ ಚೆಲ್ಲಾಡುತಿಹುದು ಕೋಟಿ ಜೇನಿನ.........
(ಇ) ........... ಸಿರಿಯು ಹಿಗ್ಗಿನ ಹೊಳೆಯು ಹರಿಯುತ ಬಂದಿದೆ ನಮ್ಮ ಬಳಿ.
(ಈ) ಹೂವಿಗೆ ಮುತ್ತುವ ........ ತೇಲಿ ನಲಿಯುವ ಸಂಗೀತ.

**(೩) ಕೆಳಗೆ ಕೊಟ್ಟ ಅಕ್ಷರದಿಂದ ಕೊನೆಗೊಳ್ಳುವ ಎರಡೆರಡು ಶಬ್ದಗಳನ್ನು ಕವಿತೆಯಿಂದ ಆಯ್ದು ಬರೆಯಿರಿ.**

ನ ............ , ...............
ರ ............. , ..............
ಳಿ ............... , ..............
ತ ................ , ..............

## ಉಪಕ್ರಮ

ಯಾವುದಾದರೊಂದು ಭಾರತೀಯ ಹಬ್ಬದ ಕುರಿತು ೧೦ ಸಾಲುಗಳಲ್ಲಿ ವರ್ಣಿಸಿರಿ.

**ಹಬ್ಬವು ಬಂದಿತು, ಹಿಗ್ಗನು ತಂದಿತು.**

85HE5I



किशोर
कथा, कविता, कादंबरीका, एकांकिका, दीर्घकथा, गंमतगाणी, ललित, छंद, चरित्र, विज्ञान, देश-देशांतर, लोककथा
लोकप्रिय व अभिरुचिसंपन्न किशोर मासिकातील चाळीस वर्षांतील निवडक साहित्यांवर आधारित 'निवडक किशोर'चे १४ खंड
किंमत प्रत्येकी ₹१६३/- (30% सूट)
वरील खंड पाठ्यपुस्तक मंडळाच्या सर्व भांडारांत विक्रीसाठी उपलब्ध आहेत. १४ खंडांची एकूम किंमत ₹ १६००/-
किशोर
वरील खंडांच्या खरेदीसाठी मंडळाच्या पुढील विभागीय भांडारांशी संपर्क साधा.
पुणे (०२०- २५६५९४६५), मुंबई (गोरेगाव) (०२२-२८७७१८४२), औरंगाबाद (०२४०- २३३२१७१),
नागपूर (०७१२-२५२३०७८/ २५४७७१६), नाशिक (०२५३- २३९१५११), लातूर (०२३८२- २२०९३०),
कोल्हापूर (०२३०- २४६८५७६), अमरावती (०७२१-२५३०९६५), पनवेल (०२२- २७४६२६४५)

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - ೪

बालभारती इयत्ता ५ वी (कन्नड)

₹ 40.00

